

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ನವೆಂಬರ್ 30 ಭಾನುವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 222 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ರಾಜ್ಯದಲ್ಲಿ ಅಧಿಕಾರ ಹಸ್ತಾಂತರ ವಿಚಾರ

ವರಿಷ್ಠರ ನಿರ್ಧಾರಕ್ಕೆ ಬದ್ಧ

■ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಜಂಟಿ ಘೋಷಣೆ ■ ಉಪಹಾರ ಸಭೆ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಹೇಳಿಕೆ ■ ಪ್ರಸಕ್ತ ಗೊಂದಲಗಳಿಗೆ ತೆರೆ ಎಳೆಯುವ ಯತ್ನ ■ ಮಾಧ್ಯಮಗಳ ಮೇಲೆಯೇ ಹರಿಹಾಯ್ದ ಸಿಎಂ, ಡಿಸಿಎಂ

ಬೆಂಗಳೂರು,ನ.29(ಕೆಎಂಶಿ)– ಅಧಿಕಾರ ಹಸ್ತಾಂತರ ಕುರಿತಂತೆ ಕಾಂಗ್ರೆಸ್ ವರಿಷ್ಠರು ತೆಗೆದುಕೊಳ್ಳುವ ನಿರ್ಧಾರಕ್ಕೆ ನಾವು ಬದ್ಧ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ಘೋಷಿಸಿದ್ದಾರೆ.

ವರಿಷ್ಠರ ಆದೇಶದಂತೆ ಮುಖ್ಯಮಂತ್ರಿ ತಮ್ಮ ಕಾವೇರಿ ನಿವಾಸದಲ್ಲಿ ಬೆಳಗ್ಗೆ ಉಪಹಾರ ಸಭೆ ನಂತರ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಈ ಘೋಷಣೆ ಮಾಡಿದ್ದಲ್ಲದೆ, ನಾಳೆಯಿಂದ ನಮ್ಮಲ್ಲಿ ಯಾವುದೇ ಗೊಂದಲ ಇರುವುದಿಲ್ಲ, ಈಗಲೂ ಇಲ್ಲ. ಆದರೆ, ಗೊಂದಲಗಳನ್ನು ನೀವು ಸೃಷ್ಟಿ ಮಾಡುತ್ತಿದ್ದೀರಿ ಎಂದು ಉಭಯ ನಾಯಕರು ಮಾಧ್ಯಮಗಳ ಮೇಲೇ ಹರಿಹಾಯ್ದರು.

ಬೆಳಗಾವಿಯಲ್ಲಿ ವಿಧಾನಮಂಡಲದ ಚಳಿಗಾಲದ ಅಧಿವೇಶನ ಆರಂಭವಾಗುತ್ತಿರುವ ಹಿನ್ನೆಲೆಯಲ್ಲಿ ನಿಮ್ಮಲ್ಲಿನ ಗೊಂದಲ ಬಗೆಹರಿಸಿಕೊಳ್ಳಿ ಎಂದು ಎಐಸಿಸಿ ರಾಜಕೀಯ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ನಮ್ಮ ಪೊನ್ನಣ್ಣ ಅವರಿಗೆ ಆದೇಶಿಸಿದ್ದರು. ನಾನೇ, ಉಪಮುಖ್ಯಮಂತ್ರಿ ಅವರನ್ನು ಉಪಹಾರಕ್ಕೆ ಕರೆದು ಮುಖಾಮುಖಿ ಚರ್ಚಿಸಿ, ಭಿನ್ನಾಭಿಪ್ರಾಯ ಬಗೆಹರಿಸಿಕೊಳ್ಳುವಂತೆ ನೀಡಿದ ಆದೇಶದ ಮೇರೆಗೆ ತಿಂಡಿಯನ್ನೂ ತಿಂದೆವು. ಚರ್ಚೆಯನ್ನೂ ಮಾಡಿದೆವು ▶ 6ನೇ ಪುಟಕ್ಕೆ



ಉಪಹಾರ ಸಭೆ ನಂತರ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು. ಡಿಸಿಎಂ ಡಿ.ಕೆ.ಶಿವಕುಮಾರ್ ಇದ್ದಾರೆ.

‘ಕೊಟ್ಟ ಮಾತು’ ಕುರಿತ ಪ್ರಶ್ನೆಗೆ ಮಾಧ್ಯಮಗಳ ಮೇಲೆ ಸಿಎಂ ಸಿಡಿಮಿಡಿ

ಬೆಂಗಳೂರು,ನ.29–‘ಕೊಟ್ಟ ಮಾತು’ ಹಾಗೂ ಎರಡೂವರೆ ವರ್ಷದ ಅಧಿಕಾರ ಹಂಚಿಕೆ ಒಪ್ಪಂದ ಕುರಿತ ಪ್ರಶ್ನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾಧ್ಯಮಗಳ ಮೇಲೆ ಕೆಂಡಾಮಂಡಲಗೊಂಡ ಪ್ರಸಂಗ ಶನಿವಾರ ನಡೆಯಿತು.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಜೊತೆಗೆ ಬ್ರೇಕ್ ಫಾಸ್ಟ್ ಮೀಟಿಂಗ್ ಬಳಿಕ ಜಂಟಿ ಸುದ್ದಿಗೋಷ್ಠಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾತನಾಡಿದರು. ಈ ವೇಳೆ ಸುದ್ದಿಗಾರರು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಬಳಿ ಕೊಟ್ಟ ಮಾತಿನ ಕುರಿತು ಪ್ರಶ್ನೆ ಕೇಳಿದರು. ಈ ಪ್ರಶ್ನೆ ಕೇಳುತ್ತಿದ್ದಂತೆ ಮಾಧ್ಯಮಗಳ ಮೇಲೆ ತೀವ್ರವಾಗಿ ಹರಿಹಾಯ್ದ ಸಿದ್ದರಾಮಯ್ಯ ಅವರು, ಏನ್ ಕೊಟ್ಟ...? ಹೈಕಮಾಂಡ್ ಹೇಳಿದ್ದಂತೆ ಅಂತ ಹೇಳಿಲ್ವಾ? ಮತ್ತೇನು ಎಂದು ಸಿಟ್ಟಿನಿಂದ ಹೇಳಿದರು. ಈ ವೇಳೆ ಡಿ.ಕೆ.ಶಿವಕುಮಾರ್ ನಗುತ್ತಿದ್ದರು. ಬಳಿಕ ಮಾಧ್ಯಮಗಳು ಸರಣಿ ಪ್ರಶ್ನೆ ಕೇಳಿದಾಗ ಈ ವೇಳೆ ಗದ್ದಲ ಉಂಟಾಯಿತು. ▶ 6ನೇ ಪುಟಕ್ಕೆ

ವರಿಷ್ಠರು ಹೇಳಿದರೆ ಅಧಿಕಾರ ಹಸ್ತಾಂತರ

● ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾನ
● ಸಮಾಲೋಚನೆ ಬಳಿಕ ಒಂದೇ ಸಾಲಿನ ತೀರ್ಮಾನ

ಬೆಂಗಳೂರು, ನ.29(ಕೆಎಂಶಿ)–ಪಕ್ಷದ ವರಿಷ್ಠರು ಮುಖ್ಯಮಂತ್ರಿ ಸ್ಥಾನ ತೊರೆಯುವಂತೆ ಸೂಚಿಸಿದರೆ ತಮಗೆ ಅಧಿಕಾರ ಹಸ್ತಾಂತರ ಮಾಡುವುದಾಗಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ವಾಗ್ದಾನ ಮಾಡಿದ್ದಾರೆ.

ಎಐಸಿಸಿ ರಾಜಕೀಯ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಆದೇಶದಂತೆ ಸಿದ್ದರಾಮಯ್ಯ ಇಂದು ಬೆಳಗ್ಗೆ ಶಿವಕುಮಾರ್ ಅವರನ್ನು ಕಾವೇರಿ ನಿವಾಸಕ್ಕೆ ಆಹ್ವಾನಿಸಿ ಉಪಹಾರ ಕೂಟದ ನಂತರ ನಡೆದ ಮುಖಾಮುಖಿ ಚರ್ಚೆ ವೇಳೆ ಒಂದು ಸಾಲಿನ ಹೇಳಿಕೆ ನೀಡಿ ಮುಗಿಸಿದ್ದಾರೆ. ಇನ್ನು ಮುಂದೆ ಅಧಿಕಾರ ಹಸ್ತಾಂತರಕ್ಕೆ ಸಂಬಂಧಿಸಿದಂತೆ ನಾನಾಗಲೀ, ನೀನಾಗಲೀ, ಇಲ್ಲವೇ ಪಕ್ಷದ ಯಾವುದೇ ಮುಖಂಡರು ಸಾರ್ವಜನಿಕವಾಗಿ ಮಾತನಾಡದಂತೆ ನೋಡಿಕೊಳ್ಳುವ ಹೊಣೆ ನಿಮ್ಮದು ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

ಮುಖ್ಯಮಂತ್ರಿ ಮಾತಿಗೆ ಒಪ್ಪಿದ ಶಿವಕುಮಾರ್, ವರಿಷ್ಠರ ಅಣತಿಯಂತೆ ನಡೆದುಕೊಳ್ಳೋಣ. ಇಲ್ಲಿವರೆಗೆ ಆಗಿರುವ ಎಲ್ಲಾ ಗೊಂದಲಕ್ಕೆ ಇಂದೇ ತೆರೆ ಎಳೆಯೋಣ ಎಂದಿದ್ದಾರೆ. ಅಧಿಕಾರ ಹಸ್ತಾಂತರ ಮಾಡುವುದಿಲ್ಲ ಎಂಬುದಾಗಿ ನಾನು ಎಲ್ಲಿಯೂ ಹೇಳಿಲ್ಲ. ಅಂದೂ ಹೇಳಿದ್ದೇನೆ, ಇಂದೂ ಹೇಳುತ್ತೇನೆ. ವರಿಷ್ಠರ ತೀರ್ಮಾನವೇ ಅಂತಿಮ ಎಂದು ಡಿ.ಕೆ.ಶಿವಕುಮಾರ್‌ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ▶ 6ನೇ ಪುಟಕ್ಕೆ

ಖರ್ಗೆ–ರಾಹುಲ್ ಸುದೀರ್ಘ ಚರ್ಚೆ



ಬೆಂಗಳೂರು,ನ.29(ಕೆಎಂಶಿ)–ಕರ್ನಾಟಕ ಕಾಂಗ್ರೆಸ್‌ನಲ್ಲಿನ ಅಧಿಕಾರ ಹಂಚಿಕೆ ವಿಷಯಕ್ಕೆ ಸಂಬಂಧಿಸಿದಂತೆ ಪಕ್ಷದ ಅಧಿನಾಯಕ ರಾಹುಲ್ ಗಾಂಧಿ ದೆಹಲಿಯಲ್ಲಿಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿ ಸುದೀರ್ಘ ಚರ್ಚೆ ನಡೆಸಿದರು.

ದೆಹಲಿಯ ರಾಜಾಜಿ ಮಾರ್ಗದ ನಂಬರ್ 10ರಲ್ಲಿನ ಮಲ್ಲಿಕಾರ್ಜುನ ಖರ್ಗೆ ನಿವಾಸಕ್ಕೆ ಧಾವಿಸಿದ ರಾಹುಲ್ ಗಾಂಧಿ, ಸುಮಾರು 90 ನಿಮಿಷ ಸಮಾಲೋಚನೆ ನಡೆಸಿದರು.

ಅಧಿಕಾರ ಹಸ್ತಾಂತರಕ್ಕೆ ಸಂಬಂಧಿಸಿದಂತೆ ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ನಡುವಿನ ಚರ್ಚೆ ಮುಗಿಯುತ್ತಿದ್ದಂತೆ ದೆಹಲಿಯಲ್ಲಿ ವರಿಷ್ಠರು ಸಮಾಲೋಚಿಸಿದ್ದಾರೆ. ▶ 6ನೇ ಪುಟಕ್ಕೆ



ಬಿಚ್ಚು ನುಡಿ
ವಿಕ್ರಂ ಮುತ್ತಣ್ಣ

ಸಿದ್ದು ಈಗ ಸಿಂಹ
ಕಾರಣ...
ಕಾಂಗ್ರೆಸ್ ಹೈಕಮಾಂಡ್ ಕೇವಲ ಬೆಕ್ಕು
■ ಪುಟ–4

ಒಂದೇ ಹಾಳೆಯಲ್ಲಿ ಪಹಣಿ ಜತೆಗೇ ಪೋಡಿ, ಮ್ಯುಟೇಶನ್ ದಾಖಲೆ

ಬೆಂಗಳೂರು: ಪಹಣಿ, ಆಕಾರ ಬಂದ್, ಪೋಡಿ ನಕ್ಷೆ, ಮ್ಯುಟೇಶನ್ ಹೀಗೆ ನಾಲ್ಕು ದಾಖಲೆಯನ್ನೂ ಒಂದೇ ಹಾಳೆಯಲ್ಲಿ ಒದಗಿಸುವ ವ್ಯವಸ್ಥೆ ಜಾರಿಗೊಳಿಸಲು ಕಂದಾಯ ಇಲಾಖೆ ಸಿದ್ಧತೆ ಮಾಡಿಕೊಂಡಿದೆ. ಈ ದಾಖಲೆ ಪತ್ರಗಳು ಕಂದಾಯ ಇಲಾಖೆ ವಿವಿಧ ವಿಭಾಗಗಳಡಿಯಲ್ಲಿ ಬರುತ್ತವೆ. ಅವುಗಳನ್ನು ಬೇರೆ ಬೇರೆ ತಂತ್ರಾಂಶಗಳು ನಿರ್ವಹಣೆ ಮಾಡುತ್ತವೆ. ಈ ಎಲ್ಲ ವಿವರಗಳನ್ನು ಸಂಯೋಜಿಸುವ ಮತ್ತು ಒಂದೇ ಪುಟದಲ್ಲಿ ಮುದ್ರಣವಾಗುವಂತೆ ಭೂಮಿ–2 ತಂತ್ರಾಂಶ ಅಭಿವೃದ್ಧಿಪಡಿಸುವ ಕಾರ್ಯ ಪ್ರಗತಿಯಲ್ಲಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಕೇಂದ್ರ ಸರ್ಕಾರದ ಒನ್ ನೇಷನ್–ಒನ್ ಕಾರ್ಡ್ ಯೋಜನೆಯಡಿ

ರಾಜ್ಯದಲ್ಲಿ ನಾಳೆಯಿಂದ ಡಿಎಲ್, ಆರ್‌ಸಿ ಸ್ಮಾರ್ಟ್ ಕಾರ್ಡ್ ವಿತರಣೆ

ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಮಾಹಿತಿ



ರಾಮಲಿಂಗಾರೆಡ್ಡಿ

ಮೈಸೂರು,ನ.29(ಪಿಎಂ)– ರಾಜ್ಯದಲ್ಲಿ ಡಿ.1ರಿಂದ ಕೇಂದ್ರ ಸರ್ಕಾರದ ಒನ್ ನೇಷನ್–ಒನ್ ಕಾರ್ಡ್ ಯೋಜನೆಯಡಿ ವಾಹನ ಚಾಲನಾ ಪರವಾನಗಿ (ಡಿಎಲ್) ಹಾಗೂ ವಾಹನ ನೋಂದಣಿ ಪ್ರಮಾಣ ಪತ್ರದ (ಆರ್‌ಸಿ) ಸ್ಮಾರ್ಟ್ ಕಾರ್ಡ್‌ಗಳನ್ನು ನೀಡುವ ವ್ಯವಸ್ಥೆ ಜಾರಿಗೆ ಬರುತ್ತಿದೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಮೈಸೂರು ಸಾರಿಗೆ ಪಶ್ಚಿಮ ಪ್ರಾದೇಶಿಕ ಕಚೇರಿಯಲ್ಲಿ ಸಾರಿಗೆ ಇಲಾಖೆ (ಆರ್‌ಟಿಓ), ರಾಜ್ಯ ರಸ್ತೆ ಸಾರಿಗೆ ನಿಗಮದ ಮೈಸೂರು ನಗರ ಸಾರಿಗೆ ಮತ್ತು ಗ್ರಾಮಾಂತರ ಸಾರಿಗೆಯ (ಕೆಎಸ್‌ಆರ್‌ಟಿಸಿ) ಸಂಬಂಧ ಶನಿವಾರ ಹಮ್ಮಿಕೊಂಡಿದ್ದ ಪ್ರಗತಿ ಪರಿಶೀಲನಾ ಸಭೆ ಬಳಿಕ ಮಾಧ್ಯಮದರೊಂದಿಗೆ ಅವರು ಮಾತನಾಡಿದರು. ನಮ್ಮ ರಾಜ್ಯದಲ್ಲಿ ‘ಓನ್ ನೇಷನ್ ಒನ್ ಕಾರ್ಡ್’ ಯೋಜನೆಯನ್ನು ಡಿ.1ರಿಂದ ಅಳವಡಿಸಿಕೊಳ್ಳಲಾಗುತ್ತಿದೆ. ದೇಶದಲ್ಲಿ ಯಾವ್ಯಾವ ರಾಜ್ಯದಲ್ಲಿ ಇದನ್ನು ಅಳವಡಿಸಿಕೊಂಡಿದ್ದಾರೆಂಬ ಬಗ್ಗೆ ಮಾಹಿತಿ ಇಲ್ಲ. ನಮ್ಮ ರಾಜ್ಯದಲ್ಲಿ ಅಳವಡಿಸಿಕೊಳ್ಳಲಾಗುತ್ತಿದೆ. ಈ ಹೊಸ ಸ್ಮಾರ್ಟ್ ಕಾರ್ಡ್‌ಗಳು ▶ 6ನೇ ಪುಟಕ್ಕೆ


> **“ ಡಿ.1ರಿಂದ ನೋಂದಣಿಯಾಗುವ ವಾಹನಗಳು ಮತ್ತು ಚಾಲನಾ ಪರವಾನಗಿ (ಡಿಎಲ್) ತೆಗೆದುಕೊಳ್ಳುವ ಸಂಬಂಧ ಈ ಹೊಸ ವ್ಯವಸ್ಥೆ ಬರಲಿದ್ದು, ಈಗಾಗಲೇ ಆರ್‌ಸಿ ಮತ್ತು ಡಿಎಲ್ ಹೊಂದಿರುವವರು ಅದೇ ಹಳೇ ಮಾದರಿಗಳನ್ನೇ ಉಳಿಸಿಕೊಳ್ಳಬಹುದು. ಈ ಹೊಸ ಮಾದರಿ ಸ್ಮಾರ್ಟ್ ಕಾರ್ಡ್‌ಗಳನ್ನು ಪಡೆಯಬೇಕೆಂಬುದು ಕಡ್ಡಾಯವಲ್ಲ. ಈ ಸಂಬಂಧ ಸಾರಿಗೆ ಇಲಾಖೆ ಅಧಿಕಾರಿಗಳಿಗೆ ಸಲಹೆ ಸೂಚನೆ ನೀಡಲಾಗಿದೆ. –ರಾಮಲಿಂಗಾರೆಡ್ಡಿ.**

ಆರ್‌ಟಿಓ ಕಚೇರಿಗಳಲ್ಲಿ ಮಧ್ಯವರ್ತಿಗಳ ಪ್ರವೇಶಕ್ಕೆ ಅವಕಾಶ ನೀಡಬಾರದು

ಮೈಸೂರು,ನ.29(ಪಿಎಂ)–ಪ್ರಾದೇಶಿಕ ಸಾರಿಗೆ ಇಲಾಖೆ ಕಚೇರಿಗಳಲ್ಲಿ ಸಾರ್ವಜನಿಕರ ಕೆಲಸಗಳಿಗೆ ಮಧ್ಯವರ್ತಿಗಳು ಹಾಗೂ ವಾಹನ ಚಾಲನಾ ತರಬೇತಿ ಶಾಲೆಯವರು ಬರುವ ಚಾಳಿಯಿದ್ದು, ಇದಕ್ಕೆ ಅವಕಾಶ ನೀಡದಂತೆ ಅಧಿಕಾರಿಗಳು ಮತ್ತು ಸಿಬ್ಬಂದಿ ಎಚ್ಚರಿಕೆ ವಹಿಸಬೇಕೆಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಸೂಚನೆ ನೀಡಿದರು. ಪ್ರಾದೇಶಿಕ ಸಾರಿಗೆ ಇಲಾಖೆಯ 31 ಸೇವೆಗಳನ್ನು ಸಕಾಲದಲ್ಲಿ ಆನ್‌ಲೈನ್ ಮೂಲಕ ನೀಡಲಾಗುತ್ತಿದೆ. ಸಾರ್ವಜನಿಕರು ಕಚೇರಿಗೆ ಅಲೆದಾಡುವುದು ಬೇಕಿಲ್ಲ, ಸಕಾಲ ಯೋಜನೆಯನ್ನು ಸದುಪಯೋಗಕ್ಕೆ ಒತ್ತು ನೀಡಬೇಕೆಂದರು. ಮೈಸೂರು ನಗರ ಬೆಳೆಯುತ್ತಿದ್ದು, ಹೊರವಲಯದ ರಿಂಗ್ ರೋಡ್‌ಗಳಲ್ಲಿ ಬಸ್ ಹಾಗೂ ಟ್ರಿಪ್‌ಗಳ ಬೇಡಿಕೆ ಹೆಚ್ಚಾಗುತ್ತಿರುವ ಹಿನ್ನಲೆಯಲ್ಲಿ 4 ಹೊಸ ಬಸ್ ನಿಲ್ದಾಣಕ್ಕೆ ಸ್ಥಳ ಗುರುತಿಸಲು ಯೋಜಿಸಲಾಗುತ್ತಿದೆ ಎಂದರು.

ಮೈಸೂರು ಕೈಗಾರಿಕಾ ವಲಯದ ಬೆಮೆಲ್ ಆವರಣದಲ್ಲಿ ಹುಲಿ ಪ್ರತ್ಯಕ್ಷ

● ಭದ್ರತಾ ಸಿಬ್ಬಂದಿ ಕಾರಿನ ಬಳಿಯೇ ಸುಳಿದಾಟ ● ಅರಣ್ಯಾಧಿಕಾರಿಗಳಿಂದ ಪರಿಶೀಲನೆ: ಕಾರ್ಯಾಚರಣೆ ನಿರ್ಧಾರ



ಬೆಮೆಲ್ ಸುತ್ತಮುತ್ತ 15 ದಿನದಿಂದಲೇ ಹುಲಿ ಸಂಚಾರ

ಸುಮಾರು 500 ಎಕರೆ ವಿಸ್ತೀರ್ಣ ಹೊಂದಿರುವ ಬೆಮೆಲ್ ಕಾರ್ಖಾನೆ ಆವರಣ ಬಹುತೇಕ ಭಾಗ ದಟ್ಟ ಪೊದೆಗಳಿಂದ ಕೂಡಿದೆ. ಈ ಪ್ರದೇಶವು ಕೂರ್ಗಳ್ಳಿ ವನ್ಯಜೀವಿ ಪುನರ್ವಸತಿ ಕೇಂದ್ರಕ್ಕೆ ಹೊಂದಿಕೊಂಡಂತಿದೆ. ಬೆಮೆಲ್ ಕಾರ್ಖಾನೆ ಸುತ್ತಮುತ್ತಲ ಗ್ರಾಮಸ್ಥರು ಕಳೆದ 15 ದಿನಗಳ ಹಿಂದೆಯೇ ತಾವು ಹುಲಿಯನ್ನು ನೋಡಿದ್ದಾಗಿ ಅರಣ್ಯ ಇಲಾಖೆ ಅಧಿಕಾರಿಗಳಿಗೆ ತಿಳಿಸಿದ್ದರು. ಆದರೆ ಅಧಿಕಾರಿಗಳು ಪರಿಶೀಲನೆ ಮಾಡಿದಾಗ ಹುಲಿಯ ಚಲನ–ವಲನದ ಬಗ್ಗೆ ಯಾವುದೇ ಕುರುಹು ಪತ್ತೆಯಾಗಿರಲಿಲ್ಲ. ಇದೀಗ ಅಧಿಕಾರಿಗಳು ಅಂದು ಗ್ರಾಮಸ್ಥರು ಹುಲಿ ನೋಡಿದ್ದಾಗಿ ಹೇಳಿರುವುದು ನಿಜವಿರಬಹುದು ಎಂಬ ನಿರ್ಧಾರಕ್ಕೆ ಬಂದಿದ್ದಾರೆ. ▶ 6ನೇ ಪುಟಕ್ಕೆ

ಮೈಸೂರು, ನ.29(ಎಂಟಿವೈ)–ಮೈಸೂರು ಹೊರವಲಯದಲ್ಲಿ ಪದೇ ಪದೆ ಹುಲಿಗಳು ಕಾಣಿಸಿಕೊಳ್ಳುತ್ತಿರುವುದು ತೀವ್ರ ಆತಂಕಕ್ಕೆಡೆ ಮಾಡಿದೆ. ಶನಿವಾರ ಮುಂಜಾನೆ ಮೈಸೂರು ಹೊರ ವಲಯದ ಬೆಮೆಲ್ ಕಾರ್ಖಾನೆ ಆವರಣದಲ್ಲಿ ಹುಲಿ ಪ್ರತ್ಯಕ್ಷವಾಗಿದ್ದು, ಸುತ್ತಮುತ್ತಲಿನ ಗ್ರಾಮಸ್ಥರು ಹಾಗೂ ನಗರವಾಸಿಗಳು ಭಯಭೀತರಾಗುವಂತೆ ಮಾಡಿದೆ.

ಇಂದು ಮುಂಜಾನೆ 4 ಗಂಟೆ ಸುಮಾರಿನಲ್ಲಿ ಗಸ್ತು ತಿರುಗುತ್ತಿದ್ದ ಭದ್ರತಾ ಸಿಬ್ಬಂದಿಗೆ ಬೆಮೆಲ್ ಕಾರ್ಖಾನೆ ಆವರಣದ ಎಂಜಿನ್ ಸೆಕ್ಷನ್ ರಸ್ತೆಯಲ್ಲಿ ಹುಲಿ ಓಡಾಡುತ್ತಿರುವುದು ಕಂಡು ಬಂದಿದೆ. ಮೊದಲಿಗೆ ಚಿರತೆ ಇರಬಹುದು ಎಂದು ಭಾವಿಸಿದ ಸಿಬ್ಬಂದಿ, ರಕ್ಷಣೆ ದೃಷ್ಟಿಯಿಂದ ಕಾರಿನಲ್ಲಿ ನಿಧಾನವಾಗಿ ಅದೇ ರಸ್ತೆಯಲ್ಲಿ ತೆರಳಿದಾಗ ರಸ್ತೆಯಲ್ಲೇ ಓಡಾಡುತ್ತಿದ್ದ ಹುಲಿರಾಯ, ಯಾವುದೇ ಅಳುಕಿಲ್ಲದೆ ಕಾರಿನ ಸಮೀಪಕ್ಕೆ ಬಂದು ನಂತರ ದಟ್ಟ ಪೊದೆಯೊಳಗೆ ಕಣ್ಮರೆಯಾಗಿದೆ.

ಹುಲಿ ಚಲನ–ವಲನವನ್ನು ಕಾರಿನಲ್ಲಿ ತೆರಳಿದ ಭದ್ರತಾ ಸಿಬ್ಬಂದಿ, ತಮ್ಮ ಮೊಬೈಲ್‌ನಲ್ಲಿ ಸೆರೆ ಹಿಡಿದು ವೀಡಿಯೋವನ್ನು ಆಡಳಿತ ಮಂಡಳಿಯವರಿಗೆ ರವಾನಿಸಿದ್ದು, ಅವರು ಅರಣ್ಯ ಇಲಾಖೆ ಅಧಿಕಾರಿಗಳಿಗೆ ವಿಷಯ ಮುಟ್ಟಿಸಿದ್ದಾರೆ.

ಮಧ್ಯಾಹ್ನದ ವೇಳೆಗೆ ಬೆಮೆಲ್ ಆವರಣಕ್ಕೆ ಭೇಟಿ ನೀಡಿದ ಡಿಸಿಎಫ್ ಕೆ.ಪರಮೇಶ್, ಎಸಿಎಫ್ ರವೀಂದ್ರ, ಆರ್‌ಎಫ್‌ಓ ಸಂತೋಷ್ ಹೂಗಾರ್ ಇನ್ನಿತರರು ಪರಿಶೀಲನೆ ನಡೆಸಿದ್ದಾರೆ. ಆದರೆ ಹುಲಿಯು ಸುಳಿವು ಸಿಕ್ಕಿಲ್ಲ. ▶ 6ನೇ ಪುಟಕ್ಕೆ

ಮೈಸೂರು ಅವಧೂತ ದತ್ತ ಪೀಠದಲ್ಲಿ ದತ್ತಾತ್ರೇಯ ಜಯಂತಿ ಮಹೋತ್ಸವ



ಮೈಸೂರು,ನ.29– ಮೈಸೂರಿನ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಅವಧೂತ ದತ್ತ ಪೀಠದಲ್ಲಿ 2025ರ ಸಾಲಿನ ದತ್ತಾತ್ರೇಯ ಜಯಂತಿ ಮಹೋತ್ಸವವು ನ.30ರಿಂದ ಡಿಸೆಂಬರ್ 8ರವರೆಗೆ ವಿಜೃಂಭಣೆಯಿಂದ ಜರುಗಲಿದೆ. ಪೂಜ್ಯ ಶ್ರೀಗಳ ಸಾನ್ನಿಧ್ಯದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ.

ನ.30: ಬೆಳಿಗ್ಗೆ 10 ಗಂಟೆಗೆ ಅಖಿಲ ಭಾರತ ಜ್ಞಾನ ಬೋಧ ಸಭಾ ಸಮ್ಮೇಳನ.

ಡಿ.1: ಸೋಮವಾರ (ಶ್ರೀ ಗೀತಾ ಜಯಂತಿ): ಬೆಳಿಗ್ಗೆ 10 ಗಂಟೆಗೆ ನಾದ ಮಂಟಪದಲ್ಲಿ ಸಂಪೂರ್ಣ ಭಗವದ್ಗೀತಾ ಪಾರಾಯಣ ಹಮ್ಮಿಕೊಳ್ಳಲಾಗಿದೆ. ಅಂದು ಮಧ್ಯಾಹ್ನ 3 ಗಂಟೆಗೆ ಭಗವದ್ಗೀತೆ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ಹಾಗೂ ಪದಕ ವಿತರಣಾ ಸಮಾರಂಭ ನಡೆಯಲಿದೆ.

ಡಿ.2: ಬೆಳಿಗ್ಗೆ 9 ಗಂಟೆಗೆ ಶ್ರೀ ಕಾಲಾಗ್ನಿ ಶಮನ ದತ್ತಾತ್ರೇಯ ಸ್ವಾಮಿಗೆ ಮಂಟಪೋತ್ಸವ ಹಾಗೂ ಪಂಚಾಮೃತ ಅಭಿಷೇಕ, ಬೆಳಿಗ್ಗೆ 10ಕ್ಕೆ ಶ್ರೀ ಚಕ್ರಪೂಜೆ, ದತ್ತಾತ್ರೇಯ ಹೋಮದ ಪೂರ್ಣಾಹುತಿ ನೆರವೇರಲಿದೆ. ಸಂಜೆ 6 ಗಂಟೆಗೆ ನಾದ ಮಂಟಪದಲ್ಲಿ ದಿವ್ಯ ನಾಮ ಸಂಕೀರ್ತನೆ ಇರಲಿದೆ.

ಡಿ.3 (ಶ್ರೀ ಹನುಮಾನ್ ಜಯಂತಿ): ಬೆಳಿಗ್ಗೆ 7 ಗಂಟೆಗೆ ಕಾರ್ಯಸಿದ್ಧಿ ಹನುಮಾನ್ ಸ್ವಾಮಿಗೆ 13ನೇ ವಾರ್ಷಿಕ ಅಭಿಷೇಕ, ಬೆಳಿಗ್ಗೆ 11 ಗಂಟೆಗೆ ಹನುಮದ್ ವ್ರತ ಪೂಜೆ, ಸಂಜೆ 5 ಗಂಟೆಗೆ ರಥೋತ್ಸವ, ಸಂಜೆ 6 ಗಂಟೆಗೆ ಸನಾತನ ದತ್ತ ಬಂಧು ಮಹೋತ್ಸವ ಮತ್ತು ರಾತ್ರಿ 8 ಗಂಟೆಗೆ ಹನುಮಾನ್ ದೇವಾಲಯದಲ್ಲಿ ಲಕ್ಷ ದೀಪೋತ್ಸವ ಜರುಗಲಿದೆ.

ಡಿ. 4, ಗುರುವಾರ (ಹುಣ್ಣಿಮೆ – ಶ್ರೀ ದತ್ತಾತ್ರೇಯ ಜಯಂತಿ): ಅಂದು ಉತ್ಸವದ ಪ್ರಮುಖ ದಿನವಾಗಿದ್ದು, ಬೆಳಿಗ್ಗೆ 9 ಗಂಟೆಗೆ ಶ್ರೀ ಕಾಲಾಗ್ನಿ ಶಮನ ದತ್ತಾತ್ರೇಯ ಸ್ವಾಮಿಗೆ ತೈಲಾಭಿಷೇಕ, ಬೆಳಿಗ್ಗೆ 10 ಗಂಟೆಗೆ ಭಕ್ತಾದಿಗಳಿಂದ ಸಹಸ್ರ ಕಳಶ ತೈಲಾಭಿಷೇಕ ನೆರವೇರಲಿದೆ. ಸಂಜೆ 6 ಗಂಟೆಗೆ ಸಪ್ತರ್ಷಿ ಸರೋವರದಲ್ಲಿ ಶ್ರೀ ದತ್ತಾತ್ರೇಯ ಸ್ವಾಮಿಯ ಪಲ್ಲಕ್ಕಿ ಉತ್ಸವ ಮತ್ತು ತೆಪ್ಪೋತ್ಸವ ನಡೆಯಲಿದ್ದು, ರಾತ್ರಿ 8 ಗಂಟೆಗೆ ಕಾಕಾರತಿ ಹಾಗೂ ಡೋಲೋತ್ಸವದೊಂದಿಗೆ ಸಂಪನ್ನಗೊಳ್ಳಲಿದೆ.

ಡಿ. 5: ಬೆಳಿಗ್ಗೆ 9 ಗಂಟೆಗೆ ಮಂತ್ರ ಉಪದೇಶ ಕಾರ್ಯಕ್ರಮ ನಡೆಯಲಿದೆ.

ಡಿ.6: ಶ್ರೀ ರಾಜರಾಜೇಶ್ವರಿ ದೇವಾಲಯದ 2ನೇ ವಾರ್ಷಿಕೋತ್ಸವ ಆಚರಿಸಲಾಗುತ್ತದೆ. ಡಿಸೆಂಬರ್ 6, 7 ಮತ್ತು 8ರಂದು ವಾರ್ಷಿಕ ಶಾಸ್ತ್ರ ಸಭೆ ನಡೆಯಲಿದೆ ಎಂದು ಆಶ್ರಮದ ಪ್ರಕಟಣೆ ತಿಳಿಸಿದೆ.

ಜಿಟಿಡಿಗೆ ಅಭಿನಂದನೆ...



ಮೈಸೂರಿನ ಏಕಲವ್ಯನಗರದಲ್ಲಿ ಅಲೆಮಾರಿ ಸಮುದಾಯಗಳಿಂದ ಶಾಸಕ ಜಿ.ಟಿ. ದೇವೇಗೌಡರನ್ನು ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಅಭಿನಂದಿಸಲಾಯಿತು. ದಸಂಸ ಮುಖಂಡ ನಿಂಗರಾಜ್ ಮಲ್ಲಾಡಿ, ಜಿಪಂ ಮಾಜಿ ಸದಸ್ಯ ನಾಗನಹಳ್ಳಿ ದಿನೇಶ್, ತಾಪಂ ಮಾಜಿ ಅಧ್ಯಕ್ಷ ಕುಮಾರ್ ಬೆಲವತ್ತ, ನಾಗನಹಳ್ಳಿ ಗ್ರಾಪಂ ಅಧ್ಯಕ್ಷೆ ರಶ್ಮಿ ಮಂಜುನಾಥ್, ಪಿ.ಡಿ.ಓ ಭವ್ಯ, ಕೊಳಗೇರಿ ಅಭಿವೃದ್ಧಿ ಮಂಡಳಿ ಅಧಿಕಾರಿಗಳಾದ ನುಸ್ರತ್ ಬಾನು, ರಾಮಚಂದ್ರಪ್ಪ, ರಾಯ್, ಲಕ್ಷ್ಮೀಶ, ಗ್ರಾಪಂ ಸದಸ್ಯರಾದ ತೇಜಸ್ವಿನಿ ಶ್ರೀಧರ್, ಮಂಗಳಾ ವೆಂಕಟೇಶ್, ರೇವಣ್ಣ, ರಾಮಸ್ವಾಮಿ, ದಸಂಸದ ಕೆ.ನಂಜಪ್ಪ ಬಸವನಗುಡಿ, ಹೆಚ್.ಬಿ.ದಿವಾಕರ್, ಕಿರಿಜಾಜಿ ಗಜೇಂದ್ರ, ಪುಟ್ಟಲಕ್ಷ್ಮಮ್ಮ, ಅಲೆಮಾರಿ ಸಂಘದ ಅಧ್ಯಕ್ಷ ವೈ.ಕುಮಾರ್, ಶ್ಯಾದನಹಳ್ಳಿ ಮುಖಂಡ ತಮ್ಮಯ್ಯ, ಏಕಲವ್ಯನಗರದ ಯುವ ಮುಖಂಡರಾದ ಶ್ರೀಧರ, ನಂದನ್ ಕುಮಾರ್, ಸುರೇಶ, ನವೀನ, ಶ್ರೀನಿವಾಸ್, ದಿನೇಶ, ಸಂತೋಷ, ಸತೀಶ, ನವೀನ, ಪ್ರವೀಣ, ಶಿವು, ರವಿ, ಶಿವು ಅಣ್ಣಯ್ಯಪ್ಪ, ನಿಂಗರಾಜು, ಬಸವರಾಜು, ಮಂಜಪ್ಪ, ಮಲ್ಲೇಶ, ರಾಜಪ್ಪ ಉಪಸ್ಥಿತರಿದ್ದರು.

ಎಸ್‌ಸಿ, ಎಸ್‌ಟಿ ಗುತ್ತಿಗೆ ಕಾಮಗಾರಿ ಬೇರೆಯವರಿಗೆ ವರ್ಗಾಯಿಸಿದ ಶಾಸಕ

ಅನಿಲ್ ಚಿಕ್ಕಮಾದುಗೆ ಹೈಕೋರ್ಟ್ ನೋಟಿಸ್


ಮೈಸೂರು,ನ.29(ಜಿಎ)–ಎಸ್‌ಸಿ, ಎಸ್‌ಟಿ ಗುತ್ತಿಗೆದಾರರಿಗೆ ಬಂದಿದ್ದ ಟೆಂಡರ್ ಅನ್ನು ಶಾಸಕ ಅನಿಲ್ ಚಿಕ್ಕಮಾದು ವರ್ಗಾವಣೆ ಮಾಡಿದ ಹಿನ್ನೆಲೆಯಲ್ಲಿ ಹೈಕೋರ್ಟ್ ತಡೆಯಾಜ್ಞೆ ನೀಡಿ ಶಾಸಕರಿಗೆ ನೋಟಿಸ್ ಮಂಜೂರು ಮಾಡಿದೆ ಎಂದು ಹೆಚ್.ಡಿ.ಕೋಟೆ, ಸರಗೂರು ತಾಲೂಕು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಸಿ.ತಿಮ್ಮಯ್ಯ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹೆಚ್.ಡಿ.ಕೋಟೆ, ಸರಗೂರು ತಾಲೂಕಿನಲ್ಲಿ ಮಂಜೂರಾದ ಗುತ್ತಿಗೆ ಕಾಮಗಾರಿಗಳನ್ನು ಎಸ್‌ಸಿ, ಎಸ್‌ಟಿ ಕೋಟಾ ಅಡಿಯಲ್ಲಿ ಗುತ್ತಿಗೆದಾರರಿಗೆ ಮಂಜೂರು ಮಾಡದೇ ಸಚಿವ ಪ್ರಿಯಾಂಕ್ ಖರ್ಗೆ ಪತ್ರ ಬರೆದು ಶಾಸಕ ಅನಿಲ್ ಚಿಕ್ಕಮಾದು ಲ್ಯಾಂಡ್ ಆರ್ಮಿ, ನಿರ್ಮಿತಿ ಕೇಂದ್ರಕ್ಕೆ ವರ್ಗಾವಣೆ ಮಾಡುವ ಮೂಲಕ ಅನ್ಯಾಯ ಎಸಗುತ್ತಿದ್ದರು ಎಂದರು.

ಹೀಗಾಗಿ ತಾವು ಹೈಕೋರ್ಟ್ ಮೊರೆ ಹೋಗ ಬೇಕಾಯಿತು. ನ್ಯಾಯಾಲಯ ತಡೆಯಾಜ್ಞೆ ನೀಡಿ, ಶಾಸಕರು, ಮೂವರು ಜಿಪಂ ಅಧಿಕಾರಿಗಳು ಹಾಗೂ ಕೆಆರ್‌ಐಡಿಎಲ್‌ನ ಇನ್ನಿಬ್ಬರು ಅಧಿಕಾರಿಗಳಿಗೆ ಡಿ.15ರಂದು ನ್ಯಾಯಾಲಯಕ್ಕೆ ಹಾಜರಾಗುವಂತೆ ನೋಟಿಸ್ ಮಂಜೂರು ಮಾಡಿದೆ ಎಂದರು.

ನ್ಯಾಯಾಲಯ ತಡೆಯಾಜ್ಞೆ ಮತ್ತು ನೋಟಿಸ್ ಜಾರಿಯಿಂದ ಎರಡೂ ತಾಲೂಕಿನ ಗುತ್ತಿಗೆದಾರರಿಗೆ ಒಂದು ಹಂತದ ಗೆಲುವು ಸಿಕ್ಕಿದೆ. ಹೀಗಾಗಿ ಶಾಸಕರು ಎಸ್‌ಸಿ, ಎಸ್‌ಟಿ ಗುತ್ತಿಗೆದಾರರಿಗೆ ಮಾಡಿರುವ ಮೋಸ, ಇದಕ್ಕೆ ಪ್ರತಿಯಾಗಿ ಅವರ ಶಾಸಕತ್ವ ರದ್ದುಪಡಿಸುವವರೆಗೆ ಹೋರಾಟ ನಡೆಸಲಿದೆ ಎಂದರು. ಎಸ್‌ಸಿ, ಎಸ್‌ಟಿ ಗುತ್ತಿಗೆದಾರರಿಗೆ ಅನ್ಯಾಯವಾಗಿದೆ. ಇವರಿಗೆ ಕಾಮಗಾರಿ ಸಿಗದಿರಲೆಂದು ಉದ್ದೇಶಪೂರ್ವಕವಾಗಿ ಕೆಆರ್‌ಐಡಿಎಲ್ ಸಂಸ್ಥೆಗೆ ಕಾಮಗಾರಿ ನೀಡಲಾಗಿದೆ. ಎಸ್‌ಸಿ, ಎಸ್‌ಟಿ ಗುತ್ತಿಗೆದಾರರಿಗೆ ಮೀಸಲಾತಿ ನೀಡದೇ ಅನ್ಯಾಯ ಎಸಗಲಾಗಿದೆ ಎಂದು ದೂರಿದರು. ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಕಾಂತರಾಜು, ಕೆ.ಎನ್.ದೊರೆರಾಜು, ಕೆ.ಟಿ.ಹರೀಶ್, ಶಿವಲಿಂಗಯ್ಯ ಉಪಸ್ಥಿತರಿದ್ದರು.

ಮಹಾದಾನಿ ಸಿ.ಕೆ.ಅಪ್ಪಯ್ಯ ಇನ್ನಿಲ್ಲ



ಮೈಸೂರು, ನ. 29– ಮೂಲತಃ ಪೊನ್ನಂಪೇಟೆ ತಾಲೂಕು ಹುದ್ದೂರು ಗ್ರಾಮದವರಾಗಿದ್ದು, ಮೈಸೂರಿನ ಕನಕದಾಸನಗರ ತ್ರಿವೇಣಿ ಸರ್ಕಲ್ ಬಳಿ ವಾಸವಿದ್ದ ಮಹಾದಾನಿಗಳಾದ ಚೋಡುಮಾಡ ಕೆ.ಅಪ್ಪಯ್ಯ(90) ಅವರು ಶನಿವಾರ ನಿಧನರಾದರು.

ಮೃತರು ಪತ್ನಿ ಶಾಂತಿ ಅಪ್ಪಯ್ಯ (ತಾಮನೆ ಮನೆಯಪಂಡ) ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದು, ಇವರ ಅಂತ್ಯಕ್ರಿಯೆ ನಾಳೆ (ಭಾನುವಾರ) ಮಧ್ಯಾಹ್ನ 12.30ಕ್ಕೆ ವಿಜಯನಗರದಲ್ಲಿರುವ ಮುಕ್ತಿಧಾಮದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಹಾದಾನಿಗಳಾದ ಇವರು ಪೊನ್ನಂಪೇಟೆಯ ಕೂರ್ಗ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಗೆ 11.5 ಎಕರೆ ಭೂಮಿ ಜೊತೆಗೆ 1.5 ಕೋಟಿ ರೂ. ದೇಣಿಗೆ ನೀಡಿದ್ದಾರೆ. ಅಲ್ಲದೇ, 5 ಲಕ್ಷ ರೂ. ಠೇವಣಿ ಇಟ್ಟಿದ್ದು, ಅದರಿಂದ ಬರುವ ಬಡ್ಡಿಯಿಂದ ಅಲ್ಲಿನ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಗುತ್ತದೆ. ಮೈಸೂರಿನ ಶ್ರೀ ಕಾವೇರಿ ಕೊಡಗು ಮಹಿಳಾ ಸಮಾಜಕ್ಕೆ 11 ಲಕ್ಷ ರೂ., ಮೈಸೂರಿನ ಕೊಡವ ದೀನಬಂಧು ಚಾರಿಟಬಲ್ ಟ್ರಸ್ಟ್, ಪೊನ್ನಂಪೇಟೆ ಕೊಡವ ಸಮಾಜ ಮತ್ತು ಗೋಣಿಕೊಪ್ಪ ಕೊಡವ ಸಮಾಜಕ್ಕೆ ತಲಾ 5 ಲಕ್ಷ ರೂ.ಗಳನ್ನು ದೇಣಿಗೆಯಾಗಿ ನೀಡಿದ್ದಾರೆ. ಈ ಎಲ್ಲಾ ದಾನ–ಧರ್ಮಗಳನ್ನು ಅವರು ತಮ್ಮ ಸಿ.ಕೆ.ಅಪ್ಪಯ್ಯ ಮತ್ತು ಪಾರ್ವತಿ ಚಾರಿಟಬಲ್ ಟ್ರಸ್ಟ್ ವತಿಯಿಂದ ನೀಡಿದ್ದಾರೆ.

ಭವಿಷ್ಯದಲ್ಲಿ ಮಧುಮೇಹವನ್ನೂ ಗುಣಪಡಿಸಬಹುದು!



ಮೈಸೂರು ಜೆಎಸ್‌ಎಸ್ ಆಸ್ಪತ್ರೆಯ ಮಕ್ಕಳ ವಿಭಾಗದಿಂದ ಏರ್ಪಡಿಸಿದ್ದ ವಿಶ್ವ ಮಧುಮೇಹ ದಿನಾಚರಣೆಯನ್ನು ಡಾ.ಕೆ.ಎಂ. ಪ್ರಸನ್ನಕುಮಾರ್ ಉದ್ಘಾಟಿಸಿದರು.

ಮೈಸೂರು, ನ. 29–ಭವಿಷ್ಯತ್ತಿನಲ್ಲಿ ಹಲವಾರು ಸಂಶೋಧನೆ ಮತ್ತು ಆವಿಷ್ಕಾರಗಳಿಂದ ಮಧುಮೇಹವನ್ನು ಗುಣಪಡಿಸಬಹುದು ಎಂದು ಬೆಂಗಳೂರಿನ ಎಂಡೋಕ್ರೈನಾಲಜಿ ಮತ್ತು ಡಯಾಬಿಟಿಸ್ ರಿಸರ್ಚ್ ಟ್ರಸ್ಟ್‌ನ ಮುಖ್ಯಸ್ಥ ಡಾ.ಕೆ.ಎಂ. ಪ್ರಸನ್ನಕುಮಾರ್ ಹೇಳಿದರು.

ಮೈಸೂರು ಜೆಎಸ್‌ಎಸ್ ಆಸ್ಪತ್ರೆಯ ಮಕ್ಕಳ ವಿಭಾಗದ ವತಿಯಿಂದ ಏರ್ಪಡಿಸಿದ್ದ ವಿಶ್ವ ಮಧುಮೇಹ ದಿನಾಚರಣೆ ಮತ್ತು ಮಧುಮೇಹ ಖಾಯಿಲೆ ಇರುವ, ಆರ್ಥಿಕವಾಗಿ ಹಿಂದುಳಿದ ಮಕ್ಕಳಿಗೆ ಉಚಿತ ಔಷಧಿ ವಿತರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಹಿಂದೆ ಮಧುಮೇಹ ಬಂದರೆ 6 ತಿಂಗಳು ಮಾತ್ರ ಬದುಕಬಹುದಿತ್ತು ಇಂದು ಹಲವಾರು ಸಂಶೋಧನೆಗಳ ಫಲವಾಗಿ ಇನ್ಸುಲಿನ್ ಔಷಧಿಗಳು ಮಾತ್ರೆಗಳಿಂದ 60 ವರ್ಷಕ್ಕಿಂತ ಹೆಚ್ಚು ಬದುಕಬಹುದು ಎಂದರು. ಮಧುಮೇಹ ಇರುವ ಮಕ್ಕಳಿಗೆ ಪೋಷಕರು, ತಂದೆತಾಯಿಗಳು ಧೈರ್ಯವಾಗಿ ಮಕ್ಕಳಿಗೆ ಸಮಯಕ್ಕೆ ಸರಿಯಾಗಿ ಔಷಧಿ ಮತ್ತು ಇನ್ಸುಲಿನ್ ನೀಡಬೇಕು. ಶಾಲೆಯಲ್ಲಿ ಶಿಕ್ಷಕರಿಗೆ ಮತ್ತು ಅಕ್ಕಪಕ್ಕದವರಿಗೆ ತಮ್ಮ ಮಕ್ಕಳಿಗೆ ಸಕ್ಕರೆ ಖಾಯಿಲೆ ಇರುವುದನ್ನು ತಿಳಿಸಬೇಕು. ಸಾಮಾನ್ಯ ಮಕ್ಕಳಂತೆ ಅವರಿಗೂ ಕೂಡ ದೈಹಿಕ ವ್ಯಾಯಾಮ ಕ್ರೀಡೆಗಳಿಗೆ ಪ್ರೋತ್ಸಾಹ ನೀಡಬೇಕು ಆರೋಗ್ಯದ ಜೊತೆಗೆ ಮಕ್ಕಳ ಶಿಕ್ಷಣಕ್ಕೆ ಆದ್ಯತೆ ನೀಡಬೇಕು ಎಂದರು.

ಜೆಎಸ್‌ಎಸ್ ಆಸ್ಪತ್ರೆ ನಿರ್ದೇಶಕ ಡಾ.ಸಿ.ಪಿ. ಮಧು ಮಾತನಾಡಿ, ಹಿಂದೆ ಮಧುಮೇಹ ಬಂದರೆ ಚಿಕಿತ್ಸೆ ಕಷ್ಟ ಇತ್ತು ಈಗ ಉತ್ತಮ ಔಷಧಿಗಳ ಆವಿಷ್ಕಾರದಿಂದ ಇನ್ಸುಲಿನ್ ಲಭ್ಯತೆಯಿಂದ ಸಾಮಾನ್ಯರಂತೆ ಎಲ್ಲಾ ಕೆಲಸಗಳನ್ನು ಮಾಡುತ್ತ ಬದುಕಬಹುದು. ಮಕ್ಕಳಿಗೆ ಮಧುಮೇಹ ಬಂದರೆ ಪೋಷಕರು ಧೃತಿಗೆಡದೆ ಅವರಿಗೆ ಚಿಕಿತ್ಸೆ, ಧೈರ್ಯ ಮತ್ತು ಪ್ರೋತ್ಸಾಹ ಕೊಡಬೇಕು ಎಂದರು.

ಜೆಎಸ್‌ಎಸ್ ಮೆಡಿಕಲ್ ಕಾಲೇಜಿನ ಉಪಪ್ರಾಂಶುಪಾಲ ಡಾ.ಎಂ. ಮಾಂತಪ್ಪ ಮಾತನಾಡಿ, ಮನುಷ್ಯನಿಗೆ ಜೀವ ಇರುವವರೆಗೂ ಒಂದಲ್ಲ ಒಂದು ಖಾಯಿಲೆ ಬಂದೇ ಬರುತ್ತದೆ ಅದಕ್ಕೆ ಚಿಂತೆಮಾಡಬಾರದು, ಖಾಯಿಲೆ ಬಂದಮೇಲೆ ಅದಕ್ಕೆ ಯಾವ ರೀತಿ ಚಿಕಿತ್ಸೆ ನೀಡಬೇಕು ಎಂಬುದರ ಬಗ್ಗೆ ಯೋಚಿಸಬೇಕು ಎಂದರು.

ಇದೇ ವೇಳೆ ಮಧುಮೇಹ ಹೊಂದಿರುವ ಮಕ್ಕಳಿಗೆ ಬೆಂಗಳೂರಿನ ಎಂಡೋಕ್ರೈನಾಲಜಿ ಮತ್ತು ಡಯಾಬಿಟಿಸ್ ರಿಸರ್ಚ್ ಟ್ರಸ್ಟ್ ವತಿಯಿಂದ ಡಯಾಬಿಟಿಸ್ ಔಷಧಿಗಳು, ಇನ್ಸುಲಿನ್‌ಗಳನ್ನು ಉಚಿತವಾಗಿ ನೀಡಲಾಯಿತು. ಈ ಸಂಸ್ಥೆಯು ಕರ್ನಾಟಕದಲ್ಲಿ 65 ಸೆಂಟರ್‌ಗಳನ್ನು ಹೊಂದಿದ್ದು ರಾಜ್ಯಾದ್ಯಂತ ಸುಮಾರು 4000 ಮಧುಮೇಹ ಹೊಂದಿರುವ ಹಾಗೂ ಆರ್ಥಿಕವಾಗಿ ಹಿಂದುಳಿದಿರುವ ಮಕ್ಕಳಿಗೆ ಉಚಿತವಾಗಿ ಇನ್ಸುಲಿನ್ ಔಷಧಿಗಳನ್ನು ನೀಡಲಾಗುತ್ತಿದೆ.

ಮಕ್ಕಳ ವಿಭಾಗದ ಹಿರಿಯ ಪ್ರಾಧ್ಯಾಪಕ ಡಾ.ಎಂ.ಡಿ.ರವಿ, ಮಕ್ಕಳ ವಿಭಾಗದ ಮುಖ್ಯಸ್ಥ ಡಾ.ಎಸ್.ಎನ್.ಪ್ರಶಾಂತ್, ಡಾ.ರಶ್ಮಿ, ಆಸ್ಪತ್ರೆಯ ವೈದ್ಯರು ಹಾಗೂ ಮಕ್ಕಳ ಪೋಷಕರು ಪಾಲ್ಗೊಂಡಿದ್ದರು.

ನಾಳೆ ಐಎಎಸ್, ಕೆಎಎಸ್ ಪರೀಕ್ಷಾ ಉಚಿತ ತರಬೇತಿ ಶಿಬಿರ ಸಮಾರೋಪ

ಮೈಸೂರು: ಜ್ಞಾನಬುತ್ತಿ ಸಂಸ್ಥೆಯ ವತಿಯಿಂದ ಡಿ.1ರಂದು ಸಂಜೆ 6 ಗಂಟೆಗೆ ಲಕ್ಷ್ಮೀಪುರಂ ಸರ್ಕಾರಿ ಪ್ರೌಢಶಾಲೆಯಲ್ಲಿ ನಡೆಯುತ್ತಿರುವ ಐಎಎಸ್, ಕೆಎಎಸ್ ಪರೀಕ್ಷಾ ಉಚಿತ ತರಬೇತಿ ಶಿಬಿರದ ಸಮಾರೋಪ ಸಮಾರಂಭದಲ್ಲಿ ಕರ್ನಾಟಕ ಪೊಲೀಸ್ ಅಕಾಡೆಮಿ ನಿರ್ದೇಶಕ ಡಾ.ಎಸ್.ಎಲ್. ಚನ್ನಬಸವಣ್ಣ ಅಧ್ಯಯನ ಪುಸ್ತಕ ಬಿಡುಗಡೆ ಮಾಡುವರು. ಹಿರಿಯ ಕೆಎಎಸ್ ಅಧಿಕಾರಿ ಮೈಸೂರು ವಿಭಾಗದ ಹೆಚ್ಚುವರಿ ಪ್ರಾದೇಶಿಕ ಆಯುಕ್ತೆ ಶ್ರೀಮತಿ ಕವಿತಾ ರಾಜಾರಾಂ ಶುಭ ಹಾರೈಸುವರು. ವಾಗ್ಮಿ, ಚಿಂತಕ ಪ್ರೊ.ಎಂ.ಕೃಷ್ಣೇಗೌಡ ಅಧ್ಯಕ್ಷತೆ ವಹಿಸುವರು. ಕಾರ್ಯಕ್ರಮದಲ್ಲಿ ವಿಶೇಷ ಅತಿಥಿಗಳಾಗಿ ಟಿ.ಸಿ.ಸುದೀಪ, ಪ್ರೊ. ಹೊನ್ನಯ್ಯ ಪ್ರೊ.ಈ.ಶಿವಪ್ರಸಾದ್, ಪ್ರೊ.ವಿ. ಜಯಪ್ರಕಾಶ್, ಎಸ್.ಗಣೇಶ್, ರಾಜೀವ್ ಶರ್ಮ, ಮಂಜುನಾಥ್ ಮಹದೇವಪ್ಪ, ಶರದ್‌ರಾವ್, ಡಾ.ಕೃಷ್ಣಕುಮಾರ್, ನಾಗರಾಜು ಬೀಜಗನಹಳ್ಳಿ, ರೋಹನ್ ರವಿಕುಮಾರ್, ಡಾ.ಕೃಷ್ಣ, ಡಾ.ಮೋಹನ್, ಡಾ.ಕೃಪ.ಗಣೇಶ, ಡಾ.ಪ್ರಸನ್ನ ಪ್ರೊ.ಕಿರಣ್ ಕೌಶಿಕ್, ನಾಗೇಂದ್ರ ಭಾಗವಹಿಸುವರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

30.11.2025 ಭಾನುವಾರ, ಮಳೆ ನಕ್ಷತ್ರ: ಅನೂರಾಧ, 20.11.2025 ರಿಂದ 02.12.2025 ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಶುಕ್ಲ ಪಕ್ಷ, ತಿಥಿ: ದಶಮಿ, ನಕ್ಷತ್ರ: ಉಭಾ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

- **ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್:** ಬ್ರೈಡಲ್ ಜುವೆಲರಿ ಶೋ. ಸ್ಥಳ: ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್, ಬಿ.ಎನ್.ರಸ್ತೆ. ಬೆಳಗ್ಗೆ 10 ರಿಂದ.
- **ರಾಮ್‌ಸನ್ಸ್ ಬೊಂಬೆ ಮನೆ :** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ. ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ. ಬೆಳಗ್ಗೆ 10 ರಿಂದ.
- **ಪರಿವರ್ತನ ಅಕಾಡೆಮಿ :** ವಿಶ್ವ ಓಜೋನ್ ದಿನಾಚರಣೆ ಅಂಗವಾಗಿ ಶಾಲಾ ಮಕ್ಕಳಿಗೆ ಸ್ಥಳದಲ್ಲೇ ಚಿತ್ರ ಬಿಡಿಸುವ ಸ್ಪರ್ಧೆ, ಸ್ಥಳ: ಅಕಾಡೆಮಿ ಆವರಣ, ಮೇಟಗಳ್ಳಿ, ಬೆಳಗ್ಗೆ 10.30 ರಿಂದ.
- **ಸುರುಚಿ ರಂಗಮನೆ :** ಸಾಹಿತ್ಯ ಚಾವಡಿ ಕಾರ್ಯಕ್ರಮ–163, ಭಾಷಣಕಾರರು: ಮಂಜುನಾಥ ಕುಣಿಗಲ್, ಲೇಖಕರು, ವಿಷಯ: ಕುಣಿಗಲ್‌ನಿಂದ ಕಂದಹಾರ್, ಸ್ಥಳ: ಸುರುಚಿ ರಂಗಮನೆ, ಚಿತ್ರಭಾನು ರಸ್ತೆ, ಕುವೆಂಪುನಗರ, ಬೆಳಗ್ಗೆ 10.30 ರಿಂದ.
- **ಚಿತ್ಕಲಾ ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ :** ಚಿತ್ಕಲಾ ವಾರ್ಷಿಕೋತ್ಸವ, ರಾಜ್ಯೋತ್ಸವ ಕವಿಗೋಷ್ಠಿ, ಕಾವ್ಯ ಕುಸುಮ ಕವನ ಸಂಕಲನ ಬಿಡುಗಡೆ ಸಮಾರಂಭ, ಉದ್ಘಾಟನೆ : ಚಾಮುಂಡಿಬೆಟ್ಟದ ಪ್ರಧಾನ ಅರ್ಚಕ ಶಶಿಶೇಖರ ದೀಕ್ಷಿತರು, ಪುಸ್ತಕ ಕುರಿತು ಸಾಹಿತಿ ಜಯಪ್ಪ ಹೊನ್ನಾಳಿ, ಲೇಖಕರ ನುಡಿ : ಸಾಹಿತಿ ಎಂ.ಕೆ. ಮಹದೇವಸ್ವಾಮಿ, ಪ್ರಾಸ್ತಾವಿಕ ನುಡಿ : ಜಿಲ್ಲಾ ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಚಂದ್ರಶೇಖರ್, ಅಧ್ಯಕ್ಷತೆ : ಎಂ. ಲೋಕೇಶಯ್ಯ, ಮುಖ್ಯ ಅತಿಥಿಗಳು : ಶಾಸಕ ಟಿ.ಎಸ್. ಶ್ರೀವತ್ಸ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ. ದೀಪಕ್, ಸ್ಥಳ: ಅರಮನೆ ಜಪದ ಕಟ್ಟೆ ಮಠ, ಶಂಕರ ಮಠದ ರಸ್ತೆ, ಬೆಳಗ್ಗೆ 10.30ಕ್ಕೆ.
- **ಕನ್ನಡ ಪುಸ್ತಕ ಪ್ರಾಧಿಕಾರ :** ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ಅವರ ನಿವಾಸದಲ್ಲಿ ಮನೆಗೊಂದು ಗ್ರಂಥಾಲಯದ ಅನುಷ್ಠಾನ, ಗ್ರಂಥಾಲಯಕ್ಕೆ ಚಾಲನೆ : ಹಿರಿಯ ಸಾಹಿತಿ ಡಾ. ಸಿ.ಪಿ. ಕೃಷ್ಣಕುಮಾರ್, ಫಲಕದ ಅನಾವರಣ : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಉಪಸ್ಥಿತರು: ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಅಧ್ಯಕ್ಷತೆ : ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ. ಮಾನಸ, ಸ್ಥಳ: ಬುದ್ಧ ನಿಲಯ, 3ನೇ ಮೇನ್, ವಿಜಯನಗರ 2ನೇ ಹಂತ, ಬೆಳಗ್ಗೆ 10.30ಕ್ಕೆ.
- **ಕನ್ನಡಿಗರ ಭುವನ ಸಂಗಾತಿ ಪತ್ರಿಕೆ, ಮೈಸೂರು ವಿವಿ ಸಂಶೋಧಕರ ಸಂಘ :** ಜನಮನದಲ್ಲಿ ಸಾಕ್ಷೀಕರಿಸುತ್ತಿರುವ 25ನೇ ವರ್ಷಗಳ ಬೆಳ್ಳಿ ಹಬ್ಬದ ಸಂಭ್ರಮಾಚರಣೆ, ಸಾನ್ನಿಧ್ಯ : ಉರಿಲಿಂಗಿಪೆದ್ದಿ ಮಠದ ಪೀಠಾಧ್ಯಕ್ಷ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ಉದ್ಘಾಟನೆ : ಮುಖ್ಯಮಂತ್ರಿ ಸಿದ್ದರಾಮಯ್ಯ, ಅಧ್ಯಕ್ಷತೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಸಿ. ಮಹದೇವಪ್ಪ, ಮುಖ್ಯ ಅತಿಥಿಗಳು : ಶಾಸಕರಾದ ಎ.ಆರ್. ಕೃಷ್ಣಮೂರ್ತಿ, ಎಚ್.ಎಂ. ಗಣೇಶಪ್ರಸಾದ್, ಕರಾಮುವಿವಿ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ, ಪ್ರದೇಶ ಅಭಿವೃದ್ಧಿ ಮಂಡಳಿ ಯೋಜನಾ ಇಲಾಖೆ ನಿರ್ದೇಶಕ ಡಿ. ಚಂದ್ರಶೇಖರಯ್ಯ, ಮಾಜಿ ಮೇಯರ್ ಪುರುಷೋತ್ತಮ್, ಪ್ರೊ. ಡಿ. ಆನಂದ, ಸಿ. ಹರಕುಮಾರ್, ಸ್ಥಳ: ವಿಜ್ಞಾನ ಭವನ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ.
- **ಸಾಮಾಜಿಕ ನ್ಯಾಯಪರ ವೇದಿಕೆ, ಡಾ.ಬಿ.ಆರ್.ಅಂಬೇಡ್ಕರ್ ಮತ್ತು ಡಾ.ಬಾಬು ಜಗಜೀವನರಾಂ ವಿದ್ಯಾರ್ಥಿ ಸಂಘಟನೆ:** ವಿಶೇಷ ಉಪನ್ಯಾಸ, ಸಾಧಕರಿಗೆ ಸನ್ಮಾನ, ಪ್ರತಿಭಾ ಪುರಸ್ಕಾರ, ಉದ್ಘಾಟನೆ: ಕವಿ ಪ್ರೊ. ಹೆಚ್.ಗೋವಿಂದಯ್ಯ, ಪ್ರಾಸ್ತಾವಿಕ ನುಡಿ: ಡಾ.ಮರಡೀಪುರ ರವಿಕುಮಾರ್, ಮುಖ್ಯ ಅತಿಥಿಗಳು: ಬಿ.ಶಿವಸ್ವಾಮಿ, ಆರ್.ವಿನಯ್‌ಕುಮಾರ್, ಡಾ.ವೆಂಕಟರಾಜು, ಚಂದ್ರಪ್ಪ ಗೋಕಾಕ್, ಮಾಜಿ ಮೇಯರ್ ನಾರಾಯಣ, ಅಧ್ಯಕ್ಷತೆ: ಮಂಜುನಾಥ್ ಓಣಿಕೇರಿ, ಸ್ಥಳ: ರಾಣಿ ಬಹದ್ದೂರ್ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ
- **ತರಳಬಾಳು ಸಮಾಗಮ, ತರಳಬಾಳು ಶಿಕ್ಷಣ ಕೇಂದ್ರ :** ಕನ್ನಡ ರಾಜ್ಯೋತ್ಸವ ಹಾಗೂ ದತ್ತಿ ಕಾರ್ಯಕ್ರಮ, ಉದ್ಘಾಟನೆ : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಪ್ರೊ. ಎಲ್. ತಿಪ್ಪೇಸ್ವಾಮಿ ಅವರಿಂದ ಉಪನ್ಯಾಸ, ಅಧ್ಯಕ್ಷತೆ : ತರಳಬಾಳು ಸಮಾಗಮ ಅಧ್ಯಕ್ಷ ಡಿ.ಎನ್. ಲೋಕಪ್ಪ, ತರಳಬಾಳು ಪದವಿಪೂರ್ವ ಕಾಲೇಜು ಪ್ರಿನ್ಸಿಪಾಲ್ ಎಸ್. ಮಹದೇವಸ್ವಾಮಿ, ಸ್ಥಳ: ತರಳಬಾಳು ಶಿಕ್ಷಣ ಸಂಸ್ಥೆ, ತೊಣಚಿಕೊಪ್ಪಲು, ಬೆಳಗ್ಗೆ 11ಕ್ಕೆ.
- **ಶ್ರೀ ಗುರು ಪುಟ್ಟರಾಮ ಸಂಗೀತ ಸಭಾ, ಶ್ರೀ ಗುರು ಪುಟ್ಟರಾಜ ಸಂಗೀತ ವಿದ್ಯಾಲಯ :** ಪದ್ಮಭೂಷಣ ಡಾ. ಪಂಡಿತ್ ಪುಟ್ಟರಾಜ ಗವಾಯಿಗಳವರ 16ನೇ ಪುಣ್ಯಸ್ಮರಣೆಯ ಅಂಗವಾಗಿ ಭೈರವದಿಂದ ಭೈರವಿ ಹಾಗೂ ಪುಟ್ಟಶ್ರೀ ಸಮ್ಮಾನ, ಡಾ. ಹರೀಶ ಹೆಗಡೆ ಸಂಪಾದನೆಯ ಪಂಡಿತ್ ಪುಟ್ಟರಾಜ ಕವಿ ಗವಾಯಿಗಳವರ ವಿರಚಿತ ಗಾನ ಸುಧಾ–ಬಿಲಾವಲ ಥಾಟ ಕೃತಿ ಬಿಡುಗಡೆ, ಸಂಗೀತೋತ್ಸವ, ಬೆಳಗ್ಗೆ 9 ರಿಂದ ಭೈರವ ರಾಗದಿಂದ ಪ್ರಾರಂಭ, ಕು. ಪುಟ್ಟರಾಜ ಕೋಲಕುಂದ ಅವರಿಂದ ಗಾಯನ, ಕು. ಪ್ರಿಯಾಂಕ ಸಿ.ಎಂ. ಚೆನ್ನಮ್ಮಗೆರೆ–ಹಾರ್ಮೋನಿಯಂ, ಪ್ರಸಾದ್ ಎನ್. ಕೋಮಾರ–ತಬಲಾ; ಬೆಳಗ್ಗೆ 10ಕ್ಕೆ ಸಭಾ ಕಾರ್ಯಕ್ರಮ, ಉದ್ಘಾಟನೆ : ಶಾಸಕ ಟಿ.ಎಸ್. ಶ್ರೀವತ್ಸ, ಅಧ್ಯಕ್ಷತೆ : ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯ ಮಾ.ವಿ. ರಾಮಪ್ರಸಾದ್, ಪುಟ್ಟಶ್ರೀ ಸಮ್ಮಾನ ಪ್ರದಾನ : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಪುಟ್ಟಶ್ರೀ ಸಮ್ಮಾನ ಪುರಸ್ಕೃತರು : ಕು. ಮಲ್ಲಿಕಾರ್ಜುನ ಕಲಬುರಗಿ, ಗ್ರಂಥ ಬಿಡುಗಡೆ : ಹಿರಿಯ ಸಂಗೀತಗಾರ ಪಂಡಿತ್ ವೀರಭದ್ರಯ್ಯ ಹಿರೇಮಠ, ಗ್ರಂಥ ಸಂಪಾದಕರು : ಡಾ. ಹರೀಶ್ ಹೆಗಡೆ; ಮಧ್ಯಾಹ್ನ 11.05 ರಿಂದ ಕಿರಣ್ ಭಟ್ ಅವರಿಂದ ಗಾಯನ, ಮಲ್ಲಿಕಾರ್ಜುನಸ್ವಾಮಿ –ಹಾರ್ಮೋನಿಯಂ, ಅರುಣ ಭಟ್–ತಬಲಾ, ಮ. 12.10 ರಿಂದ ಶ್ರೀ ವೀರೇಶ್ವರ ಪುಣ್ಯಾಶ್ರಮ ಗದಗ ಶಾಖೆ, ಶಿವಮೊಗ್ಗ ಅಂಧ ಮಕ್ಕಳಿಂದ ಸಂಗೀತ ಕಾರ್ಯಕ್ರಮ, ಮ. 1 ರಿಂದ ಪ್ರವೀಣ್ ಹೂಗಾರ ಅವರಿಂದ ಸಿತಾರ ವಾದನ, ಗುರುರಾಜ ಆಡುಕುಳ–ತಬಲಾ; ಮಧ್ಯಾಹ್ನ 2.30 ರಿಂದ ಎಸ್‌ಜಿಪಿ ಸಂಗೀತ ವಿದ್ಯಾಲಯದ ವಿದ್ಯಾರ್ಥಿಗಳಿಂದ ಸಮೂಹ ತಬಲಾ ವಾದನ ಹಾಗೂ ಗಾಯನ; ಸಂಜೆ 4.05 ರಿಂದ ಡಾ. ಹರೀಶ ಹೆಗಡೆ ಅವರಿಂದ ಗಾಯನ, ಮಲ್ಲಿಕಾರ್ಜುನ ಸ್ವಾಮಿ–ಹಾರ್ಮೋನಿಯಂ, ಗುರುರಾಜ ಆಡುಕಳ–ತಬಲಾ; ಸಂಜೆ 5.10 ರಿಂದ ಸಂಗಮೇಶ ಪಾಟೀಲ ಅವರಿಂದ ಗಾಯನ, ಪುರುಷೋತ್ತಮ ಕಿರಗಸುರ–ಕೀಬೋರ್ಡ್, ಶರಣು ಗೋಗಿ–ತಬಲಾ; ಸಂಜೆ 6.15 ರಿಂದ ವಿದ್ವಾನ್ ಕೇಶವ ಮೋಹನಕುಮಾರ್–ವಯೋಲಿನ್, ಆರ್. ಬಾಲಸುಬ್ರಹ್ಮಣ್ಯ–ಬಾನ್ಸುರಿ, ವಿದ್ವಾನ್ ಎ. ರಾಧೇಶ–ಮೃದಂಗ, ಭೀಮಾಶಂಕರ ಬಿದನೂರ–ತಬಲಾ; ರಾ. 7.20 ರಿಂದ ಪಂಡಿತ್ ಮೌನೇಶಕುಮಾರ ಲಾವಣಿ–ಗಾಯನ, ಮಲ್ಲಿಕಾರ್ಜುನಸ್ವಾಮಿ – ಹಾರ್ಮೋನಿಯಂ, ಭೀಮಾಶಂಕರ ಬಿದನೂರ–ತಬಲಾ ಸ್ಥಳ: ಗಾನಭಾರತೀ (ರಮಾಗೋವಿಂದ ಕಲಾ ವೇದಿಕೆ), ಆದಿಚುಂಚನಗಿರಿ ರಸ್ತೆ, ಕುವೆಂಪುನಗರ.
- **ಶ್ರೀ ಶಾಂತಿನಾಥ ತೀರ್ಥಂಕರರ ಪಂಚಕಲ್ಯಾಣ ಮಹೋತ್ಸವ ಸಮಿತಿ, ಸಕಲ ಜೈನ ಸಮಾಜ :** ಶ್ರೀ ಶಾಂತಿನಾಥ ತೀರ್ಥಂಕರರ ಪಂಚಕಲ್ಯಾಣ ಮಹೋತ್ಸವ, 108 ಆಚಾರ್ಯ ಶ್ರೀ ಪುಣ್ಯಸಾಗರ ಮುನಿ ಮಹಾರಾಜರು ಅವರಿಂದ ಪ್ರವಚನ, ದಿವ್ಯ ಉಪಸ್ಥಿತರು : ಪರಮಪೂಜ್ಯ ಚಾರುಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ, ಮುಖ್ಯ ಅತಿಥಿಗಳು : ಸಚಿವ ಡಿ. ಸುಧಾಕರ್, ಶಾಸಕರಾದ ತನ್ವೀರ್ ಸೇಠ್, ಕೆ. ಶಿವಕುಮಾರ್, ಸ್ಥಳ: ಕೋಟೆ ಶ್ರೀ ಶಾಂತಿನಾಥ ಬಸದಿ ಸಭಾಂಗಣ, ಮಧ್ಯಾಹ್ನ 3ಕ್ಕೆ.
- **ಶ್ರೀ ಬಸವೇಶ್ವರ ವಧು–ವರರ ವಿವಾಹ ವೇದಿಕೆ, ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ :** ವೀರಶೈವ–ಲಿಂಗಾಯತ ವಧು–ವರರ ಸಮಾವೇಶ, ಉದ್ಘಾಟನೆ : ಸಾಹಿತಿ ಡಾ. ಜಯಪ್ಪ ಹೊನ್ನಾಳಿ, ಅಧ್ಯಕ್ಷತೆ : ಮೂಗೂರು ನಂಜುಂಡಸ್ವಾಮಿ, ಮುಖ್ಯ ಅತಿಥಿಗಳು : ಶ್ರೀಮತಿ ಸಿ.ಎಲ್. ಶರ್ಮಿಳಾ, ಶ್ರೀಮತಿ ತನುಜ ಮಹೇಶ್, ಸ್ಥಳ: ಶ್ರೀ ವಿದ್ಯಾಭಾರತಿ ಕಲ್ಯಾಣ ಮಂಟಪ, ಮಧ್ಯಾಹ್ನ 3 ರಿಂದ.
- **ಆಜಾದಿ ಬಚಾವೋ ಆಂದೋಲನ :** ಸ್ವದೇಶಿ ದಿನಾಚರಣೆ, ಮಧ್ಯಾಹ್ನ 3 ರಿಂದ ರಾಜೀವ್ ದೀಕ್ಷಿತರ ಸಾಕ್ಷ್ಯಚಿತ್ರ, ಸಂಜೆ 4 ರಿಂದ ವ್ಯಾಖ್ಯಾನಕಾರ ಪುಷ್ಪೇಂದ್ರ ಕುಲಶ್ರೇಷ್ಠ ಅವರಿಂದ ಭಾರತ ದೇಶದ ವರ್ತಮಾನ ಸಮಸ್ಯೆಗಳು ಮತ್ತು ಪರಿಹಾರ ಕುರಿತು ಉಪನ್ಯಾಸ, ಸ್ಥಳ: ಡಾ. ಎಪಿಜೆ ಅಬ್ದುಲ್ ಕಲಾಂ ಸಭಾಂಗಣ, ಮಹಾಜನ ಪ್ರಥಮ ದರ್ಜೆ ಕಾಲೇಜು.
- **ಚಾರು ಸಾಂಸ್ಕೃತಿಕ ಪ್ರತಿಷ್ಠಾನ :** ಚಾರುಮಂಜೂಷಾ–11, ಕನ್ನಡ ರಾಜ್ಯೋತ್ಸವ ಆಚರಣೆ, ಉಪಸ್ಥಿತರು : ಹಿರಿಯ ರಂಗಭೂಮಿ ಕಲಾವಿದೆ ಶ್ರೀಮತಿ ಸರಸ್ವತಿ ಜುಲೇಖಾ ಬೇಗಂ, ಚಾರು ರಂಗಗೀತೆ ತಂಡದಿಂದ ಕನ್ನಡ ಗಾನ ನಮನ, ಸ್ಥಳ: ಚಾರು ಸಾಂಸ್ಕೃತಿಕ ಪ್ರತಿಷ್ಠಾನ, ಸಂಜೆ 5ಕ್ಕೆ.
- **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಸಾಹಿತ್ಯ ಕಲಾಕೂಟ, ಸ್ಪಂದನ ಸಾಂಸ್ಕೃತಿಕ ಪರಿಷತ್ತು, ಕದಂಬ ಕಲಾಪೀಠ :** ಲೇಖಕಿ ಸುಜಯ ಸುರೇಶ್ ಅವರ 'ಕೊನೆ–ಮೊದಲು' ಪುಸ್ತಕ ಲೋಕಾರ್ಪಣೆ ಸಮಾರಂಭ, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪುಸ್ತಕ ಲೋಕಾರ್ಪಣೆ : ಶ್ರೀ ಕುಂದೂರು ಮಠದ ಅಧ್ಯಕ್ಷರಾದ ಡಾ.ಶರತ್ ಚಂದ್ರಸ್ವಾಮೀಜಿ, ಪುಸ್ತಕ ಕುರಿತು : ಜೆಎಸ್‌ಎಸ್ ಮಹಾವಿದ್ಯಾಪೀಠದ ಪ್ರಕಟಣಾ ವಿಭಾಗದ ನಿರ್ದೇಶಕ ಪ್ರೊ. ಮೊರಬದ ಮಲ್ಲಿಕಾರ್ಜುನ ಸ್ವಾಮಿ, ಆಶಯ ನುಡಿ : ಸ್ಪಂದನಾ ಸಾಂಸ್ಕೃತಿಕ ಪರಿಷತ್ತಿನ ಅಧ್ಯಕ್ಷ ಟಿ. ಸತೀಶ್ ಜವರೇಗೌಡ, ಪ್ರಾಸ್ತಾವಿಕ ನುಡಿ : ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ. ಚಂದ್ರಶೇಖರ್, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಅಂಶಿ ಪ್ರಸನ್ನ ಕುಮಾರ್ ಅವರಿಗೆ ಅಭಿನಂದನೆ, ಉಪಸ್ಥಿತರು: ಕದಂಬ ಕಲಾಪೀಠದ ಅಧ್ಯಕ್ಷ ಬಿ. ವಿದ್ಯಾಸಾಗರ್ ಕದಂಬ, ಕೊನೆ–ಮೊದಲು ಕೃತಿಯ ಲೇಖಕಿ ಸುಜಯ ಸುರೇಶ್, ಸ್ಥಳ: ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 5ಕ್ಕೆ
- **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್ :** ವಿದುಷಿ ಕಲಾಧರಿ ಭವಾನಿ ಮತ್ತು ವಿದುಷಿ ಅಂಬಿಕಾ ಧತ್ ಅವರಿಂದ ದ್ವಂದ್ವ ಗಾಯನ, ವಿದ್ವಾನ್ ಎಂ.ಡಿ. ಅರ್ಜುನ್–ಪಿಟೀಲು, ವಿದ್ವಾನ್ ಡಾ. ಸಿ.ಎ. ಗುರುದತ್–ಮೃದಂಗ, ವಿದ್ವಾನ್ ಶರತ್ ಕೌಶಿಕ್–ಘಟಂ, ಸ್ಥಳ: ಬಿಡಾರಂ ಕೃಷ್ಣಪ್ಪನವರ ಶ್ರೀ ಪ್ರಸನ್ನ ಸೀತಾರಾಮ ಮಂದಿರ, ನಾರಾಯಣಶಾಸ್ತ್ರಿ ರಸ್ತೆ, ಸಂಜೆ 6ರಿಂದ.
- **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಸರ್ವಜಯಾನಂದ ಅವರಿಂದ ಶ್ರೀ ಶ್ರೀ ರಾಮಕೃಷ್ಣ ಚರಿತೆ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.
- **ಹಿಮಾಲಯ ಪ್ರತಿಷ್ಠಾನ:** ಕನ್ನಡ ರಾಜ್ಯೋತ್ಸವ ಪ್ರಯುಕ್ತ ಸಾಧಕರಿಗೆ ಆಚಾರ್ಯ ಶ್ರೀ ವಿದ್ಯಾರಣ್ಯ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ, ಸಾನ್ನಿಧ್ಯ: ಬೇಬಿ ಮಠದ ಪೀಠಾಧಿಪತಿ ಶ್ರೀ ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮೀಜಿ, ಪ್ರಾಸ್ತಾವಿಕ ನುಡಿ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಉದ್ಘಾಟನೆ: ಶಾಸಕ ಟಿ.ಎಸ್.ಶ್ರೀವತ್ಸ, ಶ್ರೀ ವಿದ್ಯಾರಣ್ಯರ ಭಾವಚಿತ್ರಕ್ಕೆ ಪುಷ್ಪಾರ್ಚನೆ: ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಅಧ್ಯಕ್ಷತೆ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯ ವಿಶ್ರಾಂತ ಕುಲಪತಿ ಡಾ.ಪದ್ಮಾಶೇಖರ್, ಹಿಮಾಲಯ ಪ್ರತಿಷ್ಠಾನ ದರ್ಶನಂ ಕಿರುಹೊತ್ತಿಗೆ ಬಿಡುಗಡೆ: ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ, ಪ್ರಶಸ್ತಿ ಪ್ರದಾನ: ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ಉಪಸ್ಥಿತರು: ಹಿರಿಯ ಸಮಾಜ ಸೇವಕ ಎನ್.ಶ್ರೀಧರ ದೀಕ್ಷಿತ್, ಸ್ಥಳ: ಕನ್ನಡ ಸಾಹಿತ್ಯ ಭವನ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ವಿಜಯನಗರ 1ನೇ ಹಂತ, ಸಂಜೆ 5ಕ್ಕೆ.
- **ರಂಗಾಯಣ :** ಬಹುರೂಪಿಗೆ ಮುನ್ನುಡಿ–ರಂಗಾಯಣಗಳ ನಾಟಕ ಉತ್ಸವ, ಕಾರ್ಕಳ, ಯಕ್ಷ ರಂಗಾಯಣ ಕಲಾವಿದರಿಂದ ಗುಲಾಮನ ಸ್ವಾತಂತ್ರ್ಯಯಾತ್ರೆ ನಾಟಕ ಪ್ರದರ್ಶನ, ಸ್ಥಳ: ಭೂಮಿಗೀತ ರಂಗ ಮಂದಿರ, ರಂಗಾಯಣ, ಸಂಜೆ 6ಕ್ಕೆ.
- **ಕುಮಾರವ್ಯಾಸ ಗುರುಕುಲ ಮತ್ತು ಕಾವ್ಯರಂಜಿನಿ ಸಭಾ:** ಪ್ರೊ. ಎ.ಪಿ. ಶ್ರೀನಿವಾಸಮೂರ್ತಿಯವರ ಸ್ಮರಣೆ ಮತ್ತು ಸಂತ ಸದಾಶಿವ ಬ್ರಹ್ಮೇಂದ್ರರ ಸಂಸ್ಮರಣೆ, ಅವಧೂತ ಸದಾಶಿವ ಬ್ರಹ್ಮೇಂದ್ರರನ್ನು ಕುರಿತು ಶ್ರೀನಿವಾಸ್ ಅವರಿಂದ ಉಪನ್ಯಾಸ, ಸದಾಶಿವ ಬ್ರಹ್ಮೇಂದ್ರರ ಕೃತಿಗಳ ಗಾಯನ, ವಿದುಷಿ ಡಾ. ವೀಣಾ ರವಿಕುಮಾರ್ ಅವರಿಂದ ಗಾಯನ, ವಿದ್ವಾನ್ ಡಾ.ಎಂ.ಜಿ.ನರಹರಿ–ಪಿಟೀಲು, ವಿದ್ವಾನ್ ಎಸ್. ನಾಗರಾಜು–ಮೃದಂಗ, ಸ್ಥಳ: 1315/2, ಹರಿಪ್ರಿಯ, 3ನೇ ಅಡ್ಡ ರಸ್ತೆ, ಕೃಷ್ಣಮೂರ್ತಿಪುರಂ, ಸಂಜೆ 6 ರಿಂದ.
- **ಅಭಿವ್ಯಕ್ತಿ ಕಲಾ ಮತ್ತು ಸಾಂಸ್ಕೃತಿಕ ಕೇಂದ್ರ :** ವಿದುಷಿ ದಿವ್ಯ ರವಿ ಅವರಿಂದ ನೃತ್ಯೋಲ್ಲಾಸ ಭರತನಾಟ್ಯ ಪ್ರದರ್ಶನ, ಮುಖ್ಯ ಅತಿಥಿಗಳು : ಗಮಕಿ ಶ್ರೀಮತಿ ಶ್ಯಾಮಲ ಪ್ರಕಾಶ್, ಸ್ಥಳ: ರಮಾಗೋವಿಂದ ರಂಗ ಮಂದಿರ, ರಾಮಕೃಷ್ಣನಗರ, ಸಂಜೆ 6.15ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ – ಶತಾವಧಾನಿ ಡಾ. ಆರ್. ಗಣೇಶ್, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನಿಮಾ ಯಾನ–ಜನ ಮೆಚ್ಚಿದ ಕನ್ನಡ ಚಿತ್ರಗಳ ನೆನಪಿನ ಮಾಲೆ, ಪ್ರಸ್ತುತಿ : ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಎಸ್.ಸಂಗೀತಾ, ವ್ಯಾಖ್ಯಾನ–ಡಾ.ಹೆಚ್.ಎನ್.ಮಂಜುರಾಜ್, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ– ಡಾ.ಎಸ್.ಎಲ್.ಭೈರಪ್ಪ ಅವರ ದೂರ ಸರಿದರು ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ–ಉಮೇಶ್ ಎಸ್.ಎಸ್., 8.30 ಚಿತ್ರಗೀತೆಗಳು, 9.30 ನಮ್ಮ ಆರೋಗ್ಯ–ವಿಶ್ವ ಏಡ್ಸ್ ದಿನಾಚರಣೆಯ ಸಂದೇಶ ಮತ್ತು ಮಹತ್ವ ಕುರಿತು ತಿಳಿಸಿಕೊಡಲಿದ್ದಾರೆ ಮೈಸೂರಿನ ಆಶಾಕಿರಣ ಛಾರಿಟಬಲ್ ಟ್ರಸ್ಟ್ ಮತ್ತು ಆಸ್ಪತ್ರೆಯ ವೈದ್ಯಾಧಿಕಾರಿ ಮತ್ತು ಸಂಶೋಧನಾಧಿಕಾರಿ ಡಾ.ಶ್ರೀರಾಮ ನಂತರ ಏಡ್ಸ್ ವ್ಯಾಧಿಗೆ ತುತ್ತಾಗಿ ಗುಣಮುಖರಾದವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ, 10.00 ಕೇಳಿಗಿಳಿಗಳೇ, ಕಥೆ ಹೇಳ್ತಿಯೋ ಹಾಡು ಹೇಳ್ತಿಯೋ ನೇರ ಫೋನ್ ಇನ್ ಕಾರ್ಯಕ್ರಮ, 10.30 KRISH TRISH and Balty boy ನಾವು ಭಾರತೀಯರು–ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ತೆರೆಮರೆಯ ನಾಯಕರ ಬಗ್ಗೆ ಬೆಳಕ ಚೆಲ್ಲುವ ಬಾನುಲಿ ಸರಣಿ, 10.55 ಭಾರತದ ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿಯವರು ರಾಷ್ಟ್ರದ ಜನತೆಯೊಡನೆ ಹಂಚಿಕೊಳ್ಳುವ ಮನದ ಮಾತು. ನಂತರ ಮನದ ಮಾತಿನ ಕನ್ನಡ ಅನುವಾದ


ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ : ಚಾಮರಾಜನಗರ ಜಿಲ್ಲೆ ಸಿದ್ಧಯ್ಯನಪುರದ ಚಿಕ್ಕತಾಯಮ್ಮ ಮತ್ತು ಸಂಗಡಿಗರಿಂದ, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು–ಕೆ.ಬಿ.ಸುನೀತಾ ಆಚಾರ್ಯ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ನಕ್ಷತ್ರಲೋಕ–ಸಿನಿ ಸೆಲೆಬ್ರಿಟಿಗಳೊಂದಿಗೆ ಮಾತುಕತೆ, ಖ್ಯಾತ ಹಿನ್ನೆಲೆ ಗಾಯಕಿ ಡಾ.ಶಮಿತ ಮಲ್ನಾಡ್ ಅವರೊಂದಿಗಿನ ಸಂದರ್ಶನ, ಇವರೊಂದಿಗೆ ಭಾಗವಹಿಸುತ್ತಾರೆ–ಶ್ರೀಮಾನ್.ಎಸ್., 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ – ಪಂಡಿತ್ ರೋಣು ಮಜುಂದಾರ್ ಅವರ ಬಾನ್ಸುರಿ ಹಾಗೂ ಕದ್ರಿ ಗೋಪಾಲನಾಥ್ ಅವರ ಸ್ಯಾಕ್ಸೋಫೋನ್ ವಾದನದ ಜುಗಲ್ ಬಂದಿ, 6.51 ಕೃಷಿರಂಗ : ತೋರಣ ಹೂರಣ –ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ: ಎನ್. ಕೇಶವಮೂರ್ತಿ, ಆರ್. ಲೋಕೇಶ್ವರಿ, ಡಾ.ಮೈಸೂರು ಉಮೇಶ್, ಕೃಷಿಲೋಕ, ಕೃಷಿ ದರ್ಪಣ, ವಾರದ ಕೃಷಿರಂಗ– ಕಿಸಾನ್‌ವಾಣಿ ಕಾರ್ಯಕ್ರಮಗಳ ಮುನ್ನೋಟ, ಪ್ರಸ್ತುತಿ: ಆರ್. ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ – ಕೇಶಿರಾಜನ ಶಬ್ದಮಣಿ ದರ್ಪಣಂ ಕೃತಿಯ ಮಹತ್ವ ಕುರಿತು ಮಾತನಾಡುತ್ತಾರೆ ಪರಮೇಶ್ವರ ಸಾಲಿಮಠ್, 8.00 ಭಾರತದ ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿಯವರು ರಾಷ್ಟ್ರದ ಜನತೆಯೊಡನೆ ಹಂಚಿಕೊಳ್ಳುವ ಮನದ ಮಾತಿನ ಕನ್ನಡ ಅನುವಾದದ ಅವತರಣಿಕೆಯ ಮರುಪ್ರಸಾರ, 8.30 ಹಿಂದಿ ಚಿತ್ರಗೀತೆಗಳು, 9.15 ರಂಗಗೀತೆಗಳು–ಎಂ.ಪಿ.ನಾಗಲಿಂಗಾಚಾರ್, 9.30 ISSUES BEFORE PARLIMENT, 10.00 ರವಿವಾರದ ಅಖಿಲ ಭಾರತದ ಸಂಗೀತ ಸಭಾ, ಮೇದುರಿ ಶ್ರೀನಿವಾಸ್–ವೀಣಾ ವಾದನ

ಮೈಸೂರು ಮಿತ್ರ

ಭಾನುವಾರ 30 ನವೆಂಬರ್ 2025

ಸಂಚಾರ ದಟ್ಟಣೆ ನಿಯಂತ್ರಣಕ್ಕೆ ಫ್ಲೈ ಓವರ್ ನಿರ್ಮಾಣವೇ ಶಾಶ್ವತ ಪರಿಹಾರವಲ್ಲ

ಎಂಜಿಪಿ ಸದಸ್ಯರ ಒಕ್ಕೊರಲ ಅಭಿಪ್ರಾಯ



ಮೈಸೂರು-ಹುಣಸೂರು ರಸ್ತೆಯಲ್ಲಿ ಫ್ಲೈಓವರ್ ಕಾಮಗಾರಿಯ ಸಾಧಕ-ಬಾಧಕ ಕುರಿತು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಸಮ್ಮುಖದಲ್ಲಿ ಎಂಜಿಪಿ ಸದಸ್ಯರು ಚರ್ಚೆ ನಡೆಸಿದರು.

ಮೈಸೂರು, ನ.29(ಎಸ್‌ಪಿಎನ್)- ಮೈಸೂರಿನಲ್ಲಿ ಟ್ರಾಫಿಕ್ ಸಮಸ್ಯೆ ಹೆಚ್ಚಾದ ತಕ್ಷಣ ಫ್ಲೈಓವರ್ ಕಟ್ಟುವುದೇ ಸಂಚಾರ ದಟ್ಟಣೆ ನಿಯಂತ್ರಣಕ್ಕೆ ಶಾಶ್ವತ ಪರಿಹಾರವಲ್ಲ. ಬದಲಾಗಿ, ಟ್ರಾಫಿಕ್ ಸಮಸ್ಯೆ ಹೆಚ್ಚಾಗುವುದರ ಕುರಿತು ಅಧ್ಯಯನ ನಡೆಸಿ, ನಿಯಂತ್ರಣಕ್ಕಾಗಿ ಬೇರೆ ಪರಿಹಾರ ಹುಡುಕಬೇಕು ಎಂದು ಮೈಸೂರು ಗ್ರಾಹಕ ಪರಿಷತ್ ಸದಸ್ಯರು ಒಕ್ಕೊರಲ ಅಭಿಪ್ರಾಯಪಟ್ಟರು.

ಮೈಸೂರು ಯಾದವಗಿರಿ ವಿವೇಕಾನಂದ ರಸ್ತೆಯ ಮೈಸೂರು ಗ್ರಾಹಕ ಪರಿಷತ್ ಕಚೇರಿಯಲ್ಲಿ ಮೈಸೂರು-ಹುಣಸೂರು ರಸ್ತೆಯಲ್ಲಿ ಫ್ಲೈಓವರ್ ಕಾಮಗಾರಿಯ ಸಾಧಕ-ಬಾಧಕ ಕುರಿತು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಸಮ್ಮುಖದಲ್ಲಿ ಚರ್ಚೆ ನಡೆಸಿದರು.

ಮೈಸೂರಿನ ಪರಿಸರ, ಪರಂಪರೆಗೆ ಪೂರಕ ಯೋಜನೆಗಳಿಗೆ ನನ್ನ ವಿರೋಧವಿಲ್ಲ. ಆದರೆ, ಅವೈಜ್ಞಾನಿಕ ಯೋಜನೆಗೆ ನನ್ನ ವಿರೋಧವಿದೆ. ರಾಜ್ಯ ಸರ್ಕಾರ ಇತ್ತೀಚೆಗೆ ಮೈಸೂರಿನ ಸಮಗ್ರ ಅಭಿವೃದ್ಧಿಗಾಗಿ 'ಗ್ರೇಟರ್ ಮೈಸೂರು' ಪ್ರಕಟಿಸಿದೆ. ಇದರ ಬಗ್ಗೆ ನನ್ನ ವಿರೋಧವಿಲ್ಲ. ಆದರೆ, ಈ ಯೋಜನೆ ಕುರಿತು ಸಾರ್ವಜನಿಕರೊಂದಿಗೆ ಸಂವಾದವಾಗಬೇಕು. ಆಗ ಮಾತ್ರ ಒಂದು ಯೋಜನೆ ಜನಪರವಾಗಲು ಸಾಧ್ಯ ಎಂದು ಸಂಸದ ಯದುವೀರ್ ಅವರು ಸದಸ್ಯರೊಬ್ಬರ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿದರು.

ಎಂಜಿಪಿ ಸದಸ್ಯ ಬಾಮೀ ವಿ.ಶೆಣೈ ಸಲಹೆ ನೀಡುತ್ತಾ, ಮೈಸೂರು-ಹುಣಸೂರು ರಸ್ತೆಯಲ್ಲಿ ಟ್ರಾಫಿಕ್ ಸಮಸ್ಯೆಯಿದ್ದರೆ, ಟ್ರಾಫಿಕ್ ಸಮಸ್ಯೆ ಕಡಿಮೆ ಮಾಡಲು ಪರಿಹಾರ ಹುಡುಕಬೇಕು. ಅದಕ್ಕೆ ಅನಗತ್ಯವಾಗಿ ಫ್ಲೈಓವರ್ ಮಾಡುವುದೇ ಪರಿಹಾರವಲ್ಲ. ಫ್ಲೈಓವರ್ ನಿರ್ಮಿಸುವ ಅಗತ್ಯತೆ ಕುರಿತು ರಾಜ್ಯ ಸರ್ಕಾರ ಇಲ್ಲಿಯವರೆಗೆ ಸಾರ್ವಜನಿಕರ ಅಭಿಪ್ರಾಯ ಕೇಳಿಲ್ಲ.

> ಜೆಸಿ ಇಂಜಿನಿಯರಿಂಗ್ ಕಾಲೇಜಿನ ಉಪನ್ಯಾಸಕ, ಟ್ರಾಫಿಕ್ ಸಮಸ್ಯೆ ಕುರಿತು ಅಧ್ಯಯನ ನಡೆಸಿ ಪಿಎಚ್‌ಡಿ ಪಡೆದಿರುವ ಡಾ.ಮುಕೇಶ್ ಅವರ ನೇತೃತ್ವದಲ್ಲಿ ಮೈಸೂರಿನ ಟ್ರಾಫಿಕ್ ಸಮಸ್ಯೆ ಕುರಿತು, ಫ್ಲೈಓವರ್ ಕಾಮಗಾರಿ ಕುರಿತು ಅಧ್ಯಯನ ನಡೆಸಿ ವರದಿ ತಯಾರಿಸಲು ಒಮ್ಮತದ ತೀರ್ಮಾನ ಮಾಡಲಾಯಿತು.
>
> - ಎಂಜಿಪಿ

ಮೈಸೂರಿನ ಇತಿಹಾಸ, ಸಾಂಸ್ಕೃತಿಕ ಹಿನ್ನಲೆಯಲ್ಲಿ ಅರಿಯದೇ ದೊಡ್ಡ ದೊಡ್ಡ ಯೋಜನೆಗಳನ್ನು ಅನುಷ್ಠಾನಗೊಳಿಸುವುದು ತರವಲ್ಲ. ಇದರ ಬಗ್ಗೆ ಮೈಸೂರಿನ ವಿವಿಧ ಇಂಜಿನಿಯರಿಂಗ್ ಕಾಲೇಜುಗಳು, ಸಿವಿಲ್ ಇಂಜಿನಿಯರ್ ವಿಭಾಗದ ವಿದ್ಯಾರ್ಥಿಗಳಿಂದ ವರದಿ ತಯಾರಿಸುವ ಕುರಿತು ಬಾಮೀ ವಿ.ಶೆಣೈ ಸಭೆಗೆ ಪ್ರಸ್ತಾವನೆ ಮುಂದಿಟ್ಟರು. ಈ ಪ್ರಸ್ತಾವನೆಗೆ ಎಲ್ಲಾ ಸದಸ್ಯರು ಒಪ್ಪಿಗೆ ಸೂಚಿಸಿದರು.

ಮೈಸೂರು, ಬೆಂಗಳೂರು ಸೇರಿದಂತೆ ದೇಶದ ಇತರೆ ಭಾಗದಲ್ಲಿ ವಾಹನ ಸಂಖ್ಯೆ ಹೆಚ್ಚಳದಿಂದಾಗಿ ಟ್ರಾಫಿಕ್ ಸಮಸ್ಯೆ ಹೆಚ್ಚಾಗುತ್ತಿದೆ. ಆದರೆ, ಹೊರ ದೇಶಗಳಾದ ಸಿಂಗಾಪುರ, ಅಮೆರಿಕಾ ಮುಂತಾದೆಡೆ ಟ್ರಾಫಿಕ್ ಸಮಸ್ಯೆಗೆ ಸಮೂಹ ಸಾರಿಗೆ ವ್ಯವಸ್ಥೆ ಅನುವು ಮಾಡಿಕೊಟ್ಟು, ಖಾಸಗಿ ವ್ಯಕ್ತಿಗಳ ವಾಹನ ಓಡಾಟಕ್ಕೆ ನೂರು ಪಟ್ಟು ದಂಡ ಪ್ರಯೋಗದ ಮೂಲಕ ಟ್ರಾಫಿಕ್ ನಿಯಂತ್ರಣ ಮಾಡುತ್ತಿದ್ದಾರೆ. ಆದರೆ, ನಮ್ಮ ದೇಶದಲ್ಲಿ ಟ್ರಾಫಿಕ್ ಸಮಸ್ಯೆ ಕುರಿತು ಸರ್ಕಾರಗಳು ಚರ್ಚೆಯನ್ನೇ ನಡೆಸುತ್ತಿಲ್ಲ.

ಸಿಂಗಾಪುರದ ರಸ್ತೆಗಳಲ್ಲಿ ಟ್ರಾಫಿಕ್ ಒತ್ತಡ ಹೆಚ್ಚಾದಾಗ, ಒಬ್ಬನೇ ವ್ಯಕ್ತಿ ಕಾರಿನಲ್ಲಿ ತೆರಳಿದರೆ, ಅಂತಹ ವ್ಯಕ್ತಿಗಳಿಗೆ ನೂರು ಪಟ್ಟು ದಂಡ ವಿಧಿಸುತ್ತಾರೆ. ಈ ವ್ಯವಸ್ಥೆ ಅಮೆರಿಕಾದಲ್ಲೂ ಇದೆ. ಇಂತಹ ಸಂಚಾರ ವ್ಯವಸ್ಥೆ ಜಾರಿಗೆ ತಂದಾಗ ಮಾತ್ರ ಟ್ರಾಫಿಕ್ ಸಮಸ್ಯೆಗೆ ಪರಿಹಾರ ಹುಡುಕಲು ಸಾಧ್ಯ. ಇಲ್ಲವಾದರೆ, ಇರುವ ಜಾಗವೆನ್ನಲ್ಲಾ ಅಗೆದು ಫ್ಲೈಓವರ್ ಕಟ್ಟಿದರೆ, ಗತಿಯೇನು ಎಂದು ಸದಸ್ಯರು ಪ್ರಶ್ನಿಸಿದರು.

ಸಭೆಯಲ್ಲಿ ಮೈಸೂರು ಗ್ರಾಹಕರ ಪರಿಷತ್ ಸದಸ್ಯರಾದ ನಿವೃತ್ತ ಮೇಜರ್ ಜನರಲ್ ಒಂಭತ್ಕೆರೆ, ಎಸ್.ಶೋಭಾನ, ಡಿ.ವಿ.ದಯಾನಂದಸಾಗರ್, ನಾಗಭೂಷಣ, ಎಸ್.ಕೆ.ದಿನೇಶ್, ವಿದ್ಯಾವರ್ಧಕ, ಜೆಸಿ, ಜಿಎಸ್‌ಎಸ್‌ಎಸ್ ಹಾಗೂ ವಿದ್ಯಾವರ್ಧಕ ಇಂಜಿನಿಯರ್ ಕಾಲೇಜಿನ ಉಪನ್ಯಾಸಕರು ಉಪಸ್ಥಿತರಿದ್ದರು.

ಸದಸ್ಯರಿಂದ ನೀಡಿದ ಸಲಹೆಗಳು

- ಮೈಸೂರಿನ ಪರಿಸರಕ್ಕೆ ಧಕ್ಕೆಯಾಗುವ ಫ್ಲೈಓವರ್ ಸೇರಿದಂತೆ ಇತರೆ ಸಿವಿಲ್ ಕಾಮಗಾರಿಗಳಿಗೆ ಕಡಿವಾಣ ಹಾಕಬೇಕು
- ಮೈಸೂರಿನ ಟ್ರಾಫಿಕ್ ಸಿಗ್ನಲ್‌ಗಳಲ್ಲಿ ಸಂಚಾರ ನಿಯಂತ್ರಣ ಕುರಿತು ಸಮೀಕ್ಷೆ ಆಗಬೇಕು.
- ನಿರಂತರ ಟ್ರಾಫಿಕ್ ಇರುವ ಸಿಗ್ನಲ್‌ಗಳಲ್ಲಿ ನಿಗದಿತ ಸಮಯ ಹೆಚ್ಚಿಸಬೇಕು.
- ಸಮೂಹ ಸಾರಿಗೆ ವ್ಯವಸ್ಥೆಯನ್ನು ಪ್ರೋತ್ಸಾಹಿಸಬೇಕು.

ಸಂಸದರ ಸಮಯ ಪ್ರಜ್ಞೆಗೆ ಎಂಜಿಪಿ ಸದಸ್ಯರು ಫಿದಾ

ತಮ್ಮ ಬಿಡುವಿಲ್ಲದ ಸಮಯದಲ್ಲೂ ಮೈಸೂರು-ಹುಣಸೂರು ರಸ್ತೆಯಲ್ಲಿ ನಿರ್ಮಾಣವಾಗುತ್ತಿರುವ ಫ್ಲೈಓವರ್ ನಿರ್ಮಾಣದ ಸಾಧಕ-ಬಾಧಕ ಕುರಿತು ಚರ್ಚಿಸಲು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ನಿಗದಿತ ಸಮಯಕ್ಕೆ ಸಭೆಗೆ ಹಾಜರಾದ ಸಂಸದರ ಸಮಯ ಪ್ರಜ್ಞೆಗೆ ಎಂಜಿಪಿ ಸಭೆಯಲ್ಲಿ ಮೆಚ್ಚುಗೆ ವ್ಯಕ್ತವಾಯಿತು.

ಮಂಡಕಳ್ಳಿ ವಿಮಾನ ನಿಲ್ದಾಣದ

ರನ್‌ವೇ ವಿಸ್ತರಣೆ ಯೋಜನೆ ಸಕಾಲದಲ್ಲಿ ಪೂರ್ಣಗೊಳಿಸಲು ಸೂಕ್ತ ಕ್ರಮ ವಹಿಸಿ

ಅಧಿಕಾರಿಗಳಿಗೆ ಎಎಸಿ ಸಭೆಯಲ್ಲಿ ಸಂಸದ ಯದುವೀರ್ ಒಡೆಯರ್, ಶಾಸಕ ಜಿ.ಟಿ.ದೇವೇಗೌಡರ ಸೂಚನೆ



ಮಂಡಕಳ್ಳಿಯ ಮೈಸೂರು ವಿಮಾನ ನಿಲ್ದಾಣದ ಎಎಸಿ ಸಭೆ ಶನಿವಾರ ನಡೆಯಿತು.

ಮೈಸೂರು,ನ.29(ಪಿಎಂ)- ಮಂಡಕಳ್ಳಿಯ ಮೈಸೂರು ವಿಮಾನ ನಿಲ್ದಾಣದ ಪ್ರಸ್ತಾವಿತ ರನ್‌ವೇ ವಿಸ್ತರಣೆ ಸಂಬಂಧ ಶನಿವಾರ ನಡೆದ ವಿಮಾನ ನಿಲ್ದಾಣ ಸಲಹಾ ಸಮಿತಿ (ಎಎಸಿ) ಸಭೆಯಲ್ಲಿ ಚರ್ಚಿಸಲಾಯಿತು.

ಸದರಿ ವಿಮಾನ ನಿಲ್ದಾಣದ ಕಮ್ಯುನಿಟಿ ಹಾಲ್‌ನಲ್ಲಿ ಎಎಸಿ ಅಧ್ಯಕ್ಷರೂ ಆದ ಮೈಸೂರು-ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು.

ಉದ್ದೇಶಿತ ರನ್‌ವೇ ವಿಸ್ತರಣೆ ಯೋಜನೆಯನ್ನು ಸಕಾಲದಲ್ಲಿ ಪೂರ್ಣಗೊಳಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸಂಸದ ಯದುವೀರ್ ಒಡೆಯರ್ ಹಾಗೂ ಮಾಜಿ ಸಚಿವರೂ ಆದ ಶಾಸಕ ಜಿ.ಟಿ.ದೇವೇಗೌಡ ಅವರು ಸಲಹೆ ಸೂಚನೆಗಳನ್ನು ನೀಡಿದರು.

ಈ ಸಂಬಂಧ ರಾಷ್ಟ್ರೀಯ ಹೆದ್ದಾರಿಯ ತಿರುವು, 66 ಕೆ.ವಿ. ವಿದ್ಯುತ್ ಲೈನ್ ಸ್ಥಳಾಂತರ ಕುರಿತಂತೆ ಸಲಹೆ ಸೂಚನೆಗಳನ್ನು ನೀಡಿದರು. ಇದಕ್ಕೂ ಮುನ್ನ ವಿಮಾನ ನಿಲ್ದಾಣದ ನಿರ್ದೇಶಕಿ ಪಿ.ವಿ. ಉಷಾ ಕುಮಾರಿ, ರನ್‌ವೇ ವಿಸ್ತರಣೆಗೆ ಸಂಬಂಧಿಸಿದಂತೆ ವಿವರಗಳನ್ನು ಸಭೆಗೆ ತಿಳಿಸಿದರು. ಅಲ್ಲದೆ, ಪ್ರಯಾಣಿಕ ಸೇವೆಗಳನ್ನು ಹೆಚ್ಚಿಸಲು ಹಾಗೂ ನಿಲ್ದಾಣದ ಮೂಲಸೌಕರ್ಯಗಳನ್ನು ಸುಧಾರಿಸಲು ವಹಿಸುತ್ತಿರುವ ಕ್ರಮಗಳ ಬಗ್ಗೆಯೂ ಸಭೆಗೆ ಮಾಹಿತಿ ಒದಗಿಸಿದರು.

ಪ್ರಯಾಣಿಕರ ಸೌಲಭ್ಯಗಳು ಮತ್ತು ಕಾರ್ಯಾಚರಣೆಯ ದಕ್ಷತೆಯನ್ನು ಮತ್ತಷ್ಟು ಬಲಪಡಿಸಲು ಸಮಿತಿ ಸದಸ್ಯರು ಸಲಹೆಗಳನ್ನು ನೀಡಿದರು. ಇದಕ್ಕೆ ಪ್ರತಿಕ್ರಿಯಿಸಿದ ನಿಲ್ದಾಣದ ನಿರ್ದೇಶಕಿ ಉಷಾ ಕುಮಾರಿ, ಸಲಹೆಗಳನ್ನು ಪರಿಶೀಲಿಸಿ ಸಾಧ್ಯವಾದವನ್ನು ಕಾರ್ಯಗತಗೊಳಿಸಲಾಗುವುದು ಎಂದು ಹೇಳಿದರು. ಅಪರ ಜಿಲ್ಲಾಧಿಕಾರಿ ಡಾ.ಶಿವರಾಜು ಮತ್ತಿತರರು ಪಾಲ್ಗೊಂಡಿದ್ದರು.

ಪತ್ನಿ ಹಂತಕನಿಗೆ ಜೀವಾವಧಿ ಶಿಕ್ಷೆ

ಮೈಸೂರು, ನ.29-ಪತ್ನಿಯನ್ನು ಹತ್ಯೆ ಮಾಡಿದ ಪತಿರಾಯನಿಗೆ ಜೀವಾವಧಿ ಶಿಕ್ಷೆಯನ್ನು ವಿಧಿಸಿ ಮೈಸೂರಿನ 5ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಶ್ರೀಮತಿ ಕೆ.ಎನ್.ರೂಪಾ ಅವರು ತೀರ್ಪು ನೀಡಿದ್ದಾರೆ.

ಪಿರಿಯಾಪಟ್ಟಣ ತಾಲೂಕು ಹೊನ್ನೇನಹಳ್ಳಿ ಗ್ರಾಮದ ನಿವಾಸಿ ಕುಮಾರ್ ಶಿಕ್ಷೆಗೊಳಗಾದವನಾಗಿದ್ದು, ಈತ ಪತ್ನಿ ಪ್ರೇಮ ಅವರ ಕುತ್ತಿಗೆಗೆ ಟವಲ್‌ನಿಂದ ಬಿಗಿದು ಹತ್ಯೆ ಮಾಡಿದ್ದ.

ವಿವರ: ಕಳೆದ 18 ವರ್ಷದ ಹಿಂದೆ ಹೊನ್ನೇನಹಳ್ಳಿ ಗ್ರಾಮದವಳೇ ಆದ ಪ್ರೇಮ ಅವರನ್ನು ಕುಮಾರ ವಿವಾಹವಾಗಿದ್ದ. ಸದಾ ಕಾಲ ಪತ್ನಿಯನ್ನು ಅನುಮಾನದಿಂದ ನೋಡುತ್ತಿದ್ದ ಈತ, ಪದೇ ಪದೆ ಆಕೆಗೆ ದೈಹಿಕ ಹಾಗೂ ಮಾನಸಿಕ ಕಿರುಕುಳ ನೀಡುತ್ತಿದ್ದ. ಗ್ರಾಮದ ಹಿರಿಯರು ಈತನಿಗೆ ಬುದ್ಧಿವಾದ ಹೇಳುತ್ತಾ ಬಂದಿದ್ದರು.

2023ರ ನ.22ರಂದು ಕೆ.ಆರ್.ನಗರ ತಾಲೂಕು ಬೈಲಾಪುರ ದೇವಸ್ಥಾನದ ಬಳಿ ನಡೆದ ಸಂಬಂಧಿಕರ ವಿವಾಹಕ್ಕೆ ಹೋಗಿ ಸಂಜೆ ಹಿಂದುರಿಗಿದ ಪ್ರೇಮ ಅವರ ಮೇಲೆ ಹಲ್ಲೆ ನಡೆಸಿದ್ದಲ್ಲದೇ ರಾತ್ರಿ ಅವರು ಮಲಗಿದ್ದಾಗ ಕುತ್ತಿಗೆಗೆ ಟವಲ್ ಸುತ್ತಿ ಹತ್ಯೆಗೈದಿದ್ದನು.

ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದ ಪಿರಿಯಾಪಟ್ಟಣ ಠಾಣೆಯ ಪೊಲೀಸರು ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಾಧೀಶರು, ಕುಮಾರನಿಗೆ ಜೀವಾವಧಿ ಶಿಕ್ಷೆ ಮತ್ತು 1.25 ಲಕ್ಷ ರೂ. ದಂಡ ವಿಧಿಸಿ ತೀರ್ಪು ನೀಡಿದ್ದಾರೆ. ಸರ್ಕಾರದ ಪರವಾಗಿ ಈ ನ್ಯಾಯಾಲಯದ ಹಿಂದಿನ ಸರ್ಕಾರಿ ಅಭಿಯೋಜಕರಾದ ಬಿ.ಇ.ಯೋಗೇಶ್ವರ ವಾದ ಮಂಡಿಸಿದ್ದರು.

ಆಧುನಿಕ ನಗರಿಕರಣದಲ್ಲಿ ರಾಯಲ್ ದೃಷ್ಟಿಕೋನ ; ಮೈಸೂರು ಪರಂಪರೆ ಕುರಿತು ಕಾರ್ಯಾಗಾರ

ಸಾಂಪ್ರದಾಯಿಕ ವಾಸ್ತುಶಿಲ್ಪ ಶೈಲಿ, ಪ್ರಾದೇಶಿಕ ಸಂಸ್ಕೃತಿ ಉಳಿಸಿಕೊಳ್ಳುವುದು ಅಗತ್ಯ

ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಅಭಿಮತ



ಮೈಸೂರು ವಿವಿ ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್‌ನ ಡಾ.ಕೆ.ಎಸ್.ರಂಗಪ್ಪ ಸಭಾಂಗಣದಲ್ಲಿ ಇಂಡಿಯನ್ ಶನಿವಾರ ಕಾರ್ಯಾಗಾರ ಉದ್ಘಾಟಿಸಲಾಯಿತು.

ಮೈಸೂರು,ನ.29(ಪಿಎಂ)- ಮೈಸೂರಿನ ಸಾಂಪ್ರದಾಯಿಕ ವಾಸ್ತುಶಿಲ್ಪ ಶೈಲಿ ಹಾಗೂ ಪ್ರಾದೇಶಿಕ ಸಂಸ್ಕೃತಿಯನ್ನು ಉಳಿಸಿಕೊಳ್ಳುವುದು ಅಗತ್ಯ ಎಂದು ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಹೇಳಿದರು.

ಮಾನಸ ಗಂಗೋತ್ರಿಯ ಮೈಸೂರು ವಿವಿ ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್‌ನ ಡಾ.ಕೆ.ಎಸ್.ರಂಗಪ್ಪ ಸಭಾಂಗಣದಲ್ಲಿ ಇಂಡಿಯನ್ ಟೌನ್ ಪ್ಲಾನರ್ಸ್ ಇನ್ಸಿಟ್ಯೂಟ್ (ಐಟಿಪಿಐ) ಕರ್ನಾಟಕ ಪ್ರಾದೇಶಿಕ ಘಟಕ ಹಾಗೂ ಮೈಸೂರು ಪ್ರಾದೇಶಿಕ ಘಟಕದ ಸಂಯುಕ್ತಾಶ್ರಯದಲ್ಲಿ ವಿಶ್ವ ನಗರ ಯೋಜನಾ ದಿನ, ವಿಶ್ವ ನಗರಿಕರಣ ದಿನ (ನ.8) ಹಾಗೂ ವಿಶ್ವ ಪರಂಪರೆ ವಾರ (ನ.19-25) ಸಪ್ತಾಹ ಪ್ರಯುಕ್ತ 'ಆಧುನಿಕ ನಗರೀಕರಣದಲ್ಲಿ ರಾಯಲ್ ದೃಷ್ಟಿಕೋನ ; ಮೈಸೂರು ಪರಂಪರೆ' ಶನಿವಾರ ಹಮ್ಮಿಕೊಂಡಿದ್ದ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

ಅಗತ್ಯವಾದ ಆಧುನಿಕ ವಾಸ್ತುಶಿಲ್ಪ ಶೈಲಿಯ ಬಳಕೆಯ ಜೊತೆಗೂ ಮೈಸೂರಿನ ಸಾಂಪ್ರದಾಯಿಕ ವಾಸ್ತುಶಿಲ್ಪ ಉಳಿಸಿಕೊಳ್ಳಲು ಆದ್ಯತೆ ನೀಡಬೇಕು. ವಾಸ್ತುಶಿಲ್ಪವು ಸಮಾಜದ ಸಾಂಸ್ಕೃತಿಕತೆ ಮತ್ತು ಅಸ್ಮಿತೆಯನ್ನು ಪ್ರತಿಬಿಂಬಿಸಬೇಕು. ಚಂಡೀಗಢ, ದೆಹಲಿ, ಬಾರ್ಸಿಲೋನಾ, ನೆದರ್ಲ್ಯಾಂಡ್ಸ್ ಮತ್ತು ಜರ್ಮನಿಯಲ್ಲಿ ಪರಂಪರೆಯ ರೂಪಗಳು ಮತ್ತು ನಗರ ಯೋಜನಾ ತತ್ವಗಳನ್ನು ರಕ್ಷಿಸಲು ಆದ್ಯತೆ ನೀಡಲಾಗುತ್ತಿದೆ. ವಾಸ್ತುಶಿಲ್ಪ ಮತ್ತು ಯೋಜನಾ ವಿದ್ಯಾರ್ಥಿಗಳು ಸಂಶೋಧನಾ ಆಧಾರಿತ ಪ್ರಸ್ತಾವನೆಗಳನ್ನು ಸಿದ್ಧಪಡಿಸಬೇಕು ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಮೈಸೂರು ವಿವಿ ಕುಲಸಚಿವೆ ಎಂ.ಕೆ.ಸವಿತಾ ಮಾತನಾಡಿ, ನಾಲ್ವಡಿ ಕೃಷ್ಣರಾಜ ಒಡೆಯರ್ ಮೈಸೂರನ್ನು ಯೋಜಿತ ನಗರವಾಗಿ ರೂಪುಗೊಳ್ಳಲು ಬುನಾದಿ ಹಾಕಿದರು. ಮೈಸೂರಿನ ಕುರಿತು ಸಂಶೋಧನೆ, ಅಧ್ಯಯನ ಮತ್ತು ಯೋಜನಾ ಕಾರ್ಯವನ್ನು ಕೈಗೊಂಡು ಮೈಸೂರು ನಗರದ ಅಭಿವೃದ್ಧಿಗೆ ಕೊಡುಗೆ ನೀಡುವಂತೆ ವಿದ್ಯಾರ್ಥಿಗಳು ಮತ್ತು ಬೋಧಕರಿಗೆ ಸಲಹೆ ನೀಡಿದರು.

ಐಟಿಪಿಐ ಮೈಸೂರು ಪ್ರಾದೇಶಿಕ ಘಟಕದ ಸಂಯೋಜಕ ಡಾ.ಬಿ.ಶಂಕರ್ ಮಾತನಾಡಿ, ಪ್ಯಾರಿಸ್, ರೋಮ್, ಬಾರ್ಸಿಲೋನಾ, ಕಿಯೋಟೊ ಮತ್ತು ಲಂಡನ್ ನಗರಗಳಲ್ಲಿ ಪರಂಪರೆ ಸಂರಕ್ಷಣೆ ಮತ್ತು ಆಧುನಿಕ ನಗರಾಭಿವೃದ್ಧಿ ನಡುವೆ ಸಮನ್ವಯತೆ ಮಾದರಿಗಳನ್ನು ಕಾಣಬಹುದು. ಅದೇ ರೀತಿಯ ಮಾದರಿಯನ್ನು ಮೈಸೂರಿಗೂ ಅಳವಡಿಸಿಕೊಳ್ಳುವ ಅಗತ್ಯವಿದೆ ಎಂದು ಹೇಳಿದರು.

ಐಟಿಪಿಐ ಕರ್ನಾಟಕ ಪ್ರಾದೇಶಿಕ ಘಟಕದ ಅಧ್ಯಕ್ಷ ಕೆ.ಎನ್.ನಾರಾಯಣಗೌಡ, ಐಟಿಪಿಐ ನವದೆಹಲಿ ಐಟಿಪಿಐ ಕೌನ್ಸಿಲ್ ಸದಸ್ಯರಾದ ಎಸ್.ಬಿ.ಹೊನ್ನೂರು, ಎಂ.ಸಿ.ಶಶಿಕುಮಾರ್, ಮೈಸೂರು ವಿವಿ ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್ ವಿಭಾಗದ ಮುಖ್ಯಸ್ಥ ಡಾ.ಹೆಚ್.ಎನ್.ನಾಗೇಂದ್ರ, ನಿರ್ದೇಶಕ ಪ್ರೊ.ಪ್ರಮೋದ್ ಎಂ.ಗವಾರಿ, ಐಟಿಪಿಐ ಮೈಸೂರು ಪ್ರಾದೇಶಿಕ ಕೇಂದ್ರದ ಕಾರ್ಯದರ್ಶಿ ಡಾ.ಎಸ್.ಯಶಸ್ವಿನಿ ಮತ್ತಿತರರು ಹಾಜರಿದ್ದರು.

ಇಂದು ಶ್ರೀ ಶಿವರಾತ್ರೀಶ್ವರ ಜಯಂತಿ:

ಮಂಟಪಕ್ಕೆ ಭೂಮಿಪೂಜೆ, ಪ್ರಸಾರ ರಥಕ್ಕೂ ಚಾಲನೆ

ಮೈಸೂರು, ನ. 29- ಸುತ್ತೂರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನಾಚಾರ್ಯರಾದ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ 1066ನೇ ಜಯಂತಿ ಮಹೋತ್ಸವವು ಡಿಸೆಂಬರ್ ತಿಂಗಳಿನಲ್ಲಿ ಮಂಡ್ಯ ಜಿಲ್ಲೆಯ ಮಳವಳ್ಳಿಯಲ್ಲಿ ನೆರವೇರಲಿದೆ.

ಜಯಂತಿ ಮಹೋತ್ಸವದ ಸಭಾ ಮಂಟಪ ಹಾಗೂ ಇತರ ಮಂಟಪಗಳ ಭೂಮಿ ಪೂಜೆಯನ್ನು ನಾಳೆ (ನ. 30) ಬೆಳಗ್ಗೆ 10.30 ಗಂಟೆಗೆ ನೆರವೇರಿಸಲಾಗುತ್ತದೆ. ಕಾರ್ಯಕ್ರಮವು ಸುತ್ತೂರು ಶ್ರೀಗಳವರ ದಿವ್ಯ ಸಾನ್ನಿಧ್ಯದಲ್ಲಿ, ಕನಕಪುರ ಶ್ರೀ ದೇಗುಲ ಮಠದ ಉಭಯ ಶ್ರೀಗಳು ಹಾಗೂ ತಾಲೂಕಿನ ಮಠಾಧಿಪತಿಗಳ ಸಮ್ಮುಖದಲ್ಲಿ ನೆರವೇರಲಿದೆ.

ಕ್ಯಾಬ್ ದರೋಡೆ ಪ್ರಕರಣ ಭೇದಿಸಿದ ಬಿಡದಿ ಪೊಲೀಸರು

ಮೈಸೂರಿನ ಆರು ಮಂದಿ ಸೇರಿ ಎಂಟು ಜನರ ಸೆರೆ

● ಬಂಧಿತರಲ್ಲಿ ನಾಲ್ವರು ಅಪ್ರಾಪ್ತೆಯರು ● ಮೋಜು-ಮಸ್ತಿಗೆ ದರೋಡೆಗಿಳಿದ ಯುವಪಡೆ! ● ಬಂಧಿತರಿಂದ 16 ಲಕ್ಷ ರೂ. ಮೌಲ್ಯದ 3 ಕಾರು, 1 ಆಟೋ, 6 ದ್ವಿಚಕ್ರ ವಾಹನಗಳು ಹಾಗೂ ಕೃತ್ಯಕ್ಕೆ ಬಳಸಿದ ಮಾರಕಾಸ್ತ್ರಗಳ ವಶ



ಮೈಸೂರು, ನ. 29 (ಆರ್‌ಕೆ)- ಹಲವು ದರೋಡೆ ಪ್ರಕರಣಗಳಲ್ಲಿ ಭಾಗಿಯಾಗಿ ತಲೆಮರೆಸಿಕೊಂಡಿದ್ದ ಮೈಸೂರಿನ ನಾಲ್ವರು ಅಪ್ರಾಪ್ತೆಯರು, ಯುವಕರಿಬ್ಬರೂ ಸೇರಿ 8 ಮಂದಿಯನ್ನು ಬಿಡದಿ ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಮೂಲತಃ ಮೈಸೂರಿನ ಸಿದ್ಧಾರ್ಥ ಬಡಾವಣೆಯವನಾದ ನಂಜನಗೂಡು ತಾಲೂಕು ಕವಲಂದೆ ಗ್ರಾಮದ ನಿವಾಸಿ ಸದ್ದಾಂ ಹುಸೇನ್, ಕುರುಬರಹಳ್ಳಿ ಜಂಕ್ಷನ್ ಬಳಿಯ ನಿವಾಸಿ ಶಿವಪ್ರಸಾದ್, ಬೆಂಗಳೂರಿನ ಪಾದರಾಯನ ಪುರ ನಿವಾಸಿ ಕಬೀರ್ ಅಲಿಯಾಸ್ ಕಾಲು ಹಾಗೂ ಬಳ್ಳಾರಿ ನಗರದ ಯಶವಂತ್ ಕುಮಾರ್ ಮತ್ತು ಮೈಸೂರಿನ ನಜರ್‌ಬಾದ್‌ನ ನಾಲ್ವರು ಯುವತಿಯರು ಬಂಧಿತರು. ಅವರಿಂದ 16 ಲಕ್ಷ ರೂ. ಮೌಲ್ಯದ 3 ಕಾರುಗಳು, 6 ದ್ವಿಚಕ್ರ ವಾಹನಗಳು, 1 ಆಟೋ ಹಾಗೂ ದರೋಡೆಗೆ ಬಳಸುತ್ತಿದ್ದ ಮಾರಕಾಸ್ತ್ರಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ನವೆಂಬರ್ 18 ರಂದು ರಾತ್ರಿ ಬೆಂಗಳೂರಿನಿಂದ ಬಿಡದಿ ಬಳಿಯ ಜೋಗನಪಾಳ್ಯ ಗ್ರಾಮಕ್ಕೆ ಡ್ರಾಪ್ ಕೇಳಿ ಕಾರೊಂದನ್ನು ಬುಕ್ ಮಾಡಿಕೊಂಡು ನಾಲ್ವರು ಹುಡುಗಿಯರು ಹಾಗೂ ನಾಲ್ವರು ಯುವಕರು ಬಿಡದಿ ಪೊಲೀಸ್ ಠಾಣಾ ವ್ಯಾಪ್ತಿ ಬನ್ನಿಗಿರಿ ರಸ್ತೆ ಕಡೆ ಬರುವಾಗ ರಾತ್ರಿ ಸುಮಾರು 9.30 ಗಂಟೆಯಲ್ಲಿ ಕಾರು ಚಾಲಕ ಸ್ವಾಮಿಗೌಡ (39) ನ ಮೇಲೆ ಕಬ್ಬಿಣದ ರಾಡಿನಿಂದ ಹಲ್ಲೆ ನಡೆಸಿ, ಆತನನ್ನು ಹೊರದೂಡಿ ಕಾರು ದರೋಡೆ ಮಾಡಿಕೊಂಡು ಪರಾರಿಯಾಗಿದ್ದರು.

ಈ ಸಂಬಂಧ ಸ್ವಾಮಿಗೌಡ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡಿದ್ದ ಬಿಡದಿ ಠಾಣೆ ಇನ್ಸ್‌ಪೆಕ್ಟರ್ ಶಂಕರ್ ನಾಯಕ್ ಅವರು ತನಿಖೆ ಆರಂಭಿಸಿದ್ದರು. ನ. 21 ರಂದು ಗಸ್ತು ಕರ್ತವ್ಯದಲ್ಲಿದ್ದಾಗ ಬೆಂಗಳೂರಿನ ಹೆಜ್ಜಾಲ ಬಳಿ ಸದರಿ ಕಾರಿನಲ್ಲಿ ಪರಾರಿಯಾಗುತ್ತಿದ್ದ ಆರೋಪಿಗಳನ್ನು ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಠಾಣೆಗೆ ಕರೆತಂದು ವಿಚಾರಣೆ ನಡೆಸಿದಾಗ ಅವರು ಬಿಡದಿ, ಕನಕಪುರ, ಚನ್ನಪಟ್ಟಣ, ಮಳವಳ್ಳಿ, ಶಿವಮೊಗ್ಗ, ಶ್ರೀರಂಗಪಟ್ಟಣ ಸೇರಿದಂತೆ ಹಲವು ಕಡೆ ದರೋಡೆ ಪ್ರಕರಣ ನಡೆಸಿರುವುದು ಬೆಳಕಿಗೆ ಬಂದಿದೆ.

ಬೇರೆ ಪ್ರಕರಣಗಳಲ್ಲಿ ದರೋಡೆ ಮಾಡಿದ್ದ ಕಾರುಗಳು, ದ್ವಿಚಕ್ರ ವಾಹನ ಹಾಗೂ ಆಟೋಗಳನ್ನು ವಶಪಡಿಸಿಕೊಂಡ ಪೊಲೀಸರು ಬಂಧಿತ ನಾಲ್ವರು ಯುವಕರನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಗಿ ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಯಿತು. ಅಪ್ರಾಪ್ತೆಯರನ್ನು ಸರ್ಕಾರಿ ಬಾಲಕಿಯರ ಬಾಲಮಂದಿರದ ವಶಕ್ಕೆ ನೀಡಲಾಗಿದೆ ಎಂದು ಬಿಡದಿ ಪೊಲೀಸರು 'ಮೈಸೂರು ಮಿತ್ರ' ನಿಗೆ ತಿಳಿಸಿದ್ದಾರೆ.

ಕಳೆದ 6 ತಿಂಗಳಿಂದೀಚೆಗೆ ಮೈಸೂರಿನ ನಜರ್‌ಬಾದ್ ಸುತ್ತಮುತ್ತ ರಸ್ತೆಬದಿಯಲ್ಲಿ ಭಿಕ್ಷೆ ಬೇಡುತ್ತಿದ್ದ ನಾಲ್ವರು ಅಪ್ರಾಪ್ತೆಯರನ್ನು ಪ್ರೀತಿಸುವುದಾಗಿ ಪುಸಲಾಯಿಸಿ ಕರೆದೊಯ್ದು ಬೆಂಗಳೂರು ಸೇರಿದಂತೆ ಇತರೆಡೆ ದರೋಡೆ ಮಾಡುತ್ತಿದ್ದ ನಾಲ್ವರು ಯುವಕರು ಆಗಿಂದಾಗ್ಗೆ ಜಾಲಿರೈಡ್‌ಗೆಂದು ಕಾರುಗಳನ್ನು ಕದಿಯುತ್ತಿದ್ದರು ಎಂಬುದು ವಿಚಾರಣೆ ವೇಳೆ ತಿಳಿದು ಬಂದಿದೆ. ತನಿಖೆ ನಡೆಸುತ್ತಿದ್ದಾಗ ಟೋಲ್ ಬಳಿ ಹಾಗೂ ಇತರೆಡೆಯ ಸಿಸಿ ಕ್ಯಾಮರ ದೃಶ್ಯಾವಳಿಗಳು ಆರೋಪಿಗಳ ಪತ್ತೆ ಹಚ್ಚಲು ಪೊಲೀಸರಿಗೆ ಸಹಕಾರಿಯಾಗಿದ್ದವು ಎನ್ನಲಾಗಿದೆ.

ಬೆಂಗಳೂರು ದಕ್ಷಿಣ ಜಿಲ್ಲಾ ಎಸ್ಪಿ ಆರ್.ಶ್ರೀನಿವಾಸ ಗೌಡ ಅವರ ನಿರ್ದೇಶನದಂತೆ ಅಡಿಷನ್ ಎಸ್ಪಿಗಳಾದ ರಾಮಚಂದ್ರ, ರಾಜೇಂದ್ರ ಅವರ ಮಾರ್ಗದರ್ಶನದಲ್ಲಿ ಡಿವೈಎಸ್ಪಿ ಬಿ.ಎನ್. ಶ್ರೀನಿವಾಸ್ ಸೂಚನೆಯಂತೆ ನಡೆದ ಪತ್ತೆ ಕಾರ್ಯಾಚರಣೆಯಲ್ಲಿ ಬಿಡದಿ ಠಾಣೆ ಇನ್ಸ್‌ಪೆಕ್ಟರ್ ಶಂಕರ್ ನಾಯಕ್, ಸಬ್‌ಇನ್ಸ್‌ಪೆಕ್ಟರ್‌ಗಳಾದ ಕೇಶವ ಪ್ರಸಾದ್, ನಾಗರಾಜು, ಅಣ್ಣಯ್ಯ ಹಾಗೂ ಸಿಬ್ಬಂದಿ ಪಾಲ್ಗೊಂಡಿದ್ದರು.

ಶಾಸ್ತ್ರೀಯ ಕನ್ನಡ ಅಧ್ಯಯನ ಕೇಂದ್ರಕ್ಕೆ ಯಾವ ಸ್ವರೂಪದಲ್ಲಿ ಸ್ವಾಯತ್ತತೆ ನೀಡಬೇಕೆಂದು ಚರ್ಚೆ ನಡೆದಿಲ್ಲ

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಿಳಿಮಲೆ ವಿಷಾದ



ಮೈಸೂರು ಕಾಡಾ ಕಚೇರಿ ಆವರಣದ ಸಂಸದ ಕಚೇರಿಯಲ್ಲಿ ಸಂಸದ ಯದುವೀರ್ ಒಡೆಯರ್ ಅವರು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಪುರುಷೋತ್ತಮ್ ಬಿಳಿಮಲೆ ನಿಯೋಗದೊಂದಿಗೆ ಚರ್ಚೆ ನಡೆಸಿದರು.

ಮೈಸೂರು, ನ.29(ಎಸ್‌ಪಿಎನ್)- ಮೈಸೂರಿನ ಭಾರತೀಯ ಭಾಷಾ ಸಂಸ್ಥಾನದಲ್ಲಿರುವ 'ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರಕ್ಕೆ ಸ್ವಾಯತ್ತೆ ಕೊಡಬೇಕೆಂಬುದರಲ್ಲಿ ಯಾವುದೇ ತಕರಾರಿಲ್ಲ. ಆದರೆ, ಯಾವ ಸ್ವರೂಪದಲ್ಲಿ ಸ್ವಾಯತ್ತೆ ಪಡೆಯಬೇಕು ಎಂಬುದರ ಬಗ್ಗೆ ಇಲ್ಲಿಯವರೆಗೂ ಚರ್ಚೆ ನಡೆದಿಲ್ಲ. ಇದಕ್ಕೆ ಕಾರಣ ಹುಡುಕಬೇಕು ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಪುರುಷೋತ್ತಮ್ ಬಿಳಿಮಲೆ ಅಭಿಪ್ರಾಯಪಟ್ಟರು.

ಮೈಸೂರು ಕಾಡಾ ಕಚೇರಿ ಆವರಣದ ಸಂಸದ ಕಚೇರಿಯಲ್ಲಿ ಸಂಸದ ಯದುವೀರ್ ಕೃಷ್ಣದತ್ತ ಒಡೆಯರ್ ಅವರೊಂದಿಗೆ ನಡೆದ ಸಭೆಯಲ್ಲಿ ಹಲವು ವಿಚಾರಗಳನ್ನು ಚರ್ಚಿಸಿದ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದರು.

ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರವನ್ನು ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ 2008ರಲ್ಲಿ ಕನ್ನಡ ಸಂಶೋಧನೆ, ದಾಖಲೀಕರಣ, ಪ್ರಚಾರ ಮತ್ತು ಬೋಧನೆಗಳನ್ನು ಸುಧಾರಿಸುವುದು, ಶಾಸ್ತ್ರೀಯ ಭಾಷಾ ಆಕರಗಳನ್ನು ಗುರುತಿಸುವುದು. ಇತರೆ ಶಾಸ್ತ್ರೀಯ ಭಾಷೆಗಳ ಅಧ್ಯಯನಕ್ಕೆ ಸಂಪರ್ಕವನ್ನು ಒದಗಿಸುವ ಇದರ ಮುಖ್ಯ ಉದ್ದೇಶದಿಂದ ಆರಂಭಿಸಿತು. ಆದರೆ, ಈ ಕೇಂದ್ರವನ್ನು ಭಾಷಾ ಸಂಸ್ಥಾನದಿಂದ ಪ್ರತ್ಯೇಕಗೊಳಿಸದೆ ಈಗಿನ ಸ್ವರೂಪದಲ್ಲಿ ಮುಂದುವರೆಸಿದರೆ ಕನ್ನಡ ಭಾಷೆ ಕುರಿತು ಸಂಶೋಧನೆ ನಡೆಸುವುದು ಕಷ್ಟ ಎಂದರು.

ಈ ಕೇಂದ್ರದಲ್ಲಿ ಶಾಸ್ತ್ರೀಯ ಭಾಷೆಗೆ ಸಂಬಂಧಿಸಿದ ಪುಸ್ತಕಗಳನ್ನು ಪ್ರಕಟಿಸುವುದು. ಶಾಸನಶಾಸ್ತ್ರ, ಪುರಾತತ್ವ ಶಾಸ್ತ್ರ, ಪ್ರಾಚೀನ ಇತಿಹಾಸ ಅಧ್ಯಯನ ಹಾಗೂ ಅಂತರ್ ಶಾಸ್ತ್ರೀಯ ಸಂಶೋಧನೆಗೆ ಅವಕಾಶಗಳನ್ನು ಸೃಷ್ಟಿಸಲು ಆದ್ಯತೆ ನೀಡಬೇಕು. ಆದರೆ, ಇಲ್ಲಿಯವರೆಗೂ ಆ ಕೆಲಸವಾಗಿಲ್ಲ. ಈ ಕೇಂದ್ರವನ್ನು ಪ್ರತ್ಯೇಕಗೊಳಿಸುವ ಕುರಿತು 2019ರವರೆಗೂ ಚರ್ಚೆಯಲ್ಲಿತ್ತು. ಆದರೆ, ಕೊರೊನಾ ನಂತರ ಈ ಕುರಿತು ರಾಜ್ಯ ಮತ್ತು ಕೇಂದ್ರ ಸರ್ಕಾರ ಯಾವುದೇ ಚರ್ಚೆ ನಡೆಸಿಲ್ಲ ಎಂದು ಬೇಸರ ಹೊರಹಾಕಿದರು.

ಕನ್ನಡ ಭಾಷೆಗೆ 2008ರಲ್ಲಿ ಶಾಸ್ತ್ರೀಯ ಸ್ಥಾನಮಾನ ಘೋಷಣೆಯಾಗಿದೆ. 2011ರಲ್ಲಿ ಭಾರತೀಯ ಭಾಷಾ ಸಂಸ್ಥಾನ ಸಂಸ್ಥೆಯಲ್ಲಿ ಅಧಿಕೃತವಾಗಿ ಕಚೇರಿ ಆರಂಭವಾಗಿದೆ. ಪ್ರಸ್ತುತ ಕೇಂದ್ರವು ಮಾನಸಗಂಗೋತ್ರಿ ಎನ್.ಸಿ.ಎಚ್.ಎಸ್. ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಇದರೊಂದಿಗೆ ಪ್ರತ್ಯೇಕವಾಗಿ ಕೇಂದ್ರ ಸ್ಥಾಪಿಸಲು ರಾಜ್ಯ ಸರಕಾರವು ಮೈಸೂರು ವಿವಿಗೆ ಸೇರಿದ 4.02 ಎಕರೆ ಜಾಗವನ್ನು ಗುರುತಿಸಿದ್ದರೂ, ಆ ಜಾಗ ಯಾವ ಹೆಸರಿನಲ್ಲಿ, ಯಾವ ಸ್ವರೂಪದಲ್ಲಿ ನೋಂದಣಿಯಾಗಬೇಕು. ಈ ಕೇಂದ್ರದ ಕಾರ್ಯಚಟುವಟಿಕೆಗೆ ಯಾವ ಸ್ಥಾನಮಾನ ದೊರಕಬೇಕು ಎಂಬುದರ ಕೂಲಂಕುಷ ಚರ್ಚೆಯಾಗಬೇಕು. ಹಾಗೂ ಈ ಸ್ಥಳದಲ್ಲಿ ಹೊಸ ಕಟ್ಟಡ ನಿರ್ಮಿಸುವ ಮೂಲಕ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರಕ್ಕೆ ಹೆಚ್ಚಿನ ಅನುದಾನ ಕೇಂದ್ರದಿಂದ ಪಡೆಯಲು ಎಲ್ಲರೂ ಒಂದು ತಂಡವಾಗಿ ಕೆಲಸ ಮಾಡಬೇಕು ಎಂದು ಮನವಿ ಮಾಡಿದರು.

> 'ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರಕ್ಕೆ ಸ್ವಾಯತ್ತ ಸ್ಥಾನಮಾನ ಕೊಡಿಸುವ ನಿಟ್ಟಿನಲ್ಲಿ ಸಂಬಂಧ ಕೇಂದ್ರ ಸಚಿವರೊಂದಿಗೆ ಸಂಪರ್ಕದಲ್ಲಿದ್ದೇನೆ. ಈ ಕೆಲಸದಲ್ಲಿ ಎಲ್ಲರೂ ಒಂದು ತಂಡವಾಗಿ ಕೆಲಸ ಮಾಡಬೇಕು. ಇದರಲ್ಲಿ ನನ್ನ ಕರ್ತವ್ಯವೇನು ಎಂಬುದರ ಬಗ್ಗೆ ಮಾಹಿತಿ ನೀಡಿ.
>
> -ಯದುವೀರ್ ಒಡೆಯರ್, ಸಂಸದರು

ಸಂಸದ ಯದುವೀರ್, ಈ ವಿಚಾರವಾಗಿ ಈಗಾಗಲೇ ಎರಡ್ಮೂರು ಪತ್ರಗಳನ್ನು ಸಂಬಂಧಪಟ್ಟ ಕೇಂದ್ರ ಸಚಿವರಿಗೆ ಬರೆದಿದ್ದಾರೆ. ಈ ನಿಟ್ಟಿನಲ್ಲಿ ನಾವೂ ಕೂಡ ಕೆಲಸ ಮಾಡುತ್ತಿದ್ದೇವೆ. ಈ ನಿಟ್ಟಿನಲ್ಲಿ ಮಾಧ್ಯಮಗಳ ಸಹಕಾರವೂ ಮುಖ್ಯ. ಈ ಕೆಲಸಕ್ಕೆ ಸಂಸದರೂ ಕೂಡ ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನಕ್ಕಾಗಿ ಕೇಂದ್ರ ಸಚಿವರೊಂದಿಗೆ ಸಂಪರ್ಕದಲ್ಲಿದ್ದಾರೆ ಎಂದರು.

ಈ ವೇಳೆ ಭಾರತೀಯ ಭಾಷಾ ಸಂಸ್ಥಾನದ ನಿರ್ದೇಶಕ ಪ್ರೊ.ಶೈಲೇಂದ್ರ ಮೋಹನ್, ಪ್ರೊ.ನೀಲಗಿರಿ ತಳವಾರ್, ಅರವಿಂದ ಶರ್ಮಾ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸದಸ್ಯ ಟಿ.ಗುರುರಾಜ್, ಒಕ್ಕಲಿಗರ ವಿಕಾಸ ವೇದಿಕೆಯ ಯಮುನಾ, ಅದಕ್ಕೆ ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಇತಿಹಾಸ ತಜ್ಞ ಪ್ರೊ.ನಂಜರಾಜ ಅರಸ್ ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಗುಂಡ : ಲಾರಿ ಡ್ರೈವರ್ ಒನ್ ವೇ (ನೋ ಎಂಟ್ರಿ)ಯಲ್ಲಿ ಹೋದ್ರು ಟ್ರಾಫಿಕ್ ಪೊಲೀಸರು ಹಿಡಿಯೊಲ್ಲ ಏಕೆ?

ತಿಮ್ಮ : ಪೊಲೀಸರಿಗೆ ಲಂಚ ಕೊಟ್ಟಿರಬೇಕು

ಗುಂಡ : ಅಲ್ಲ, ಲಾರಿ ಡ್ರೈವರ್ ನಡ್ಕೊಂಡು ಹೋಗ್ತಿದ್ದ.

ಮೈಸೂರು ಮಿತ್ರ

ಭಾನುವಾರ, 30 ನವೆಂಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ಬದುಕು ಮನೆಯ ಕಿಟಕಿಯಂತೆ, ತೆರೆದರೆ ಬೆಳಕು, ಇಲ್ಲದಿದ್ದರೆ ಕತ್ತಲು. ಹಾಗೆಯೇ ಶ್ರಮಪಟ್ಟರೆ ಸುಖ, ಇಲ್ಲದಿದ್ದರೆ ದುಃಖ ಎಲ್ಲವೂ ನಮ್ಮ ಕೈಯಲ್ಲಿದೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕಾಲಕ್ಕೆ ತಕ್ಕಂತೆ ನಡಿಯಬೇಕು, ತಾಳಕ್ಕೆ ತಕ್ಕಂತೆ ಕುಣಿಯಬೇಕು.

ನಿಮ್ಮ ಪತ್ರಗಳು

ಅಂಚೆ ಕಚೇರಿ ವಿಶ್ವಾಸಾರ್ಹತೆಗೆ ಧಕ್ಕೆ

ಮಾನ್ಯರೆ,

ಮೈಸೂರು ಜಿಲ್ಲೆ ಸರಗೂರು ತಾಲೂಕಿನ ಅಂಚೆ ಕಚೇರಿಯಲ್ಲಿ ಪೋಸ್ಟ್ ಮಾಸ್ಟರ್ ಸೇರಿದಂತೆ ಅಲ್ಲಿನ ಸಿಬ್ಬಂದಿಗಳೇ ಷಾಮೀಲಾಗಿ 75 ಖಾತೆ ದಾರರ ಕೋಟ್ಯಂತರ ರೂ.ಗಳನ್ನು ದುರುಪಯೋಗ ಪಡಿಸಿಕೊಂಡಿರುವುದು ಸುಮಾರು 2–3 ತಿಂಗಳ ಹಿಂದೆಯೇ ನಡೆದಿತ್ತು. ಆಗ ಇಲಾಖೆ ಅಧಿಕಾರಿಗಳು ಎಲ್ಲಾ ಖಾತೆ ದಾರರಿಗೂ ಇಲಾಖೆಯಿಂದಲೇ ಹಣ ಹಿಂದಿರುಗಿಸಲಾಗುವುದು ಎಂದು ಹೇಳಿದ್ದರು. ಆದರೆ ಇನ್ನು ಹಿಂದಿರುಗಿಸಿಲ್ಲ. ಇದೀಗ ಜನರು ಮತ್ತೆ ಪ್ರತಿಭಟನೆ ನಡೆಸುತ್ತಿದ್ದಾರೆ. ಇಲಾಖೆ ಅಧಿಕಾರಿಗಳು, ಸಿಬ್ಬಂದಿಗಳನ್ನು ಅಮಾನತು ಮಾಡಲಾಗಿದೆ. ಪ್ರಕರಣ ವನ್ನು ಸಿಬಿಐ ತನಿಖೆ ಮಾಡಲು ಪತ್ರ ಬರೆಯಲಾಗಿದೆ ಎಂದು ತಿಳಿಸಿದ್ದಾರೆ. ಆದರೆ ಅವರ ವಿರುದ್ಧ ದೂರು ನೀಡಿ, ಎಫ್ಐಆರ್ ಹಾಕಿ ಬಂಧಿಸುವ ಕೆಲಸವನ್ನು ಮಾಡಿಲ್ಲ. ಇದು ಇಲಾಖೆಯ ಅಧಿಕಾರಿಗಳ ಅವ್ಯವಹಾರದ ಶಂಕೆಗೆ ಕಾರಣವಾಗಿದೆ. ಇದು ಅಂಚೆ ಕಚೇರಿಗಳ ವಿಶ್ವಾಸಾರ್ಹತೆಗೆ ಧಕ್ಕೆಯಾಗಿದೆ. ಇಲಾಖೆಯ ಉನ್ನತಾಧಿಕಾರಿಗಳು ಜನರ ಹಣವನ್ನು ಕೂಡಲೇ ಹಿಂದಿರುಗಿಸಿ, ಅಪಾದಿತ ನೌಕರರ ವೇತನದಿಂದ ಸದರಿ ಹಣವನ್ನು ವಸೂಲಿ ಮಾಡಿಕೊಳ್ಳುವ ಕೆಲಸವಾಗಲಿ. ಅಂಚೆ ಕಚೇರಿಗಳು ಜನರ ವಿಶ್ವಾಸ ಗಳಿಸಲು ಶಿಸ್ತು ಕ್ರಮ ಕೈಗೊಳ್ಳಲಿ.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

ಗೊಂದಲದಲ್ಲಿ ಮತದಾರ ಪ್ರಭು

ಮಾನ್ಯರೆ,

ರಾಜ್ಯದ ಕಾಂಗ್ರೆಸ್ಸಿನಲ್ಲೇ ಅಧಿಕಾರದ ಗುದ್ದಾಟ ದಿನೇ ದಿನೆ ತಾರಕಕ್ಕೇರಿದೆ. ಸಿಎಂ, ಡಿಸಿಎಂ ಅಧಿಕಾರದ ಹಂಚಿಕೆ ಮಾತುಕತೆ ನಡೆದಿದೆ ಎಂದು ಮತದಾರ ಪ್ರಭುಗಳ ಮುಂದೆ ಬಹಿರಂಗಪಡಿಸಲಿ. ದಿನೇ ದಿನೆ ಮತದಾರರಲ್ಲಿ ಗೊಂದಲಗಳು ಸೃಷ್ಟಿಯಾಗುತ್ತಿದೆ. ರಾಜ್ಯದ ಜನ ಬಹುಮತದಿಂದ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತಂದಿದ್ದಾರೆ. ಈಗ ಅವರನ್ನು ನಿರಾಶೆಗೊಳಿಸಬೇಡಿ. ಸರ್ಕಾರದ ಅಭಿವೃದ್ಧಿ ಕೆಲಸಗಳನ್ನು ನೋಡಬೇಕಾದ ಮತದಾರ ಪ್ರಭು ಅಧಿಕಾರ ಹಂಚಿಕೆಯ ವಿಷಯವನ್ನೇ ಮುಖ್ಯವಾಹಿನಿಯಲ್ಲಿ ನೋಡುವಂತಾಗಿದೆ. ಒಬ್ಬೊಬ್ಬ ನಾಯಕನ ಮಾತುಗಳು ಗೊಂದಲಮಯವಾಗಿದೆ. ಆದಷ್ಟು ಬೇಗ ಅಧಿಕಾರ ಹಂಚಿಕೆಯ ಸೂತ್ರವನ್ನು ಸರಿಪಡಿಸಿಕೊಳ್ಳಲಿ.

–ಪಿ.ಸಿ.ಕಂಗಾಣಿ ಸೋಮು, ಕ್ಯಾತಮಾರನಹಳ್ಳಿ, ಮೈಸೂರು

ಕನ್ನಡ ಶಾಲೆಗಳಿಗೆ ಆಧುನಿಕ ಕಟ್ಟಡಗಳು ಅಗತ್ಯ

ಮಾನ್ಯರೆ,

ಇತ್ತೀಚೆಗೆ ಶಿಕ್ಷಣ ಇಲಾಖೆ ನಡೆಸಿದ ಪರಿಶೀಲನೆಯಲ್ಲಿ ರಾಜ್ಯದ ಅನೇಕ ಕನ್ನಡ ಪಬ್ಲಿಕ್ ಶಾಲೆಗಳು ಇನ್ನೂ ಹಳೆಯ ಮತ್ತು ಶಿಥಿಲಾವಸ್ಥೆ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವುದು ಕಂಡು ಬಂದಿರುವುದು ದುಃಖದ ಸಂಗತಿ. ಇದು ಮಕ್ಕಳ ಸುರಕ್ಷತೆ, ಕಲಿಕೆಯ ಗುಣಮಟ್ಟ, ಮತ್ತು ಆರೋಗ್ಯ ಎಲ್ಲದಕ್ಕೂ ಅಪಾಯ. ಕನ್ನಡ ಮಾಧ್ಯಮದಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತಿರುವಾಗ, ಶಾಲೆಗಳು ಹೊಂದಿರಬೇಕಾದ ತರಗತಿ ಕೊಠಡಿಗಳು, ಶೌಚಾಲಯಗಳು, ಕುಡಿಯುವ ನೀರು, ಗ್ರಂಥಾಲಯ, ಆಟದ ಮೈದಾನ, ಮತ್ತು ಕಲಿಕಾ ಸಾಮಗ್ರಿಗಳು ಸಮರ್ಪಕವಾಗಿ ಲಭ್ಯವಾಗುತ್ತಿಲ್ಲ ಎಂಬುದು ಜನಜನಿತ. ವರದಿಗಳ ಪ್ರಕಾರ ಕೆಲವೆಡೆ 1800 ವಿದ್ಯಾರ್ಥಿಗಳು ಒಂದೇ ಕಟ್ಟಡದಲ್ಲಿ ಓದುತ್ತಿದ್ದಾರೆ. ಅನೇಕ ತರಗತಿಗಳಲ್ಲಿ 100ಕ್ಕಿಂತ ಹೆಚ್ಚು ಮಕ್ಕಳು ಒಟ್ಟಿಗೆ ಕುಳಿತುಕೊಳ್ಳುವ ಪರಿಸ್ಥಿತಿ. ಎಲ್ಲವನ್ನೂ ನೋಡಿದರೆ ಕಲಿಕೆಯ ಹದಗೆಟ್ಟ ಗುಣಮಟ್ಟವನ್ನು ತೋರುತ್ತದೆ. ಅದಕ್ಕಿಂತ ಮುಖ್ಯವಾಗಿ, 30–40 ವರ್ಷ ಹಳೆಯ ಕಟ್ಟಡಗಳಲ್ಲಿ ಗೋಡೆ ಬಿರುಕು, ಮಳೆನೀರು ಸೋರಿಕೆ, ಹಾಳಾದ ಕಿಟಕಿಗಳು, ದುರ್ಬಲ ಸೀಲಿಂಗ್ ಇತ್ಯಾದಿ ಸಮಸ್ಯೆಗಳು ಮಕ್ಕಳಿಗೆ ಅಪಾಯಕಾರಿಯಾಗಿವೆ. ಇಂತಹ ವಾತಾವರಣದಲ್ಲಿ ಮಕ್ಕಳು ಭಯವಿಲ್ಲದೆ, ಆತ್ಮವಿಶ್ವಾಸದಿಂದ ಓದುವರೇ ಎಂಬುದೇ ಪ್ರಶ್ನೆ. ರಾಜ್ಯದ 60ಕ್ಕೂ ಹೆಚ್ಚು ಕನ್ನಡ ಪಬ್ಲಿಕ್ ಶಾಲೆಗಳು ಹೊಸ ಕಟ್ಟಡ ಮಂಜೂರಿಗಾಗಿ ಕಾಯುತ್ತಿರುವುದೂ ಆತಂಕಕಾರಿ ಸಂಗತಿ. ರಾಜ್ಯ ಸರ್ಕಾರ ಕೇಂದ್ರದ ಸಹಕಾರದೊಂದಿಗೆ ಮೂಲಸೌಕರ್ಯ ಅಭಿವೃದ್ಧಿ ಯೋಜನೆ ರೂಪಿಸಿ ತಕ್ಷಣ ಜಾರಿಗೆ ತರಬೇಕು. ಕನ್ನಡ ಪಬ್ಲಿಕ್ ಶಾಲೆಗಳ ಹಳೆಯ ಕಟ್ಟಡಗಳನ್ನು ಬದಲಿಸಿ ಸುರಕ್ಷಿತ, ಬಲಿಷ್ಠ ಮತ್ತು ಆಧುನಿಕ ಕಟ್ಟಡಗಳನ್ನು ನಿರ್ಮಿಸುವ ಕೆಲಸವನ್ನು ಸರ್ಕಾರ ತಕ್ಷಣ ಕೈಗೊಳ್ಳಬೇಕು.

–ಡಾ. ಎಚ್.ಕೆ. ವಿಜಯಕುಮಾರ, ಮೈಸೂರು.

ಗ್ರೇಟರ್ ಮೈಸೂರು – ಮುನ್ನೆಚರಿಕೆ ಅಗತ್ಯ

ಮಾನ್ಯರೆ,

ಮೈಸೂರು ನಗರವನ್ನು ಬೆಂಗಳೂರು ಮಾದರಿಯಲ್ಲಿ 'ಗ್ರೇಟರ್ ಮೈಸೂರು' ಆಗಿ ಪರಿವರ್ತಿಸಲು ರಾಜ್ಯ ಸಚಿವ ಸಂಪುಟ ಒಪ್ಪಿಗೆ ನೀಡಿರುವುದಾಗಿ ಮಾಧ್ಯಮಗಳಲ್ಲಿ ವರದಿಯಾಗಿದೆ.

ಇತ್ತೀಚಿನ ವರ್ಷಗಳಲ್ಲಿ ಮೈಸೂರು ನಗರ ಸಾಕಷ್ಟು ರೀತಿಯಲ್ಲಿ ಬೆಳವಣಿಗೆ ಮತ್ತು ಅಭಿವೃದ್ಧಿ ಹೊಂದುತ್ತಿರುವುದನ್ನು ಕಾಣಬಹುದು. ಮೈಸೂರು ಸುತ್ತಮುತ್ತಲಿನ ಅನೇಕ ಸ್ಥಳೀಯ ಸಂಸ್ಥೆಗಳನ್ನು ಮೇಲ್ದರ್ಜೆಗೆ ಏರಿಸಲಾಗುತ್ತಿದೆ. ಹೂಟಗಳ್ಳಿ ನಗರಸಭೆ ಅಸ್ತಿತ್ವಕ್ಕೆ ಬಂದಿರುವುದನ್ನು ಇಲ್ಲಿ ಸ್ಮರಿಸಬಹುದು. ಆದರೆ, ಮೈಸೂರಿಗೆ ತನ್ನದೇ ಆದ ಸಾಂಸ್ಕೃತಿಕ ವೈಭವ ಹಾಗೂ ರಾಜವಂಶದ ಪ್ರಭಾವಳಿ ಇದೆ. ಈ ನಗರವನ್ನು ಅರಮನೆಗಳ ನಗರಿ, ಸಾಂಸ್ಕೃತಿಕ ನಗರಿ ಮುಂತಾದ ವಿಶೇಷಣ ಗಳಿಂದ ಕರೆಯಲಾಗುತ್ತದೆ. ಈ ನಗರವನ್ನು ಗ್ರೇಟರ್ ಮೈಸೂರು ಮಾಡಲು ಹೊರಟರೆ, ಇದು ಮತ್ತೊಂದು ಬೆಂಗಳೂರಾಗಬಹುದೇ ಎಂಬ ಚಿಂತೆ ಪ್ರಜ್ಞಾವಂತ ನಾಗರಿಕರನ್ನು ಕಾಡಬಹುದು. ಗ್ರೇಟರ್ ಮೈಸೂರು ಆಗಿ ಪರಿವರ್ತಿಸುವಾಗ ಇಂತಹ ಸೂಕ್ಷ್ಮ ವಿಷಯಗಳನ್ನು ರಾಜ್ಯ ಸರ್ಕಾರ ಎಚ್ಚರಿಕೆಯಿಂದ ಪರಿಗಣಿಸಬೇಕಾಗಿದೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ತಾರತಮ್ಯ!

ಮಾನ್ಯರೆ,

ಜನಪ್ರತಿನಿಧಿಗಳಲ್ಲಿ
ಒಂದಿಬ್ಬರು ಕೇಳುತ್ತಿದ್ದಾರೆ
ಕೇವಲ ಕೂಲಿ!
ಉಳಿದವರು ಮಾಡುತ್ತಿದ್ದಾರೆ
ಡಿನ್ನರ್ ಪಾರ್ಟಿ!!

–ಪಿ.ಜೆ.ರಾಘವೇಂದ್ರ, ನ್ಯಾಯವಾದಿ, ಮೈಸೂರು



ಬಿಚ್ಚು ನುಡಿ

ವಿಕ್ರಂ ಮುತ್ತಣ್ಣ

ಸಿದ್ದು ಈಗ ಸಿಂಹ

ಕಾರಣ... ಕಾಂಗ್ರೆಸ್ ಹೈಕಮಾಂಡ್ ಕೇವಲ ಬೆಕ್ಕು



ಕರ್ನಾಟಕದಲ್ಲಿ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿಗಳ ನಡುವೆ 'ಮುಖ್ಯಮಂತ್ರಿ ಕುರ್ಚಿ'ಗಾಗಿ ನಡೆಯುತ್ತಿರುವ ಹಗ್ಗ ಜಗ್ಗಾಟ ಅನಿವಾರ್ಯ, ನಿರೀಕ್ಷಿತ!

ಇಲ್ಲಿ, ಕಾಂಗ್ರೆಸ್ ಹೈಕಮಾಂಡ್‌ನ ಅಸಮರ್ಥತೆ ಹಾಗೂ ನಿರ್ಣಯ ಕೈಗೊಳ್ಳುವಲ್ಲಿನ ವಿಳಂಬಧೋರಣೆಯ ನೇರ ಪರಿಣಾಮವನ್ನು ನಾವಿಂದು ನೋಡುತ್ತಿದ್ದೇವೆ.

ಇಂತಹ ಒಂದು ದಿನ ಬಂದೇ ಬರುತ್ತೆ ಎಂಬುದು ಎಲ್ಲರಿಗೂ ಗೊತ್ತಿತ್ತು. ಆದರೆ, ಕಾಂಗ್ರೆಸ್ ಹೈಕಮಾಂಡ್ ಸಿದ್ಧವಾಗಿರಲಿಲ್ಲ. ಒಂದು ಕಾಲಮಿತಿ ಇಲ್ಲ. ಯಾವುದೇ ತಂತ್ರವಿಲ್ಲ. ಸ್ಪಷ್ಟತೆ ಇಲ್ಲ. ಏನೇನೂ ಇಲ್ಲ.

ಹೈಕಮಾಂಡ್ ಸಿದ್ಧವಿಲ್ಲದಿದ್ದರೂ ನಮ್ಮ ಸಿದ್ದು ಮಾತ್ರ ಸದಾ ಸಿದ್ಧವಾಗಿದ್ದರು. ತಮ್ಮ ಎರಡನೆಯ ಅವಧಿಯ ಮೊದಲ ದಿನದಿಂದಲೇ ಮುಖ್ಯಮಂತ್ರಿ ಸ್ಥಾನವನ್ನು ಭದ್ರ ಮಾಡಿಕೊಳ್ಳಲು ಅವರು ಸಜ್ಜಾಗಿದ್ದರು.

ಎರಡೂವರೆ ವರ್ಷಗಳಲ್ಲಿ ಸಿದ್ದರಾಮಯ್ಯ ತಮ್ಮದೇ ಮತ ಬ್ಯಾಂಕನ್ನು ವ್ಯವಸ್ಥಿತವಾಗಿ ಒಗ್ಗೂಡಿಸಿದ್ದರು. ಅಹಿಂದವನ್ನು ಸಂಘಟಿಸಿ, ತಾನು ಅದರ ನಿರ್ವಿವಾದ ನಾಯಕನಂತೆ ಬಿಂಬಿಸಿಕೊಂಡಿದ್ದರು.

ಅಹಿಂದ–ಅಲ್ಪಸಂಖ್ಯಾತರು, ಹಿಂದುಳಿದವರು ಮತ್ತು ದಲಿತರು. ಈ ಒಂದು ರಾಜಕೀಯ ಸಂಘಟನೆ ಪರಿಚ ಯಿಸಿದವರು ದಿ.ದೇವರಾಜ ಅರಸು, ಅದು 1970ರಲ್ಲಿ.

ತಮ್ಮ ಈಗಿನ ಅಧಿಕಾರಾವಧಿಯ ಕೇವಲ 30 ತಿಂಗಳಲ್ಲಿ ಸಿದ್ದು ಹಲವು ಯೋಜನೆಗಳನ್ನು ಘೋಷಿ ಸಿದರು: ಸಾರ್ವಜನಿಕ ಕಾಮಗಾರಿಗಳ ಗುತ್ತಿಗೆಗಳಲ್ಲಿ ಮುಸ್ಲಿಂಮರಿಗೆ ಶೇ.4ರಷ್ಟು ಮೀಸಲು; ಅಲ್ಪಸಂಖ್ಯಾತ ಯುವಕರಿಗೆ ಸ್ಟಾರ್ಟ್‌ಅಪ್ ಪ್ರೋತ್ಸಾಹ ಧನ; ಎಲ್ಲಾ ಜಿಲ್ಲೆಗಳಲ್ಲೂ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರಿಗೆ ವೃದ್ಧಾಶ್ರಮಗಳು; ತಮ್ಮ ಕುರುಬ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಪ್ರಸ್ತಾಪ.

ಈ ಯೋಜನೆಗಳು ಕಾಂಗ್ರೆಸ್ ಬಲವನ್ನೇನು ಹೆಚ್ಚಿಸ ಲಿಲ್ಲ. ಆದರೆ, ಸಿದ್ದರಾಮಯ್ಯನವರ ವೈಯಕ್ತಿಕ ಮತ ಬ್ಯಾಂಕ್ ಅನ್ನು ಸದೃಢಗೊಳಿಸಿದವು.

ಇಂದು ಅವರು ಆ ಮತ ಬ್ಯಾಂಕನ್ನು ತಮ್ಮ ರಾಜಕೀಯ ಅಸ್ತ್ರವಾಗಿ ಬಳಸುತ್ತಿದ್ದು, ಹಾಗಾಗಿಯೇ ಡಿ.ಕೆ.ಶಿವಕುಮಾರ್ ಅವರನ್ನು ಸಿಎಂ ಕುರ್ಚಿಯ ಸುತ್ತ ಸುತ್ತಿಸುತ್ತಿದ್ದಾರೆ–ಆಸೆಯಾಗುವಷ್ಟು ಹತ್ತಿರ! ಆದರೆ ಬೇಸರ ಬರಿಸುವಷ್ಟು ದೂರ!!

ಅದೇ ರೀತಿ ಈ ಓಟ್ ಬ್ಯಾಂಕ್‌ನಿಂದ ಬೆಚ್ಚಿ ಬಿದ್ದಿರುವ ಹೈಕಮಾಂಡ್ ತಮ್ಮ ನಿಷ್ಠಾವಂತ, ಸುದೀರ್ಘ ಕಾಲದಿಂದ ಪಕ್ಷಕ್ಕೆ ಸೇವೆ ಸಲ್ಲಿಸುತ್ತಾ ಬಂದಿರುವ ಡಿ.ಕೆ.ಶಿವಕುಮಾರ್ ಅವರಿಗೆ ನ್ಯಾಯಯುತವಾಗಿ ಸಿಗಬೇಕಾದ ಅವಕಾಶ ಕಲ್ಪಿಸುವಲ್ಲಿ ವಿಫಲವಾಗಿದೆ.

ಸಿದ್ದರಾಮಯ್ಯರ ರಾಜಕೀಯ ಕೌಶಲ್ಯವನ್ನು ಮೆಚ್ಚಲೇ ಬೇಕು. ಅವರು ದಿವಂಗತ ದೇವರಾಜ ಅರಸರ ಅಹಿಂದ ಚೌಕಟ್ಟನ್ನು ಬಳಸಿಕೊಂಡು, ಕಾಂಗ್ರೆಸ್‌ನ ಪಾರಂಪರಿಕ ಮತಬ್ಯಾಂಕ್ ಅನ್ನು ಕೈವಶ ಮಾಡಿಕೊಂಡರು. ಜೊತೆಗೆ ಕಾಂಗ್ರೆಸ್ ಕಟ್ಟಾಳು ಡಿ.ಕೆ.ಶಿವಕುಮಾರ್ ಅವರ ಸಂಘಟನಾ ಶಕ್ತಿಯನ್ನು ಬಳಸಿಕೊಂಡು ತಾವು ಮಾತ್ರ ಪಕ್ಷದ ಅತ್ಯಂತ ಬಲಿಷ್ಠ ನಾಯಕರಾಗಿ ಹೊರ ಹೊಮ್ಮಿದರು.

ಸರಳವಾಗಿ ಹೇಳುವುದಾದರೆ, ಅವರು ಕಾಂಗ್ರೆಸ್‌ನ ಸಂಪನ್ಮೂಲಗಳನ್ನು ಬಳಸಿಕೊಂಡೇ ಕಾಂಗ್ರೆಸ್ ಹೈಕಮಾಂಡ್ ವಿರುದ್ಧ ತನ್ನ ಭದ್ರಕೋಟೆಯನ್ನು ನಿರ್ಮಿಸಿಕೊಂಡರು. ವಾರೆವ್ಹಾ! ಇದನ್ನೇ ಅಲ್ವಾ ರಾಜಕೀಯ ಚಾಣಾಕ್ಷತೆ ಎನ್ನುವುದು.

ಕಾಂಗ್ರೆಸ್ ಹೈಕಮಾಂಡ್‌ನ ನಿರ್ಲಕ್ಷ್ಯವೇ ಇಷ್ಟಕ್ಕೆಲ್ಲಾ ಕಾರಣ. ಅದು **ಸಿದ್ದರಾಮೋತ್ಸವ** ಎಂಬ ವ್ಯಕ್ತಿ ವೈಭವದ ಉತ್ಸವವನ್ನು ನಡೆಸಿದಾಗಲೂ ಅವರನ್ನು ಪ್ರಶ್ನಿಸಲಿಲ್ಲ. ಇದನ್ನೇ ಜೆಡಿಎಸ್‌ನಲ್ಲಿ ಮಾಡಲು ಹೋದಾಗ ಅವರು, ಅವರನ್ನು ಪಕ್ಷದಿಂದಲೇ ಹೊರ ಹಾಕಿದರು. ಆದರೆ ರಾಷ್ಟ್ರೀಯ ಪಕ್ಷವೆಂದು ಹೇಳಿಕೊಳ್ಳುವ ಕಾಂಗ್ರೆಸ್ ತಡೆ ಯಲೂ ಇಲ್ಲ, ಪ್ರಶ್ನಿಸುವ ಗೋಜಿಗೂ ಹೋಗಲಿಲ್ಲ. ಅದರ ಪರಿಣಾಮವನ್ನು ಇಂದು ಅನುಭವಿಸಬೇಕಾಗಿ ಬಂದಿದೆ.

ಹೀಗೆಯೇ ಕಾಂಗ್ರೆಸ್ ಮತ್ತೊಮ್ಮೆ ಮುಗ್ಗರಿಸಿತು: 2020ರಲ್ಲಿ 16 ಶಾಸಕರು ಮುಂಬೈಗೆ ಹೋಗಿ ಕಾಂಗ್ರೆಸ್–ಜೆಡಿಎಸ್ ಮೈತ್ರಿ ಸರ್ಕಾರವನ್ನು ಉರುಳಿಸಿದರು. ಆ 16ರಲ್ಲಿ 13 ಮಂದಿ ಸಿದ್ದರಾಮಯ್ಯನವರ ನಿಷ್ಠರೇ.

ಅವರಲ್ಲೊಬ್ಬರಾದ ಶಿವರಾಮ ಹೆಬ್ಬಾರ್ ಬಹಿರಂಗ ವಾಗಿಯೇ 'ನಾವು ಸಿದ್ದರಾಮಯ್ಯ ಸಲಹೆ ಅನು ಸರಿಸಿದ್ದೇವೆ' ಎಂದು ಹೇಳಿದ್ದರು.

ವಿಶೇಷವೆಂದರೆ, ಆ ಸಮಯದಲ್ಲಿ ಸಿದ್ದರಾಮಯ್ಯ ಅವರೇ ಆ ಮೈತ್ರಿ ಸರ್ಕಾರದ ಸಮನ್ವಯ ಸಮಿತಿಯ ಅಧ್ಯಕ್ಷರು. ವಾರೆವ್ಹಾ! ಒಂದೇ ರಾಜಕೀಯ ಏಟಿನಲ್ಲಿ ತಮ್ಮ ಒಳ ರಾಜಕೀಯ ವಿರೋಧಿಗಳನ್ನು ನಿಷ್ಕ್ರಿಯಗೊಳಿಸಿದರು.

"ಸಿದ್ದರಾಮಯ್ಯರ ರಾಜಕೀಯ ಕೌಶಲ್ಯವನ್ನು ಮೆಚ್ಚಲೇಬೇಕು. ಅವರು ದಿವಂಗತ ದೇವ ರಾಜ ಅರಸರ ಅಹಿಂದ ಚೌಕಟ್ಟನ್ನು ಬಳಸಿ ಕೊಂಡು, ಕಾಂಗ್ರೆಸ್‌ನ ಪಾರಂಪರಿಕ ಮತ ಬ್ಯಾಂಕ್ ಅನ್ನು ಕೈವಶ ಮಾಡಿಕೊಂಡರು. ಜೊತೆಗೆ ಕಾಂಗ್ರೆಸ್ ಕಟ್ಟಾಳು ಡಿ.ಕೆ.ಶಿವ ಕುಮಾರ್ ಅವರ ಸಂಘಟನಾ ಶಕ್ತಿಯನ್ನು ಬಳಸಿಕೊಂಡು ತಾವು ಪಕ್ಷದ ಅತ್ಯಂತ ಬಲಿಷ್ಠ ನಾಯಕರಾಗಿ ಹೊರ ಹೊಮ್ಮಿದರು.

ಸರಳವಾಗಿ ಹೇಳುವುದಾದರೆ, ಅವರು ಕಾಂಗ್ರೆಸ್‌ನ ಸಂಪನ್ಮೂಲಗಳನ್ನು ಬಳಸಿ ಕೊಂಡೇ ಕಾಂಗ್ರೆಸ್ ಹೈಕಮಾಂಡ್ ವಿರುದ್ಧ ತನ್ನ ಭದ್ರಕೋಟೆಯನ್ನು ನಿರ್ಮಿಸಿಕೊಂಡರು. ವಾರೆವ್ಹಾ! ಇದನ್ನೇ ಅಲ್ವಾ ರಾಜಕೀಯ ಚಾಣಾಕ್ಷತೆ ಎನ್ನುವುದು.

ಅಹಿಂದ ಸಮುದಾಯ ಸಾರಾಸಗಟಾಗಿ ಸಿದ್ದರಾಮಯ್ಯ ಹಿಂದೆ ಹೋಗಲಾರದು. ಹಾಗಾಗಿ ಕಾಂಗ್ರೆಸ್ ಹೈಕಮಾಂಡ್ ಧೈರ್ಯ ವಾಗಿ ಮುನ್ನಡೆಯಬಹುದು ಮತ್ತು ಕರ್ನಾ ಟಕದ ಈ ನಾಟಕಕ್ಕೆ ತೆರೆ ಎಳೆಯಲೂಬಹುದು.

ಇತ್ತ ಡಿ.ಕೆ.ಶಿವಕುಮಾರ್‌ಗೆ ತನ್ನದೇ ಆದ ನಿಶ್ಚಿತ ಓಟ್ ಬ್ಯಾಂಕ್ ಇಲ್ಲ. ಅಲ್ಲದೆ ಅವರಿಗೆ ಹೇಳಿಕೊಳ್ಳುವಂತಹ ಸ್ವ ಜಾತಿಯ ಹಾಗೂ ಇನ್ಯಾವುದೇ ರಾಜಕೀಯ ಗಾಡ್‌ಫಾದರ್ ಗಳಿಲ್ಲ. ಇವರಂತೂ ಸ್ವತಂತ್ರವಾಗಿ ರಾಜಕೀಯ ನಿರ್ಧಾರ ಕೈಗೊಳ್ಳುವ ಸ್ಥಿತಿಯಲ್ಲಂತೂ ಇಲ್ಲ. ಹಾಗಾಗಿ ಸದ್ಯಕ್ಕೆ ಕಾಂಗ್ರೆಸ್ಸೇ ಅವರಿಗೆ ಸರ್ವಸ್ವ.

ಆಗ, ಡಾ.ಪರಮೇಶ್ವರ್ ಹಾಗೂ ಡಿ.ಕೆ. ಶಿವಕುಮಾರ್ ಸಚಿವ ಸ್ಥಾನ ಕಳೆದುಕೊಂಡರು. ಆದರೆ, ಬಿಜೆಪಿ ಅಧಿಕಾರಕ್ಕೆ ಬರುತ್ತಿದ್ದಂತೆ ಸಿದ್ದರಾಮಯ್ಯ ವಿರೋಧ ಪಕ್ಷದ ನಾಯಕರಾಗಿ ಮತ್ತಷ್ಟು ಬಲಿಷ್ಠರಾದರು.

ಜೆಡಿಎಸ್ ಮತ್ತು ಕಾಂಗ್ರೆಸ್ ಸಮ್ಮಿಶ್ರ ಸರ್ಕಾರದಲ್ಲಿ ಬಲವಿಲ್ಲದ ಒಬ್ಬ ಶಾಸಕನಾಗಿರುವುದಕ್ಕಿಂತ ತನ್ನದೇ ಪಕ್ಷವನ್ನು ಅಧಿಕಾರದಿಂದ ಕೆಳಗಿಳಿಸಿ, ವಿರೋಧ ಪಕ್ಷದ ನಾಯಕನಾಗಿ ಉಳಿಯುವುದನ್ನೇ ಆಯ್ಕೆ ಮಾಡಿ ಕೊಂಡರು ಎಂಬುದು ಬಹಿರಂಗ ರಹಸ್ಯವಾಗಿದೆ.

ಇದು ಕೇವಲ ಬಯಕೆ ಅಲ್ಲ. ಇದು ರಾಜಕೀಯ ಸಿಂಹದ ಬೇಟೆಯ ಪ್ರವೃತ್ತಿ. ಹೈಕಮಾಂಡ್ ಯಾವಾಗ ಬೆಕ್ಕಿನಂತೆ ವರ್ತಿಸುತ್ತದೋ ಆಗಲೇ ಒಬ್ಬರು ರಾಜಕೀಯ ಸಿಂಹವಾಗುವುದು.

ಸಿದ್ದರಾಮಯ್ಯ ನಾನಾ ತಂತ್ರಗಳನ್ನು ಅರಿತಿದ್ದಾರೆ. ರಾಹುಲ್ ಗಾಂಧಿ ಮಾತ್ರ ಇನ್ನೂ ರಾಜಕೀಯ ಅರಿವಿನ ಕೊರತೆ ಎದುರಿಸುತ್ತಿದ್ದಾರೆ. ಕಾಂಗ್ರೆಸ್ ಹೈಕಮಾಂಡ್ ಅನ್ನು ಇನ್ನೂ ಒಬ್ಬ 'ಯುವಕ' ಸೀಮಿತ ರಾಜಕೀಯ ಪರಿಜ್ಞಾನದೊಂದಿಗೆ ಮುನ್ನ ಡೆಸುತ್ತಿದ್ದಾರೆ. ರಾಷ್ಟ್ರ ಮತ್ತು ಪಕ್ಷದ ಬಗ್ಗೆ ದೂರದೃಷ್ಟಿಯಿಲ್ಲದ ಹಿರಿಯರ ಸಲಹೆ ಪಡೆಯುತ್ತಿರುವುದು ಇನ್ನೂ ದುರ್ಗತಿ.

ಇತಿಹಾಸದಿಂದ ಕಾಂಗ್ರೆಸ್ ಪಾಠ ಕಲಿತಂತಿಲ್ಲ. ಪ್ರಾದೇಶಿಕ ನಾಯಕರ ಪದೇ ಪದೆ ಬಲಿಷ್ಠರಾಗಿ ಬೆಳೆಯಲು ಬಿಡುತ್ತಾರೆ. ಬಳಿಕ ಪಕ್ಷವೇ ಅವರ ರಾಜಕೀಯ ಯಾತ್ರೆಯಲ್ಲಿ ಐಚ್ಛಿಕ ಪರಿಕರವಾಗುತ್ತದೆ.

ಮಮತಾ ಬ್ಯಾನರ್ಜಿ ಗೊತ್ತಿದೆಯಾ? ಅವರು ಬಲಾಢ್ಯರಾಗಲು ನೀರೆರೆದರು. ಬಳಿಕ ಅವರು ಹೊರ ಹೋಗಿ ತೃಣಮೂಲ ಕಾಂಗ್ರೆಸ್ ಸ್ಥಾಪಿಸಿ, ಪಶ್ಚಿಮ ಬಂಗಾಳವನ್ನ ಈಗ ಆಳುತ್ತಿದ್ದಾರೆ.

ವೈ.ಎಸ್.ರಾಜಶೇಖರ್ ರೆಡ್ಡಿ ಗೊತ್ತಿದೆಯಲ್ಲಾ? ಅವರು ಬೆಳೆದು, ಸಾಕಷ್ಟು ಸಂಪತ್ತು ಗಳಿಸಲು ಬಿಟ್ಟರು. ನಂತರ ಅವರ ಪುತ್ರ ಜಗನ್ ರೆಡ್ಡಿ ಪಕ್ಷದಿಂದ ಹೊರ ಬಂದು ವೈಎಸ್‌ಆರ್ ಕಾಂಗ್ರೆಸ್ ಪಕ್ಷ ಕಟ್ಟಿ ಒಮ್ಮೆ ಆಂಧ್ರವನ್ನು ಆಳಿದರು. ಮಹಾರಾಷ್ಟ್ರದಲ್ಲಿ ಶರದ್ ಪವಾರ್ ಕಾಂಗ್ರೆಸ್‌ನಿಂದ ಹೊರಬಂದು ರಾಷ್ಟ್ರೀಯವಾದಿ ಕಾಂಗ್ರೆಸ್ ಪಕ್ಷ ರಚಿಸಿದರು.

1978 ಜ್ಞಾಪಕವಿದೆಯೆ? ಕಾಂಗ್ರೆಸ್(ಐ) ಇಂದಿರಾ ಗಾಂಧಿ ಮತ್ತು ಕಾಂಗ್ರೆಸ್(ಯು) ಯಶವಂತರಾವ್ ಚೌಹಾಣ್ ನೇತೃತ್ವದಲ್ಲಿ ವಿಭಜನೆಯಾದದ್ದು ಕೂಡ ಇದೇ ಕಥೆ.

ಈಗ ಕಾಂಗ್ರೆಸ್‌ಗೆ, ಸಿದ್ದರಾಮಯ್ಯ ತಮ್ಮದೇ ಪಕ್ಷ– ಕಾಂಗ್ರೆಸ್(ಎ), 'ಎ' ಅಂದರೆ ಅಹಿಂದ ರಚಿಸಿದರೆ ಮುಂದೆ ತೊಂದರೆ ಎಂಬ ಯೋಚನೆ ಇರಬಹುದು. ಆದರೆ, ಅವರು ಹಾಗೆ ಮಾಡಲಾರರು...

ಏಕೆಂದರೆ, ಸಿದ್ದರಾಮಯ್ಯ ಅಹಿಂದದ ಪ್ರಶ್ನಾತೀತ ನಾಯಕನೆಂದು ಹೇಳುವುದಾದರೆ ಅವರ ಬಹಳಷ್ಟು ಪ್ರಯೋಜನಗಳು ಅವರದೇ ಕುರುಬ ಸಮುದಾಯಕ್ಕೆ ಸಲ್ಲುತ್ತವೆ. ಅದರಲ್ಲಿ ಬರುವ ಮಿಕ್ಕ ಸಮುದಾಯಗಳಾದ ಮಡಿವಾಳ, ವಿಶ್ವಕರ್ಮ, ಕುಂಬಾರ, ಗಾಣಿಗ, ಗೊಲ್ಲ, ಬೆಸ್ತ, ಉಪ್ಪಾರ ಹಾಗೂ ಇನ್ನಿತರ ಚಿಕ್ಕ ಸಮಾಜಗಳು ಅವರ ಯೋಜನೆಗಳಿಂದ ಹೆಚ್ಚಿನ ಲಾಭವನ್ನೇನೂ ಪಡೆದಿಲ್ಲ.

ಹೀಗಾಗಿ ಅಹಿಂದ ಸಮುದಾಯ ಸಾರಾಸಗಟಾಗಿ ಸಿದ್ದರಾಮಯ್ಯ ಹಿಂದೆ ಹೋಗಲಾರದು. ಹಾಗಾಗಿ ಕಾಂಗ್ರೆಸ್ ಹೈಕಮಾಂಡ್ ಧೈರ್ಯವಾಗಿ ಮುನ್ನಡೆಯಬಹುದು ಮತ್ತು ಕರ್ನಾಟಕದ ಈ ನಾಟಕಕ್ಕೆ ತೆರೆ ಎಳೆಯಲೂಬಹುದು.

ಇತ್ತ ಡಿ.ಕೆ.ಶಿವಕುಮಾರ್‌ಗೆ ತನ್ನದೇ ಆದ ನಿಶ್ಚಿತ ಓಟ್ ಬ್ಯಾಂಕ್ ಇಲ್ಲ. ಅಲ್ಲದೆ ಅವರಿಗೆ ಹೇಳಿಕೊಳ್ಳುವಂತಹ ಸ್ವಜಾತಿಯ ಹಾಗೂ ಇನ್ಯಾವುದೇ ರಾಜಕೀಯ ಗಾಡ್‌ಫಾದರ್‌ಗಳಿಲ್ಲ. ಇವರಂತೂ ಸ್ವತಂತ್ರವಾಗಿ ರಾಜಕೀಯ ನಿರ್ಧಾರ ಕೈಗೊಳ್ಳುವ ಸ್ಥಿತಿಯಲ್ಲಂತೂ ಇಲ್ಲ. ಹಾಗಾಗಿ ಸದ್ಯಕ್ಕೆ ಕಾಂಗ್ರೆಸ್ಸೇ ಅವರಿಗೆ ಸರ್ವಸ್ವ.

ಹೇಗೆ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್‌ಗೆ ಕಾಂಗ್ರೆಸ್ಸೇ ಅಂತಿಮ ಆಯ್ಕೆಯೋ, ಅನಿವಾರ್ಯವೋ, ಹಾಗೆಯೇ ಕಾಂಗ್ರೆಸ್‌ಗೂ ಕೂಡ ಇವರಿಬ್ಬರೂ ಅನಿವಾರ್ಯ.

ಡಿ.ಕೆ.ಶಿವಕುಮಾರ್ ಯಾವಾಗಲೂ 'ಮದುಮಗಳ ಸಂಗಾತಿಯಾಗಿಯೇ ಇರಬೇಕೇ, ವಧುವಾಗಬಾರದೇ? ಹೌದು, ಕಾಂಗ್ರೆಸ್ ಹೈಕಮಾಂಡ್ ಸಿಂಹವಾಗದೆ ಬೆಕ್ಕಿನಂತೆ ಇರುವವರೆಗೂ ಡಿಕೆಶಿ ಅವರ ಹಣೇಬರಹದಲ್ಲಿ ಉಪ ಮುಖ್ಯಮಂತ್ರಿಯಾಗಿಯೇ ಉಳಿಯುವಂತೆ ಅಚ್ಚೊತ್ತಿದೆ.

ಈಗ ನೋಡಬೇಕಿದೆ. ಕಾಂಗ್ರೆಸ್ ಹೈಕಮಾಂಡ್, ಸಣ್ಣ ಬೆಕ್ಕಿನಿಂದ ದೊಡ್ಡ ಹುಲಿಯಾಗುವ ಸಮಯ ಬಂದಿದೆ. ಆದರೆ, ಇಂತಹ ವೇಳೆ ಕಾಂಗ್ರೆಸ್ ಹೈಕಮಾಂಡ್ ಗಾಂಭೀರ್ಯದ ನಾಯಕತ್ವ ಹೊಂದಬೇಕಿದೆಯೇ ಹೊರತು ಕಾಟಾಚಾರದ ನಾಯಕನಲ್ಲ.

ರಾಹುಲ್ ಗಾಂಧಿ ಗಟ್ಟಿ ಧ್ವನಿ ಎತ್ತುವ ಸಮಯ ಈಗ ಬಂದಿದೆ. ಅವರು ಮಿಯಾಂವ್ ಅಂಥಾರೋ ಇಲ್ಲ ಘರ್ಜಿಸುತ್ತಾರೋ ಗೊತ್ತಿಲ್ಲ. ಆದರೆ ಅವರು ಏನು ನಿರ್ಧಾರ ಕೈಗೊಳ್ಳುತ್ತಾರೋ ಅದು ಕರ್ನಾಟಕದಲ್ಲಿ ಕಾಂಗ್ರೆಸ್ ಭವಿಷ್ಯದ ನಿರ್ಣಾಯಕ ಕ್ಷಣವಾಗಬಹುದು.

Email: vikram@starofmysore.com

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಡಿ.ಕೆ.ಶಿವಕುಮಾರ್‌ಗೆ ಅಧಿಕಾರ ಹಸ್ತಾಂತರ ಮಾಡುವಂತೆ ಆಗ್ರಹಿಸಿ

ಒಕ್ಕಲಿಗರ ಸಂಘದಿಂದ ಮೈಸೂರಲ್ಲಿ ಬೈಕ್ ರ‍್ಯಾಲಿ



ಸಿಎಂ ಸಿದ್ದರಾಮಯ್ಯ ಅವರು ಡಿ.ಕೆ.ಶಿವಕುಮಾರ್ ಅವರಿಗೆ ಅಧಿಕಾರ ಹಸ್ತಾಂತರ ಮಾಡಬೇಕೆಂದು ಆಗ್ರಹಿಸಿ ಒಕ್ಕಲಿಗರ ಸಂಘದ ನೇತೃತ್ವದಲ್ಲಿ ನಡೆದ ಬೈಕ್ ರ‍್ಯಾಲಿಗೆ ಬೆಂಗಳೂರಿನ ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನ ಮಠದ ಡಾ.ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ ಚಾಲನೆ ನೀಡಿದರು.

ಮೈಸೂರು, ನ.29(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಡಿ.ಕೆ.ಶಿವಕುಮಾರ್ ಅವರಿಗೆ ಅಧಿಕಾರ ಹಸ್ತಾಂತರ ಮಾಡುವಂತೆ ಆಗ್ರಹಿಸಿ ಮೈಸೂರು ಮತ್ತು ಚಾಮರಾಜನಗರದ ಒಕ್ಕಲಿಗರ ಸಂಘದವರು ಮೈಸೂರಿನಲ್ಲಿ ಇಂದು ಬೈಕ್ ರ‍್ಯಾಲಿ ನಡೆಸಿದರು.

ಮೈಸೂರಿನ ಮಾತೃಮಂಡಳಿ ಸರ್ಕಲ್‌ನ ಶ್ರೀ ಚಂದ್ರಮೌಳೇಶ್ವರ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದ ನಂತರ, ರ‍್ಯಾಲಿಗೆ ಬೆಂಗಳೂರಿನ ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನ ಮಠದ ಡಾ.ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ ಚಾಲನೆ ನೀಡಿದರು.

ತರುವಾಯ ಮಾತನಾಡಿದ ಶ್ರೀಗಳು, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರಲು ಡಿ.ಕೆ.ಶಿವಕುಮಾರ್ ಅವರು ಮೂಲ ಕಾರಣರಾಗಿದ್ದಾರೆ. ಅಲ್ಲದೆ ಉಪ ಮುಖ್ಯಮಂತ್ರಿಯಾಗಿ ಜನಪರ ಅಭಿವೃದ್ಧಿ ಕಾರ್ಯ ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ಉಳಿದ ಎರಡೂವರೆ ವರ್ಷದ ಅವಧಿಗೆ ಡಿ.ಕೆ.ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಸ್ಥಾನ ಬಿಟ್ಟುಕೊಡಬೇಕು ಎಂದು ಸಿದ್ದರಾಮಯ್ಯ ಅವರನ್ನು ಆಗ್ರಹಿಸಿದರು.

ಸಿದ್ದರಾಮಯ್ಯ ಅವರೇ ಮುಂದುವರೆಯಲಿ ಎಂದು ಕೆಲವರು ಹೇಳಿಕೆ ನೀಡುತ್ತಿದ್ದು, ಈ ಮೂಲಕ ಗೊಂದಲ ಮೂಡಿಸುತ್ತಿದ್ದಾರೆ. ಇದಕ್ಕೆ ಸಿದ್ದರಾಮಯ್ಯ ಕಿವಿಗೊಡದೆ ಕೊಟ್ಟ ಮಾತು ಉಳಿಸಿಕೊಳ್ಳಲಿ ಎಂದು ಸಲಹೆ ನೀಡಿದರು.

ನೂರಾರು ಜನರಿದ್ದ ಬೈಕ್ ರ‍್ಯಾಲಿ ಮಾತೃಮಂಡಳಿ ವೃತ್ತದಿಂದ ಹೊರಟು ಒಂಟಿ ಕೊಪ್ಪಲ್ ವೃತ್ತ ಆಕಾಶವಾಣಿ ರಸ್ತೆ ದಾಸಪ್ಪ ವೃತ್ತ ರೈಲ್ವೆ ನಿಲ್ದಾಣ ವೃತ್ತ ಇರ್ವಿನ್ ರಸ್ತೆ ಸಯ್ಯಾಜಿರಾವ್ ರಸ್ತೆ ಮೂಲಕ ಮೈಸೂರು ಅರಮನೆಯ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನವನ್ನು ತಲುಪಿತು.

ಕೊಟ್ಟ ಮಾತು ತಪ್ಪಿದರೆ ಮೆಚ್ಚನಾ ಪರಮಾತ್ಮ ಕೊಟ್ಟ ಮಾತು ಉಳಿಸಿಕೊಳ್ಳುವುದೇ ವಿಶ್ವದಲ್ಲಿರುವ ದೊಡ್ಡ ಶಕ್ತಿ, 'ನಮ್ಮ ನಾಯಕ ನಮ್ಮ ಅಸ್ಮಿತೆ' ಘೋಷಣಾ ಫಲಕಗಳನ್ನು ಹಿಡಿದು ನಮಗೆ ನ್ಯಾಯ ಬೇಕು ಎಂದು ಘೋಷಣೆಗಳನ್ನು ಕೂಗಿದರು.

ಮೈಸೂರು ಒಕ್ಕಲಿಗರ ಸಂಘದ ಅಧ್ಯಕ್ಷ ಮರಿಸ್ವಾಮಿ, ಉಪಾಧ್ಯಕ್ಷ ರವಿ, ಪ್ರಧಾನ ಕಾರ್ಯದರ್ಶಿ ಚೇತನ್, ನಿರ್ದೇಶಕರಾದ ಬೋರೇಗೌಡ, ಕುಮಾರ ಗೌಡ, ಗೋಪಾಲ್, ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆ ಅಧ್ಯಕ್ಷೆ ಹೆಚ್.ಎಲ್.ಯಮುನ, ಮೈಸೂರು ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಎನ್.ಕೃಷ್ಣೇಗೌಡ, ಮಾಜಿ ಮೇಯರ್ ಮೋದಾಮಣಿ, ಕರ್ನಾಟಕ ಕಾವಲು ಪಡೆ ಅಧ್ಯಕ್ಷ ಮೋಹನ್ ಕುಮಾರ್ ಗೌಡ ಸೇರಿದಂತೆ ಹಲವರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಸಿದ್ದರಾಮಯ್ಯರನ್ನೇ ಪೂರ್ಣಾವಧಿಗೆ ಮುಖ್ಯಮಂತ್ರಿಯಾಗಿ ಮುಂದುವರೆಸಲು ಆಗ್ರಹ

ದೆಹಲಿಯ ಎಐಸಿಸಿ ಕಚೇರಿ ಮುಂದೆ ಪ್ರತಿಭಟನೆ ನಡೆಸಲು ನಿರ್ಧಾರ



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನೆ ಪೂರ್ಣಾವಧಿವರೆಗೆ ಅಧಿಕಾರದಲ್ಲಿ ಮುಂದುವರೆಸುವಂತೆ ಆಗ್ರಹಿಸಿ ಮೈಸೂರಿನ ಜಲದರ್ಶಿನಿ ಮುಂಭಾಗದ ಹುಣಸೂರು ರಸ್ತೆಯಲ್ಲಿ ರಸ್ತೆ ತಡೆ ನಡೆಸಿದರು.

ಮೈಸೂರು, ನ.29(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನೆ ಪೂರ್ಣಾವಧಿಗೆ ಅಧಿಕಾರದಲ್ಲಿ ಮುಂದುವರೆಸುವುದಾಗಿ ಹೈಕಮಾಂಡ್ ಘೋಷಣೆ ಮಾಡುವಂತೆ ಆಗ್ರಹಿಸಿ ದೆಹಲಿಯ ಎಐಸಿಸಿ ಕಚೇರಿ ಮುಂದೆ ಪ್ರತಿಭಟನೆ ನಡೆಸಲು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ತೀರ್ಮಾನಿಸಿದೆ.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಇಂದು ವೇದಿಕೆ ಆಯೋಜಿಸಿದ್ದ ದುಂಡು ಮೇಜಿನ ಸಭೆಯಲ್ಲಿ ಈ ನಿರ್ಧಾರ ಮಾಡಲಾಯಿತು.

ಗ್ಯಾರಂಟಿ ಯೋಜನೆ ಸೇರಿದಂತೆ ಹಲವು ಅಭಿವೃದ್ಧಿ ಕಾರ್ಯ ಮಾಡಿರುವ ಸಿದ್ದರಾಮಯ್ಯ ಅವರು ಕರ್ನಾಟಕವನ್ನು ಪ್ರಗತಿಯತ್ತ ಕೊಂಡೊಯ್ದಿದ್ದಾರೆ. ಈ ಹಿನ್ನೆಲೆಯಲ್ಲಿ ಪೂರ್ಣಾವಧಿವರೆಗೆ ಅಧಿಕಾರದಲ್ಲಿ ಮುಂದುವರೆಯಲು ಕಾಂಗ್ರೆಸ್ ಹೈಕಮಾಂಡ್ ಅನುವು ಮಾಡಿಕೊಡಬೇಕೆಂದು ಆಗ್ರಹಿಸಿದರು.

ಬಿಜೆಪಿ ಮತ್ತು ಜೆಡಿಎಸ್ ನಾಯಕರು ಕಾಂಗ್ರೆಸ್‌ನಲ್ಲಿ ಒಡಕು ಮೂಡಿಸುತ್ತಿದ್ದಾರೆ. ಒಕ್ಕಲಿಗರು ಹಾಗೂ ಅಹಿಂದ ಸಮುದಾಯದಲ್ಲಿ ಕಚ್ಚಾಟ ಉಂಟು ಮಾಡಿ ರಾಜಕೀಯ ಲಾಭ ಪಡೆಯಲು ಷಡ್ಯಂತ್ರ ರೂಪಿಸಿವೆ ಎಂದು ಆರೋಪಿಸಿದರು. ಇದಕ್ಕೆ ಹೈಕಮಾಂಡ್ ಅವಕಾಶ ಮಾಡಿಕೊಡದೆ ಸಿದ್ದರಾಮಯ್ಯ ಅವರನ್ನೆ ಅಧಿಕಾರದಲ್ಲಿ ಮುಂದುವರೆಸಬೇಕು ಎಂದು ಒತ್ತಾಯಿಸಿದರು.

ಸಭೆಯ ನಂತರ ವೇದಿಕೆಯ ಸದಸ್ಯರು ಜಲದರ್ಶಿನಿ ಮುಂಭಾಗದ ಹುಣಸೂರು ರಸ್ತೆಯಲ್ಲಿ ರಸ್ತೆತಡೆ ನಡೆಸಿದರು. ದೆಹಲಿಯ ಎಐಸಿಸಿ ಕಚೇರಿ ಮುಂದೆ ಬುಧವಾರ ಅಥವಾ ಗುರುವಾರ ಪ್ರತಿಭಟನೆ ನಡೆಸಿ ಹೈಕಮಾಂಡ್‌ಗೆ ಮನವಿ ಸಲ್ಲಿಸುವ ಮೂಲಕ ವಸ್ತುಸ್ಥಿತಿ ಮನವರಿಕೆ ಮಾಡಿ ಕೊಡಲು ತೀರ್ಮಾನ ಕೈಗೊಳ್ಳಲಾಯಿತು.

ವೇದಿಕೆಯ ಅಧ್ಯಕ್ಷ ಕೆ.ಎಸ್.ಶಿವರಾಮು, ಉಪ್ಪಾರ ಸಂಘದ ಅಧ್ಯಕ್ಷ ಯೋಗೇಶ್ ಉಪ್ಪಾರ, ಮಡಿವಾಳ ಸಂಘದ ಅಧ್ಯಕ್ಷ ರವಿನಂದನ್, ಕುಂಬಾರ ಸಂಘದ ಅಧ್ಯಕ್ಷ ಹೆಚ್.ಎಸ್. ಪ್ರಕಾಶ್, ದಲಿತ ವಿದ್ಯಾರ್ಥಿಗಳ ಒಕ್ಕೂಟದ ಅಧ್ಯಕ್ಷ ಗಜೇಂದ್ರ ನಾಯಕ ಸಮುದಾಯದ ಮುಖಂಡ ಕಾಟೂರು ದೇವರಾಜು, ಶಿವಣ್ಣ ಸೇರಿದಂತೆ ಹಲವರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಮೈಸೂರು ಜಿಲ್ಲೆ ಸಹಕಾರ ಹಾಲು ಒಕ್ಕೂಟದಿಂದ ಪ್ರತಿಭಾ ಪುರಸ್ಕಾರ





ಮೈಸೂರು ಜಿಲ್ಲೆ ಸಹಕಾರ ಹಾಲು ಒಕ್ಕೂಟ ನಿಯಮಿತ ಹಾಗೂ ಉತ್ಪಾದಕರು ಮತ್ತು ಉತ್ಪಾದಕರ ಸಹಕಾರ ಸಂಘಗಳ ನೌಕರರ ಕಲ್ಯಾಣ ಟ್ರಸ್ಟ್ ವತಿಯಿಂದ ನಡೆದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಹಾಲು ಉತ್ಪಾದಕರು, ನೌಕರರ ನೂರಕ್ಕೂ ಹೆಚ್ಚು ಮಕ್ಕಳಿಗೆ ಪ್ರತಿಭಾ ಪುರಸ್ಕಾರವನ್ನು ಒಕ್ಕೂಟದ ಅಧ್ಯಕ್ಷ ಕೆ.ಈರೇಗೌಡ ನೀಡಿ, ಗೌರವಿಸಿದರು. ಈ ಸಂದರ್ಭದಲ್ಲಿ ನಿರ್ದೇಶಕರು ಹಾಗೂ ಪದಾಧಿಕಾರಿಗಳು, ಸಿಬ್ಬಂದಿ ವರ್ಗದವರು ಮತ್ತು ರೈತರು ಹಾಜರಿದ್ದರು.

ಮೈಸೂರು ವೆಸ್ಟ್ ಲಯನ್ಸ್ ಸೇವಾನಿಕೇತನ ಶಾಲೆ ವಾರ್ಷಿಕೋತ್ಸವ



ಮೈಸೂರು, ನ. 29– ಮೈಸೂರು ವೆಸ್ಟ್ ಲಯನ್ಸ್ ಸೇವಾನಿಕೇತನ ಶಾಲೆಯ ವಾರ್ಷಿಕೋತ್ಸವವನ್ನು 'ಸಂಸ್ಕೃತಿ' ಹೆಸರಿನೊಂದಿಗೆ ಆಚರಿಸಲಾಯಿತು.

ಮುಖ್ಯ ಅತಿಥಿಯಾಗಿ ಭಾರತೀಯ ವಿದ್ಯಾಭವನ ಮೈಸೂರು ಕೇಂದ್ರದ ಅಧ್ಯಕ್ಷ ಡಾ. ಸಿ. ನಾಗಣ್ಣ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಲಯನ್ ನೀರು ಮೆಹ್ತಾ (ಕ್ಲಬ್ ಅಧ್ಯಕ್ಷರು), ಲಯನ್. ನಾಗರಾಜನ್ ಶ್ರೀನಿವಾಸನ್ (ಶಾಲಾ ಅಧ್ಯಕ್ಷರು), ಡಾ. ರೂಪ ಕರುಂಬಯ್ಯ (ಪ್ರಾಂಶುಪಾಲರು), ಲಯನ್. ಡಾ. ರವಿಚಂದ್ರ ಕುಲಕರ್ಣಿ –(ಖಜಾಂಚಿ), ಪ್ರತಿಮಾ.ಆರ್ (ಉಪ ಪ್ರಾಂಶುಪಾಲರು) ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ರಂಗಭೂಮಿ ಜೀವನ ವೈವಿಧ್ಯತೆಯನ್ನು ರೂಪಿಸುತ್ತದೆ

ಪ್ರೊ. ಕೆ.ರಾಮಮೂರ್ತಿರಾವ್ ಅಭಿಮತ



ಮೈಸೂರು, ನ. 29– ರಂಗಭೂಮಿ ಜೀವನ ವೈವಿಧ್ಯತೆಯನ್ನು ರೂಪಿಸುತ್ತದೆ ಎಂದು ನೂಪುರ ಸೇವಾ ಟ್ರಸ್ಟ್‌ನ ಸಂಸ್ಥಾಪಕರು ಹಾಗೂ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಪ್ರೊ. ಕೆ. ರಾಮಮೂರ್ತಿ ರಾವ್ ಅಭಿಪ್ರಾಯಪಟ್ಟರು.

ಮೈಸೂರಿನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಜೆಎಸ್‌ಎಸ್ ಕಲಾಮಂಟಪದ ವತಿಯಿಂದ ಜೆಎಸ್‌ಎಸ್ ರಂಗೋತ್ಸವ – 2025 ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ನಾಟಕದಲ್ಲಿ ವಿಕಾಸದ ಮಾರ್ಗವೂ ಇದೆ ಮತ್ತು ವಿಲಾಸದ ಮಾರ್ಗವೂ ಇದೆ. ಉತ್ತಮ ನಾಟಕಗಳು ಉತ್ತಮ ವ್ಯಕ್ತಿತ್ವಕ್ಕೆ ಪ್ರೇರಣೆಯನ್ನು ಒದಗಿಸಿ, ಜೀವನ ವೈವಿಧ್ಯತೆಯನ್ನು ರೂಪಿಸುತ್ತದೆ. ಸಂಗೀತ, ನೃತ್ಯ, ನಾಟಕ, ಚಿತ್ರಕಲೆ ಇವುಗಳು ಜೀವನಕ್ಕೆ ಉತ್ಸಾಹವನ್ನು ಮೂಡಿಸುತ್ತವೆ. ಪುಸ್ತಕ ಓದುವುದರಿಂದ, ನಾಟಕದಲ್ಲಿ ಅಭಿನಯಿಸುವುದರಿಂದ, ನೃತ್ಯ ಮಾಡುವುದರಿಂದ, ಪರಮ ಸುಖವನ್ನು ಕಾಣಬಹುದು. ವಿದ್ಯಾರ್ಥಿನಿಯರು ಪಠ್ಯೇತರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ತಮ್ಮ ಬದುಕನ್ನು ಹಸನಾಗಿಸಿಕೊಳ್ಳಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಶ್ರೀ ಗೌರಿಶಂಕರ ನಂದಿಧ್ವಜ ಸಂಘದ ಅಧ್ಯಕ್ಷರು, 2025ನೇ ಸಾಲಿನ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಎಲ್. ಮಹಾದೇವಪ್ಪ ಉಡಿಗಾಲ ಮಾತನಾಡಿ, ರಾಜ ಮಹಾರಾಜರ ಕಾಲದಿಂದಲೂ ನಂದಿಧ್ವಜಕ್ಕೆ ಪೂಜೆ ಸಲ್ಲಿಸುವ ಪರಂಪರೆಯಿದೆ. ದಸರಾ ಸಂದರ್ಭದಲ್ಲೂ ಅಂಬಾರಿಗೂ ಮೊದಲೆ ನಂದಿಧ್ವಜಕ್ಕೆ ಪೂಜೆ ಸಲ್ಲಿಸಲಾಗುತ್ತದೆ. ನಂದಿಧ್ವಜದ ಇತಿಹಾಸವನ್ನು ತಿಳಿಯಲು ತಾವು ಬರೆದಿರುವ ಪುಸ್ತಕವನ್ನು ವಿದ್ಯಾರ್ಥಿನಿಯರು ಓದಬೇಕು ಎಂದರು. ಇಂದಿನ ತಲೆಮಾರಿನವರು ನಂದಿಧ್ವಜ ಕಲೆಯನ್ನು ಉಳಿಸಬೇಕು ಎಂದರು.

ವೇದಿಕೆಯಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕ ಪ್ರೊ. ಮೊರಬದ ಮಲ್ಲಿಕಾರ್ಜುನ, ಕಾಲೇಜಿನ ಪ್ರಾಚಾರ್ಯ ಡಾ. ರೇಚಣ್ಣ ಅವರು ಮತ್ತು ರಂಗೋತ್ಸವದ ಸಂಚಾಲಕ ಚಂದ್ರಶೇಖರಾಚಾರ್ ಹೆಗ್ಗೋಠಾರ ಉಪಸ್ಥಿತರಿದ್ದರು.

ಕನ್ನಡ ರಾಜ್ಯೋತ್ಸವ, ಮಹರ್ಷಿ ವಾಲ್ಮೀಕಿ, ಮದಕರಿ ನಾಯಕರ ಜಯಂತಿ ಆಚರಣೆ



ಮೈಸೂರು, ನ. 29– ಮೈಸೂರಿನ ಪಡುವಾರಹಳ್ಳಿಯ ವಾಲ್ಮೀಕಿ ರಸ್ತೆಯ ನಾಮಫಲಕದ ಬಳಿ 70ನೇ ಕನ್ನಡ ರಾಜ್ಯೋತ್ಸವ, ಮಹರ್ಷಿ ವಾಲ್ಮೀಕಿ ಹಾಗೂ ಮದಕರಿ ನಾಯಕರ ಜಯಂತಿಯನ್ನು ಆಚರಿಸಲಾಯಿತು.

ಮಾಜಿ ಶಾಸಕ ಎಲ್.ನಾಗೇಂದ್ರ ಮಹನೀಯರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿ, ಧಾರ್ಮಿಕ ಪುರುಷರು ಒಂದು ವರ್ಗದ ಆಚರಣೆಗೆ ಸೀಮಿತವಾಗದೆ ಎಲ್ಲರೂ ಆಚರಣೆ ಮಾಡಿದಾಗ ಮಾತ್ರ ಸಮಾಜದ ಸರ್ವತೋಮುಖ ಬೆಳವಣಿಗೆಗೆ ಸಹಕಾರಿಯಾಗುತ್ತದೆ.

ಹಿಂದೂ ಧರ್ಮದ ಮಹಾಕಾವ್ಯ ರಾಮಾಯಣ ರಚಿಸಿದ ಮಹರ್ಷಿ ವಾಲ್ಮೀಕಿ ಅವರು ರಾಮಾಯಣ ಮಹಾಕಾವ್ಯದಲ್ಲಿ ಕೌಟುಂಬಿಕ ಮಹತ್ವವನ್ನು ತಿಳಿಸಿದ್ದು, ಅದರಂತೆಯೇ ಮಾನವನ ಬದುಕು ಸಾಗಿದರೆ ಸುಖಿ ಸಮಾಜದ ಪರಿಕಲ್ಪನೆಯನ್ನು ಕಾಣಬಹುದು ಹಾಗೂ ಟಿಪ್ಪುವಿನ ಮೋಸದಿಂದ ಹಿಂದು ಧರ್ಮಕ್ಕಾಗಿ ತನ್ನ ಪ್ರಾಣವನ್ನೇ ಬಿಟ್ಟ ಮದಕರಿ ನಾಯಕರು ನಮಗೆಲ್ಲಾ ಆದರ್ಶ. ಮದಕರಿ ನಾಯಕರ ಧರ್ಮದ ಅಭಿಮಾನ ನಮಗೆ ಸ್ಫೂರ್ತಿ ದಾಯಕ ವ್ಯಕ್ತಿ ಅವರ ಆದರ್ಶಗಳನ್ನು ನಾವು ಪ್ರತಿದಿನವೂ ಪಾಲಿಸಿದಾಗ ಮಹನೀಯರಿಗೆ ಗೌರವ ಸಲ್ಲಿಸಿದಂತಾಗುತ್ತದೆ ಎಂದರು.

ಮೈಸೂರು ಜಿಲ್ಲಾ ಹಾಲು ಒಕ್ಕೂಟದ ನಿರ್ದೇಶಕ ಕೆಉಮಾಶಂಕರ್, ಎಲ್. ಚೌಡಪ್ಪ ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ ರಾಮಕೃಷ್ಣ, ಮಾಜಿ ನಗರಪಾಲಿಕೆ ಸದಸ್ಯ ಗುರುವಿ ನಾಯಕ, ರಂಗಸ್ವಾಮಿ, ಎಂ.ಚಿಕ್ಕವೆಂಕಟು, ಕೃಷ್ಣ ನಾಯಕ, ಯತೀಶ್, ಅಭಿ, ಸಿ.ಡಿ. ಕಿಮಾರ್, ಗ್ರಾಜ್ಯುಯೇಟ್ ಬ್ಯಾಂಕ್ ನಿರ್ದೇಶಕಿ ವರಲಕ್ಷ್ಮೀ, ಗೋಕುಲಂ ವಿ.ಮಧು, ಸಂತೋಷ್, ನಾರಾಯಣ, ಮಂಜುನಾಥಪುರಂ ಗೋವಿಂದ, ಮಹೇಶ್, ಅರ್ಜುನ ಕುಮಾರ್, ಎಂ.ಪಿ. ಗುರುದತ್ತ ರಮೇಶ್, ವೀರನಗೆರೆ ಶ್ರೀನಿವಾಸ, ಬಿ.ಜೆ. ನಾರಾಯಣಸ್ವಾಮಿ, ವೇಣು, ಜೆಸಿ.ಬಿ. ರವಿ, ಗೋಕುಲಂ ನಾಗ, ಕಿರಣ್, ಚಿಕ್ಕರಂಗನಾಯಕ, ರಂಗಸ್ವಾಮಿ ನಾಯಕ, ರಂಗರಾಜು, ಎಸ್.ತ್ಯಾಗರಾಜ್, ಎಸ್‌ಸಿ ಮೋರ್ಚಾದ ಕಾರ್ಯದರ್ಶಿ ಕೆಗಿರೀಶ್, ರಾಜು, ವಿನೋದ್ ನಾಗವಾಲ, ಸ್ವಾಮಿ ನಾಯಕ, ವಿನೋದ ನಾಗವಾಲ, ಆರ್. ಸೋಮಣ್ಣ ಮತ್ತಿತರರು ಉಪಸ್ಥಿತರಿದ್ದರು.

ಇಂದು ಮೈಸೂರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ



ಮೈಸೂರು, ನ.29– ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರು ನ.30 ರಂದು ಮೈಸೂರು ಜಿಲ್ಲಾ ಪ್ರವಾಸವನ್ನು ಕೈಗೊಂಡಿದ್ದಾರೆ. ಅಂದು ಮಧ್ಯಾಹ್ನ 12.25 ಗಂಟೆಗೆ ಮೈಸೂರಿನ ವಿಮಾನ ನಿಲ್ದಾಣಕ್ಕೆ ಆಗಮಿಸಲಿದ್ದಾರೆ. ನಂತರ ಮಹದೇಶ್ವರ ಪಾರಂ, ಭೂಗತಹಳ್ಳಿ, ಟಿ.ನರಸೀಪುರ ರಸ್ತೆ ಇಲ್ಲಿ ಸ್ಥಳೀಯ ಕಾರ್ಯಕ್ರಮದಲ್ಲಿ ಭಾಗವಹಿಸುವರು. ನಂತರ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಸಭೆ ನಡೆಸಲಿದ್ದಾರೆ. ಮಧ್ಯಾಹ್ನ 3 ಗಂಟೆಗೆ ಮಂಡಕಳ್ಳಿ ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದಲ್ಲಿ ಬೆಂಗಳೂರಿಗೆ ತೆರಳಲಿದ್ದಾರೆ ಎಂದು ಅಧಿಕೃತ ಮಾಹಿತಿ ತಿಳಿಸಿದೆ.

ಪದವಿ ಕಲಿಕೆಯ ಅಂತ್ಯವಲ್ಲ; ಅದು ಕಲಿಕೆಯ ಹೊಸ ಪಯಣ



ಕಂಪ್ಯೂಟರ್ ಸೈನ್ಸ್ ವಿಭಾಗದ ಸುಮನ್ ಸಿ.ಎಸ್., ಇಸಿ ವಿಭಾಗದ ಚಂದನಾ ಎನ್., ಇಇಇ ವಿಭಾಗದ ಕಿಶೋರ್ ವೈ.ಎ., ಐಎಸ್‌ಇ ವಿಭಾಗದ ಚರಿತ್ರ ಎ.ಎನ್., ಹಾಗೂ ಸಿವಿಲ್ ಇಂಜಿನಿಯರಿಂಗ್‌ನ ಉಲ್ಲಾಸ್ ಆರ್ ಅವರಿಗೆ ವಿಶೇಷ ಪ್ರಶಸ್ತಿ ನೀಡಲಾಯಿತು.

ಮೈಸೂರು, ನ.29(ವಿವಿಹೆಚ್)– ಪದವಿ ಪಡೆಯುವುದು ಕಲಿಕೆಯ ಅಂತ್ಯವಲ್ಲ, ಅದು ಕಲಿಕೆಯ ಹೊಸ ಪಯಣದ ಪ್ರಾರಂಭ ಎಂದು ಸಿ–ಡಾಟ್, ಬೆಂಗಳೂರಿನ ನಿರ್ದೇಶಕರಾದ ದಿಲೀಪ್ ಕೃಷ್ಣಸ್ವಾಮಿ ಹೇಳಿದರು.

ವಿದ್ಯಾವಿಕಾಸ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿಯಲ್ಲಿ ಶನಿವಾರ ನಡೆದ ಪದವಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದರು.

ಜೀವನದಲ್ಲಿ ಯಾವ ಹಂತದಲ್ಲಿದ್ದರೂ ಕಲಿಕೆ ನಿಲ್ಲಬಾರದು, ಅದು ವ್ಯಕ್ತಿತ್ವ ಮತ್ತು ವೃತ್ತಿಜೀವನದ ಬೆಳವಣಿಗೆಗೆ ಅಗತ್ಯವಿದೆ. ತರಗತಿ ಕೋಣೆಯ ಪಾಠಗಳಿಗಿಂತಲೂ ಬದುಕು ದೊಡ್ಡ ಶಿಕ್ಷಕ, ಪ್ರತಿದಿನವೂ ಹೊಸದನ್ನು ಕಲಿಯುವ ಮನೋಭಾವ ಇರಬೇಕು ಎಂದು ಸಲಹೆ ನೀಡಿದರು.

ವಿದ್ಯಾರ್ಥಿಗಳು ತಮ್ಮ ಆಸಕ್ತಿಯನ್ನು ಅನುಸರಿಸಿ, ಬದಲಾವಣೆಗಳಿಗೆ ಹೊಂದಿಕೊಳ್ಳುವುದನ್ನು ಕಲಿಯಬೇಕು ಮತ್ತು ಸವಾಲುಗಳನ್ನು ಬೆಳವಣಿಗೆಯ ಅವಕಾಶಗಳಾಗಿ ನೋಡಬೇಕು. ಗಮ್ಯವನ್ನು ತಲುಪುವುದಷ್ಟೇ ಅಲ್ಲ, ಆ ಪಯಣವನ್ನು ಆನಂದಿಸಬೇಕು ಎಂದು ಹೇಳಿದರು.

ದಿಲೀಪ್ ಕೃಷ್ಣಸ್ವಾಮಿ ಮಾತನಾಡಿ, ಎಐ ನಿಮ್ಮ ಉದ್ಯೋಗಗಳಿಗೆ ಶತ್ರು ಅಲ್ಲ, ಅದು ನಿಮಗೆ ಉತ್ತಮವಾಗಿ ಕೆಲಸ ಮಾಡಲು ಸಹಾಯ ಮಾಡುವ ಸಾಧನ. ತಮ್ಮ ಆಸಕ್ತಿ ಇರುವ ಕ್ಷೇತ್ರಗಳಲ್ಲಿ ಪರಿಣತಿ ಗಳಿಸಿ, ಎಐ ಅನ್ನು ರಚನಾತ್ಮಕವಾಗಿ ಬಳಸಿಕೊಳ್ಳಬೇಕು. ನಿಮ್ಮ ಭವಿಷ್ಯ ನಿಮ್ಮ ಕೈಯಲ್ಲಿದೆ, ಸಾಧನೆಗೆ ಯಾವುದೇ ಅಡ್ಡಿಯಾಗಲು ಬಿಡಬೇಡಿ ಎಂದು ಪ್ರೋತ್ಸಾಹಿಸಿದರು.

ಈ ಬಾರಿ ಒಟ್ಟು 291 ಪದವೀಧರು ಪದವಿ ಪಡೆದರು. ಇವರಲ್ಲಿ 149 ಮಂದಿ ಹುಡುಗರು ಮತ್ತು 142 ಮಂದಿ ಹುಡುಗಿಯರು. ಕಾಲೇಜಿನ ಅತ್ಯುತ್ತಮ ಸಾಧಕರಿಗೆ ಗೌರವ ಪ್ರದಾನ ಮಾಡಲಾಯಿತು. ಅಧ್ಯಕ್ಷ ರಿತೇಶ್ ಗೌಡ, ಪ್ರಾಂಶುಪಾಲ ಕುಬಸ್ಸಪ್ಪಕ್ವಾಡಿಕಿ ಉಪಸ್ಥಿತರಿದ್ದರು.

ಜೀವನಕ್ಕಾಗಿ ಕಟ್ಟಿಕೊಂಡ ಶಿಲ್ಪಕಲೆ ದೇಶಕ್ಕೆ ಸಮರ್ಪಣೆಯಾಯಿತು

ಬಾಲರಾಮನ ಕೆತ್ತನೆ ಅನುಭವ ಹಂಚಿಕೊಂಡ ಶಿಲ್ಪಿ ಅರುಣ್ ಯೋಗಿರಾಜ್



ದಿ.ಅನಾಥಾಲಯ ವತಿಯಿಂದ ಶಿಲ್ಪಿ ಅರುಣ್ ಯೋಗಿರಾಜ್ ಅವರನ್ನು ಸನ್ಮಾನಿಸಲಾಯಿತು.

ಮೈಸೂರು, ನ.29(ವಿವಿಹೆಚ್)– ಉದ್ದೇಶ ಸುಂದರವಾಗಿದ್ದರೆ ಭಗವಂತ ಕೈ ಹಿಡಿಯುತ್ತಾನೆ. ಜೀವನಕ್ಕಾಗಿ ಕಟ್ಟಿಕೊಂಡ ಶಿಲ್ಪಕಲೆ ಸೇವೆ, ಇಂದು ದೇಶಕ್ಕೂ ಸಮರ್ಪಣೆಯಾಯಿತು ಎಂದು ರಾಮಲಲ್ಲಾ ಮೂರ್ತಿ ಕೆತ್ತನೆಕಾರ ಶಿಲ್ಪಿ ಅರುಣ್ ಯೋಗಿರಾಜ್ ತಿಳಿಸಿದರು.

ಮೈಸೂರಿನ ನಾರಾಯಣ ಶಾಸ್ತ್ರಿ ರಸ್ತೆ ದಿ.ಅನಾಥಾಲಯದ ಅನ್ನಪೂರ್ಣ ನಿಲಯದಲ್ಲಿ ಶನಿವಾರ ಆಯೋಜಿಸಿದ್ದ ತಾತಯ್ಯ ಸ್ಮಾರಕ ಉಪನ್ಯಾಸ ಮಾಲೆ–2025 ರಲ್ಲಿ 'ಅಯೋಧ್ಯೆ ರಾಮ ಮಂದಿರ ಬಲರಾಮನ ವಿಗ್ರಹದ ಸೃಷ್ಟಿಯಲ್ಲಿ ಶಿಲ್ಪಿಯಾಗಿ ತಮ್ಮ ಅನುಭವಗಳು' ಕುರಿತು ಶಿಲ್ಪಿ ಅರುಣ್ ಯೋಗೀರಾಜ್ ಹಂಚಿಕೊಂಡರು.

ಈ ಹಿಂದೆ ಕೆತ್ತನೆ ಮಾಡಿದ್ದ ಶಂಕರಾಚಾರ್ಯರರು, ನೇತಾಜಿ ಸುಭಾಷ್ ಚಂದ್ರ ಬೋಸ್ ಪ್ರತಿಮೆಗಳು ರಾಮಲಲ್ಲಾ ಮೂರ್ತಿ ಕೆತ್ತನೆಗೆ ಅವಕಾಶ ಸಿಗಲು ಪ್ರಮುಖ ಪಾತ್ರ ವಹಿಸಿದ್ದವು. ಅವುಗಳ ಕೆಲಸ ನೋಡಿ ನನಗೆ ದೇಶವೇ ಮೆಚ್ಚುವಂತಹ ಕೆಲಸ ಮಾಡಲು ಸಾಧ್ಯವಾಯಿತು ಎಂದರು.

ಶಾಸ್ತ್ರಬದ್ಧವಾಗಿ, ಭಾವನೆ, ಸೌಂದರ್ಯ, ಅಲಂಕಾರ ಇರುವಂತೆ ಮೂರ್ತಿ ಕೆತ್ತನೆ ಮಾಡಲು ಏಕಾಗ್ರತೆ ಕೊರತೆ ಉಂಟಾಗಬಾರದೆಂದು ಪ್ರಪಂಚದ ಒಡನಾಟದಿಂದ ದೂರ ಉಳಿದಿದ್ದೆ. ಶಿಲ್ಪಕಲೆ ತುಂಬಾ ಶ್ರಮದ ಕೆಲಸ. ತಾಳ್ಮೆ, ಏಕಾಗ್ರತೆ, ಶ್ರದ್ಧೆ ಇದರಲ್ಲಿ ತುಂಬಾ ಮುಖ್ಯ. ಕಲ್ಲಿನೊಂದಿಗೆ ಸಮಯ ಕಳೆಯಬೇಕು ಎಂದು ನಿರ್ಧರಿಸಿದಾಗ ನನ್ನ ಕುಟುಂಬ ನನಗೆ ಬೆಂಬಲವಾಗಿ ನಿಂತಿತು ಎಂದು ನೆನೆದರು.

ಮೂರ್ತಿ ಕೆತ್ತನೆಯಲ್ಲಿ ನನ್ನ ಶ್ರಮದೊಂದಿಗೆ ಸಮಾಜದ ಪಾತ್ರ ದೊಡ್ಡದಾಗಿತ್ತು. ದೇವರನ್ನು ಸೃಷ್ಟಿಸಿ ದೇವರಾಗುವುದು ಸರಿಯಲ್ಲ. ಮನುಷ್ಯನಾಗಿದ್ದು, ಮನುಷ್ಯನಾಗಿಯೇ ಸಾಯಬೇಕು. ಜೀವನದಲ್ಲಿ ಯಶಸ್ಸು ಎಂಬುದು ಯಾವುದೋ ಒಂದು ಕೆಲಸಕ್ಕೆ ಅಥವಾ ಸ್ಥಾನಮಾನಕ್ಕೆ ಸೀಮಿತವಾಗಬಾರದು. ಹರಿಯುವ ನೀರಿನಂತೆ ನಾವು ಮಾಡುವ ಪ್ರತಿ ಕೆಲಸವೂ ಯಶಸ್ಸಿನತ್ತ ಸಾಗಬೇಕು ಎಂದರು.

ಯಶಸ್ಸು ಸಾಧಿಸಲು ಸಮಯ ಮತ್ತು ಅವಕಾಶವನ್ನು ಬಹಳ ಎಚ್ಚರಿಕೆಯಿಂದ ವ್ಯಯಿಸಬೇಕು. ಯಶಸ್ಸಿಗೆ ಯಾವುದೇ ಅಡ್ಡದಾರಿ ಇಲ್ಲ ಪರಿಶ್ರಮವೊಂದೆ ಏಕೈಕ ಮಾರ್ಗ. ಹಾಗಾಗಿ ವಿದ್ಯಾರ್ಥಿಗಳು ನಿರಂತರ ಶ್ರಮ, ಶ್ರದ್ಧೆ ಮೂಲಕ ತಮ್ಮ ಗುರಿಯನ್ನು ಸಾಧಿಸಿ ಎಂದು ಕಿವಿ ಮಾತು ಹೇಳಿದರು.

ಶಿಲ್ಪಕಲೆಯನ್ನೇ ಕುಲಕಸುಬಾಗಿಸಿಕೊಂಡ ಕುಟುಂಬ ನಮ್ಮದು. ಮೊದಲಿನಿಂದಲೂ ಓದಿನೊಂದಿಗೆ ಶಿಲ್ಪಕಲೆಯಲ್ಲಿಯೂ ಆಸಕ್ತಿ ಇತ್ತು. ಎಂಬಿಎ ಶಿಕ್ಷಣ ಪೂರ್ಣಗೊಳಿಸಿ, ಬೇರೆಲ್ಲಾ ಕೆಲಸಗಳನ್ನು ತ್ಯಜಿಸಿ, ಬಹಳ ಆಸೆ ಮತ್ತು ಪ್ರೀತಿಯಿಂದ ಶಿಲ್ಪಕಲೆಯಲ್ಲಿ ತೊಡಗಿಸಿಕೊಂಡೆ. ಅದರ ಪ್ರತಿಫಲವಾಗಿ ದೇಶದ ಪ್ರಧಾನಿ ಅವರೊಂದಿಗೆ ಸಂವಹಿಸುವ ಅವಕಾಶ ಸಿಕ್ಕಿತು ಎಂದರು.

ಮಗುವಿನ ಮುಖ ಬರುವಂತೆ ಶ್ರೀರಾಮನ ವಿಗ್ರಹ ಕೆತ್ತುವುದು ಬಹಳ ಸವಾಲಿನ ಕೆಲಸವಾಗಿತ್ತು. ರಾಮನ ಬಾಲ್ಯ ಸ್ವರೂಪ ನಾವು ನೋಡಿರಲಿಲ್ಲ. ಆದರೆ ಜನರ ಮನಸ್ಸಿಗೆ ಮುಟ್ಟುವಂತೆ ಮೂರ್ತಿ ಸೃಷ್ಟಿಸುವುದು ಸವಾಲಾಗಿತ್ತು. ಜನರು ಹೇಗೆ ಸ್ವೀಕಾರ ಮಾಡುತ್ತಾರೆ ಎನ್ನುವ ಭಯವಿತ್ತು. ಜನರ ಪ್ರತಿಕ್ರಿಯೆ ಮೇಲೆ ಹೆಚ್ಚು ಅವಲಂಬಿತನಾದೆ. ಕೆಲಸ ಆರಂಭದಲ್ಲಿ ಮನಸ್ಸು ಖಾಲಿಯಾಗಿತ್ತು. ನಂತರ ಮಕ್ಕಳ ಕುರಿತು ಅಧ್ಯಯನ ಮಾಡಿ, ಅವರೊಂದಿಗೆ ಬೆರೆತು ಬಾಲಕನ ದೇಹ ಸ್ವರೂಪ, ಶ್ರೀರಾಮನ ಮುಖ ಗೋಚರಿಸುವಂತೆ ಮೂರ್ತಿ ಕೆತ್ತಲಾಯಿತು ಎಂದು ರಾಮಲಲ್ಲಾ ಮೂರ್ತಿ ಕೆತ್ತನೆ ವೇಳೆ ನಡೆದ ಘಟನೆಗಳನ್ನು ಮೆಲುಕು ಹಾಕಿದರು.

ದಿ.ಅನಾಥಾಲಯ ಅಧ್ಯಕ್ಷ ಸಿ.ವಿ. ಗೋಪಿನಾಥ್, ಉಪಾಧ್ಯಕ್ಷ ಎನ್.ವಿ. ದಿನೇಶ್, ಕಾರ್ಯದರ್ಶಿ ಹೆಚ್.ಅಶ್ವತ್ಥ್ ನಾರಾಯಣ, ಸಮನ್ವಯಾಧಿಕಾರಿ ಡಾ. ಎಸ್.ಮುರಳಿ ಉಪಸ್ಥಿತರಿದ್ದರು.

ಕುರ್ಚಿ ಕದನಕ್ಕೆ ಬ್ರೇಕ್: ಹೃದಯಾಘಾತಕ್ಕೆ ಸ್ಟಂಟ್ ಹಾಕಿ ಜೀವ ಉಳಿಸಿದ್ದಾರೆ

ಸಂಸದ ಬಿ.ವೈ. ರಾಘವೇಂದ್ರ ವ್ಯಂಗ್ಯ



ಶಿವಮೊಗ್ಗ, ನ.29– ಸಿಎಂ ಕುರ್ಚಿ ಕಿತ್ತಾಟಕ್ಕೆ ತಾತ್ಕಾಲಿಕ ಬ್ರೇಕ್ ಬಿದ್ದಿದ್ದು, ಹೃದಯಾಘಾತಕ್ಕೆ ಸ್ಟಂಟ್ ಹಾಕಿ ಜೀವ ಉಳಿಸಿದ್ದಾರೆ ಎಂದು ಸಂಸದ ಬಿ.ವೈ ರಾಘವೇಂದ್ರ ವ್ಯಂಗ್ಯವಾಡಿದ್ದಾರೆ. ಶಿವಮೊಗ್ಗದಲ್ಲಿ ಮಾಧ್ಯಮಗಳ ಜೊತೆ ಅವರು ಮಾತನಾಡಿದರು. ಈ ವೇಳೆ, ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ಬ್ರೇಕ್ ಫಾಸ್ಟ್ ಮೀಟಿಂಗ್ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದರು. ಪವರ್ ಶೇರಿಂಗ್ ವಿಚಾರದಲ್ಲಿ ತಾತ್ಕಾಲಿಕ ಬ್ರೇಕ್ ಬಿದ್ದಿದೆ. ಅಧಿವೇಶನದ ಬಳಿಕ ಈ ಕಿತ್ತಾಟ ಮುಂದುವರಿಯಲಿದೆ ಎಂದಿದ್ದಾರೆ.

ಒಂದು ತಿಂಗಳಿನಿಂದ ಸಿಎಂ ಕುರ್ಚಿ ನಾಟಕ ನಡೆಯಿತು. ಈಗ ಇಬ್ಬರು ಒಟ್ಟಿಗೆ ಪ್ರೆಸ್ ಮೀಟ್ ಮಾಡಿ, ಮಾಧ್ಯಮವನ್ನು ಮೊದಲನೇ ಆರೋಪಿ ಮಾಡಿದ್ದಾರೆ. ನಂತರ ವಿಪಕ್ಷವನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿದ್ದಾರೆ. ಸರ್ಕಾರ ಮಾಡಿರುವ ತಪ್ಪನ್ನು ಈಗ ಮಾಧ್ಯಮ ಮತ್ತು ವಿಪಕ್ಷಗಳ ಮೇಲೆ ಹಾಕುತ್ತಿದ್ದಾರೆ ಎಂದು ಸರ್ಕಾರದ ವಿರುದ್ಧ ಕಿಡಿಕಾರಿದ್ದಾರೆ.

ಕುರ್ಚಿ ಕದನದಿಂದ ಸರ್ಕಾರದಲ್ಲಿ ಅಧಿಕಾರಿಗಳು ಕೆಲಸ ಮಾಡುತ್ತಿಲ್ಲ. ಎಲ್ಲರೂ ಅಭದ್ರತೆ ಮತ್ತು ಗೊಂದಲದಲ್ಲಿದ್ದಾರೆ. ಇದರಿಂದ ರಾಜ್ಯದಲ್ಲಿ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಮೆಕ್ಕೆಜೋಳದ ಖರೀದಿ ಮಾಡಲು ವಿಳಂಬವಾಗಿದೆ. ರೈತರು ಕಡಿಮೆ ಬೆಲೆಗೆ ಬೆಳೆ ಮಾರಾಟ ಮಾಡಿದ್ದಾರೆ. ಈಗ ಸಿಎಂ ಮತ್ತು ಡಿಸಿಎಂ ತೇಪೆ ಹಚ್ಚುವ ಕೆಲಸ ಮಾಡುತ್ತಿದ್ದಾರೆ ಎಂದು ಕಿಡಿಕಾರಿದ್ದಾರೆ.

ಮೈಸೂರು ಮಿತ್ರ ಭಾನುವಾರ 30 ನವೆಂಬರ್ 2025

ಇಷ್ಟಾರ್ಥ ಸಿದ್ಧಿಗೆ ಹೆಸರುವಾಸಿಯಾದ ಭೂವರಹನಾಥ ದೇಗುಲದಲ್ಲಿ

ಸತತ ಎರಡು ಗಂಟೆ ವಿಶೇಷ ಪೂಜೆ; ಪ್ರಾರ್ಥನೆ ಸಲ್ಲಿಸಿದ ಡಿಕೆಶಿ

ಮಂಡ್ಯ, ನ.29– ರಾಜ್ಯದಲ್ಲಿ ನಾಯಕತ್ವ ಬದಲಾವಣೆಯ ಚರ್ಚೆ ಬಲು ಜೋರಾಗಿ ನಡೆಯುತ್ತಿರುವ ಸಂದರ್ಭದಲ್ಲಿ ಇಷ್ಟಾರ್ಥ ಸಿದ್ಧಿಗೆ ಪ್ರಖ್ಯಾತಿ ಹೊಂದಿರುವ ಜಿಲ್ಲೆಯ ಭೂವರಹನಾಥ ದೇಗುಲಕ್ಕೆ ಉಪಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ ದಂಪತಿ ಭೇಟಿ ನೀಡಿ ಸತತ ಎರಡು ಗಂಟೆಗಳ ಕಾಲ ವಿಶೇಷ ಪೂಜೆ ಮತ್ತು ಪ್ರಾರ್ಥನೆ ಸಲ್ಲಿಸಿದರು.

ಜಿಲ್ಲೆಯ ಕೆ.ಆರ್.ಪೇಟೆ ತಾಲೂಕಿನ ವರಾಹನಾಥ ಕಲ್ಲಹಳ್ಳಿಯಲ್ಲಿರುವ ಭೂವರಹನಾಥ ದೇಗುಲದಲ್ಲಿ ಹೋಮ ಕುಂಡಕ್ಕೆ ದಂಪತಿ ಪೂರ್ಣಾಹುತಿ ಸೇವೆ ಸಲ್ಲಿಸಿ, ನಂತರ ಅಭಿಷೇಕ, ವಿಶೇಷ ಪೂಜೆ ಸಲ್ಲಿಸಿ, ಪ್ರಾರ್ಥನೆ ಮಾಡಿದರು. ಪೂಜೆ ಮಧ್ಯೆಯೇ ಪ್ರಸಾದ ಸ್ವೀಕರಿಸಿದ ಡಿಕೆಶಿ ದಂಪತಿ, ನಂತರ ಮಹಾಮಂಗಳಾರತಿಯಲ್ಲಿ ಪಾಲ್ಗೊಂಡು ವಿಶೇಷ ಪೂಜೆ ಸಲ್ಲಿಸಿದರು. ಈ ವೇಳೆ ದೇಗುಲದ ಇತಿಹಾಸ, ಅಭಿವೃದ್ಧಿ ಬಗ್ಗೆ ಮಾಹಿತಿ ಪಡೆದರು.

ಪೂರ್ಣಕುಂಭ ಸ್ವಾಗತ: ಭೂವರನಾಥ ದೇಗುಲಕ್ಕೆ ಆಗಮಿಸಿದ ಡಿಸಿಎಂಗೆ ಡಿಕೆಶಿಗೆ ದೇಗುಲದ ಆಡಳಿತ ಮಂಡಳಿಯಿಂದ ಪೂರ್ಣಕುಂಭ ಸ್ವಾಗತ ಕೋರಲಾಯಿತು. ಶನಿವಾರದ ದಿನ ದೇವರಿಗೆ ವಿಶೇಷ ಪೂಜೆ ಸಲ್ಲಿಸಿದರೆ ಇಷ್ಟಾರ್ಥ ಸಿದ್ಧಿ ಹಿನ್ನೆಲೆಯಲ್ಲಿ ದೇಗುಲದಲ್ಲಿ ವಿಶೇಷ ಪೂಜೆ, ಹೋಮ–ಹವನ ನಡೆಸಲಾಯಿತು. ಅಧಿಕಾರ ಸಿದ್ಧಿಗಾಗಿ ಭೂವರಹನಾಥಸ್ವಾಮಿ ಹೋಮ, ಹವನ, ದಂಪತಿ ಸಮೇತವಾಗಿ ಹೋಮಕ್ಕೆ ಪೂರ್ಣಹುತಿ ಅರ್ಪಣೆ ಮಾಡಲಾಗಿದೆ ಎಂಬ ಮಾಹಿತಿ ಡಿಕೆಶಿ ಆಪ್ತರಿಂದ ಲಭ್ಯವಾಗಿದೆ.

ಇದೇ ವೇಳೆ ಮುಂದಿನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಎಂದು ಕಾರ್ಯಕರ್ತರು ಘೋಷಣೆ ಕೂಗಿದ ಘಟನೆಯೂ ನಡೆಯಿತು. ಡಿಕೆಶಿ ಆಗಮಿಸುತ್ತಿದ್ದಂತೆ ಕಾರ್ಯಕರ್ತರು ಘೋಷಣೆ ಮೊಳಗಿಸಿದರು.

ದೇವರ ಪ್ರೇರಣೆಯಿಂದ ಇಲ್ಲಿಗೆ ಬಂದಿರುವೆ: ಭೂವರಹನಾಥ ದೇವಾಲಯದಲ್ಲಿ ದೇವರ ದರ್ಶನದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ನಾನು ತಿಹಾರ್ ಜೈಲಲ್ಲಿದ್ದಾಗ ನಮ್ಮ ಅತ್ತೆ, ಮಾವ ಈ ದೇವಾಲಯಕ್ಕೆ 4 ಬಾರಿ ಬಂದಿದ್ದರು. ಕಳೆದ ಎರಡು ವರ್ಷಗಳಿಂದ ಬೇರೆ ಪಕ್ಷದಲ್ಲಿ ಶಾಸಕರಾಗಿರುವ ಸ್ನೇಹಿತರೊಬ್ಬರು ಇಲ್ಲಿಗೆ ಹೋಗಲು ಹೇಳುತ್ತಿದ್ದರು. ಆದರೆ ಬರಲು ಸಾಧ್ಯವಾಗಿರಲಿಲ್ಲ. ಇಲ್ಲಿ ಬಂದು ನೋಡಿದಾಗ ನನಗೆ ಮಹಿಮೆ ಅರ್ಥವಾಯಿತೆಂದು ತಿಳಿಸಿದರು.

ಇದು ಅದ್ಭುತ, ಐತಿಹಾಸಿಕ ದೇವಾಲಯ ಎಲ್ಲಾ ಧರ್ಮದ ಜನ ಈ ದೇವಾಲಯಕ್ಕೆ ಬಂದು ಪ್ರಾರ್ಥನೆ ಸಲ್ಲಿಸುತ್ತಾರೆ. ಅದನ್ನು ನೋಡಿ ಖುಷಿ ಎನಿಸಿತು. ವಿಗ್ರಹ ಬಹಳ ಸುಂದರವಾಗಿದೆ. ಈ ದೇವಾಲಯ ಕಟ್ಟಲು ಮುಸ್ಲೀಂ ಸಮುದಾಯದವರು ಸಹ ಕೆಲಸ ಮಾಡಿದ್ದಾರೆ. ಈ ದೇವಾಲಯದಲ್ಲಿ ಜಾತಿ, ಧರ್ಮ ಇಲ್ಲ. ಇವತ್ತು ಈ ದೇವಾಲಯಕ್ಕೆ ಬರಲು ಕಾರಣ ದೇವರ ಪ್ರೇರಣೆ. ರಾಜ್ಯಕ್ಕೆ ಒಳಿತಾಗಲಿ ಎಂದು ಪ್ರಾರ್ಥಿಸಿದ್ದೇನೆ ಎಂದು ಸ್ಪಷ್ಟಪಡಿಸಿದರು.

ಇವತ್ತು ಬೆಳಿಗ್ಗೆಯಷ್ಟೇ ದೇವಾಲಯ ಭೇಟಿ ನಿಗದಿಯಾಯಿತು. ಬರಬೇಕಾದರೆ ಏನಾದರೂ ತರಬೇಕಾ ಎಂದು ಅರ್ಚಕರನ್ನ ಕೇಳಿದೆ. ಏನು ಬೇಡ ಬಂದು ದರ್ಶನ ಮಾಡಿ ಸಾಕು ಎಂದಿದ್ದರು. ನನಗೆ ಉನ್ನತ ಹುದ್ದೆ ಸಿಗಲಿ ಎಂದು ಹೋಮ ಮಾಡಿದ್ದಾರೆಂಬ ವಿಚಾರ ಗೊತ್ತಿಲ್ಲ. ಎಲ್ಲಾ ಹಿರಿಯರು, ಸ್ವಾಮಿಗಳು ನನ್ನನ್ನ ಪ್ರೀತಿಯಿಂದ ಕಾಣುತ್ತಿದ್ದಾರೆ ಅಷ್ಟೇ ಎಂದು ಹೇಳಿದರು.

ಈ ಸಂದರ್ಭದಲ್ಲಿ ಡಿಕೆಶಿ ಪತ್ನಿ ಉಷಾ ಶಿವಕುಮಾರ್, ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್, ಮುಖಂಡರಾದ ಬಿ.ಎಲ್.ದೇವರಾಜು, ಕಿಕ್ಕೇರಿ ಸುರೇಶ್ ಇನ್ನಿತರರಿದ್ದರು.



ಡಿ.ಕೆ.ಶಿವಕುಮಾರ್ ದಂಪತಿ ಭೂವರಹನಾಥ ಸ್ವಾಮಿಗೆ ವಿಶೇಷ ಪೂಜೆ, ಹೋಮ ಹವನ ನೆರವೇರಿಸಿ ಪ್ರಸಾದ ಸ್ವೀಕರಿಸಿದರು.

ಡಿಸಿಎಂ ಡಿಕೆಶಿ ಬರುವ ಮುನ್ನ ಹೆಜ್ಜೇನು ದಾಳಿ

ರಾಜ್ಯ ರಾಜಕಾರಣದಲ್ಲಿ ಮುಖ್ಯಮಂತ್ರಿ ಸ್ಥಾನದ ಕನಸು ಕಾಣುತ್ತಿರುವ ಡಿ.ಕೆ. ಶಿವಕುಮಾರ್ ಅವರಿಗೆ ವಿಚಿತ್ರ ಘಟನೆ ಎದುರಾಗಿದೆ. ಅವರು ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ತಾಲೂಕಿನ ಐತಿಹಾಸಿಕ ಭೂವರಹನಾಥ ದೇಗುಲಕ್ಕೆ ಭೇಟಿ ನೀಡುವ ಮುನ್ನವೇ, ಅಲ್ಲಿ ದಿಢೀರ್ ಹೆಜ್ಜೇನು ದಾಳಿ ಸಂಭವಿಸಿದೆ.

ದೇವಸ್ಥಾನದಲ್ಲಿ ಪ್ರತಿ ಶನಿವಾರದಂತೆ ಇಂದು ಕೂಡ ವಿಶೇಷ ಹೋಮ–ಹವನ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಹೋಮದ ಹೊಗೆಯು ತೀವ್ರವಾಗಿದ್ದರಿಂದ, ದೇವಸ್ಥಾನದ ಆವರಣದಲ್ಲಿ ಗೂಡು ಕಟ್ಟಿದ್ದ ಹೆಜ್ಜೇನುಗಳ ಹಿಂಡು ದಿಕ್ಕಾಪಾಲಾಗಿ ಹಾರಾಡಲಾರಂಭಿಸಿತು. ಕೆರಳಿದ ಈ ಹೆಜ್ಜೇನುಗಳು ದೇಗುಲದಲ್ಲಿ ನೆರೆದಿದ್ದ ಭಕ್ತಾದಿಗಳ ಮೇಲೆ ಏಕಾಏಕಿ ದಾಳಿ ನಡೆಸಿವೆ.

ಈ ದಿಢೀರ್ ದಾಳಿಯಿಂದಾಗಿ ದೇಗುಲದಲ್ಲಿ ತೀವ್ರ ಗೊಂದಲದ ವಾತಾವರಣ ನಿರ್ಮಾಣವಾಯಿತು. ಜೇನುಗಳಿಂದ ತಪ್ಪಿಸಿಕೊಳ್ಳಲು ಭಕ್ತರು ಹರಸಾಹಸ ಪಟ್ಟರು. ದಾಳಿಯ ಪರಿಣಾಮವಾಗಿ ಹಲವು ಭಕ್ತರಿಗೆ ಗಾಯಗಳಾಗಿದ್ದು, ಗಾಯಗೊಂಡವರಿಗೆ ದೇಗುಲದ ಆವರಣದಲ್ಲಿಯೇ ಪ್ರಥಮ ಚಿಕಿತ್ಸೆ ನೀಡಲಾಯಿತು.

ಅನ್ನ ಸುವಿಧಾ ಯೋಜನೆಯಡಿ ಮನೆ ಬಾಗಿಲಿಗೆ ರೇಷನ್



ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಯ ಅನುಷ್ಠಾನ ಪ್ರಾಧಿಕಾರದ ಸಮಿತಿ ಸಭೆಯಲ್ಲಿ ಜಿಪಂ ಸಿಇಓ ಕೆ.ಆರ್.ನಂದಿನಿ ಮಾತನಾಡಿದರು.

ಮಂಡ್ಯ, ನ.29– ಸರ್ಕಾರದ ಅನ್ನ ಸುವಿಧಾ ಯೋಜನೆಯಡಿ 75 ವರ್ಷ ಮೇಲ್ಪಟ್ಟ ಏಕ ಸದಸ್ಯವಿರುವ ಪಡಿತರ ಚೀಟಿದಾರರಿಗೆ ಅನುಕೂಲವಾಗಲು ಮನೆ ಬಾಗಿಲಿಗೆ ಡೋರ್ ಡೆಲಿವರಿ ಮೂಲಕ ಪಡಿತರ ತಲುಪಿಸಲಾಗುವುದು ಎಂದು ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಆರ್.ನಂದಿನಿ ತಿಳಿಸಿದರು.

ಇಂದು ಜಿ.ಪಂ ಮಿನಿ ಸಭಾಂಗಣದಲ್ಲಿ ನಡೆದ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಯ ಅನುಷ್ಠಾನ ಪ್ರಾಧಿಕಾರದ ಸಮಿತಿ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು.

ಜಿಲ್ಲೆಯಲ್ಲಿ 75 ವರ್ಷ ಮೇಲ್ಪಟ್ಟ ಏಕ ಸದಸ್ಯರಿರುವ ಪಡಿತರ ಚೀಟಿದಾರರ ವರದಿ ತಯಾರಿಸಿ, ಅವರ ಮನೆ ಬಾಗಿಲಿಗೆ ಹೋಗಿ ಅನ್ನ ಸುವಿಧಾ ಯೋಜನೆಯ ಫಲಾನುಭವಿಯನ್ನಾಗಿ ನೋಂದಣಿ ಮಾಡಿಸಬೇಕು ಎಂದು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಗೆ ತಿಳಿಸಿದರು.

ನ್ಯಾಯ ಬೆಲೆ ಅಂಗಡಿಗಳ ಮೂಲಕ ಅನ್ನ ಸುವಿಧಾ ಯೋಜನೆ ಕುರಿತು ಅರ್ಹ ಪಡಿತರ ಚೀಟಿದಾರರಿಗೆ ಮಾಹಿತಿ ತಲುಪಿಸಿ ಹಾಗೂ ಫಲಾನುಭವಿಗಳನ್ನು ನೋಂದಣಿ ಮಾಡಿಸಲು ಸಮಯ ಮತ್ತು ಗುರಿಯನ್ನು ನಿಗದಿ ಪಡಿಸಬೇಕು. ಮುಂದಿನ ಸಭೆಯಲ್ಲಿ ಅರ್ಹ ಪಡಿತರ ಚೀಟಿದಾರರ ತಾಲ್ಲೂಕುವಾರು ನೋಂದಣಿ ಮಾಹಿತಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕು ಎಂದು ಹೇಳಿದರು.

ಯುವ ನಿಧಿ ಯೋಜನೆಯಡಿ ರೂಪಿತವಾಗಿರುವ ಯುವನಿಧಿ ಪ್ಲಸ್ ಯೋಜನೆಯಡಿಯಲ್ಲಿ ಫಲಾನುಭವಿಗಳ ಆಸಕ್ತಿ ಮೇರೆಗೆ ಉದ್ಯೋಗ ಕಲ್ಪಿಸಲು ತರಬೇತಿ ಒದಗಿಸಲಾಗುವುದು. ಈಗಾಗಲೇ ಜಿಲ್ಲೆಯಲ್ಲಿ ತರಬೇತಿ ಪ್ರಾರಂಭವಾಗಿದ್ದು, ಫಲಾನುಭವಿಗಳು ನಿರ್ಲಕ್ಷ್ಯ ತೋರದೆ ಯೋಜನೆಯ ಸದುಪಯೋಗ ಪಡೆದುಕೊಳ್ಳಿ ಎಂದರು.

ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಯ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರಾದ ಶಿವಣ್ಣ ಮಾತನಾಡಿದರು.

ಚಿಕ್ಕಬ್ಯಾಡರಹಳ್ಳಿ ಡೇರಿ ರಾಜ್ಯಕ್ಕೆ ಮಾದರಿ



ಚಿಕ್ಕಬ್ಯಾಡರಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಮೇಲಂತಸ್ತಿನ ನೂತನ ಕಟ್ಟಡದ ಶಿಲಾನ್ಯಾಸವನ್ನು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಉದ್ಘಾಟಿಸಿದರು.

ಪಾಂಡವಪುರ, ನ.29– ಚಿಕ್ಕಬ್ಯಾಡರಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘವು ಮಾದರಿಯಾಗಿ ಕೆಲಸ ಮಾಡುವ ಮೂಲಕ ಪ್ರತಿ ವರ್ಷವು ಒಂದಲ್ಲ ಒಂದು ಪ್ರಶಸ್ತಿ ಮುಡಿಗೇರಿಸಿಕೊಳ್ಳುತ್ತಿದೆ ಎಂದು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಹೇಳಿದರು.

ತಾಲೂಕಿನ ಚಿಕ್ಕಬ್ಯಾಡರಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಮೇಲಂತಸ್ತಿನ ನೂತನ ಕಟ್ಟಡದ ಉದ್ಘಾಟನಾ ಸಮಾರಂಭದಲ್ಲಿ ಶಿಲಾನ್ಯಾಸ ಮಾಡಿ ಬಳಿಕ ಮಾತನಾಡಿದರು.

ಚಿಕ್ಕಬ್ಯಾಡರಹಳ್ಳಿ ಸಂಘವು ರಾಜ್ಯಕ್ಕೆ ಮಾದರಿಯಾಗಿ ಕೆಲಸ ಮಾಡುತ್ತಿದೆ. ಹಾಲು ಉತ್ಪಾದಕರ ಸಹಕಾರ ಸಂಘಗಳು ಉತ್ತಮವಾಗಿ ಕೆಲಸ ಮಾಡಿದರೆ ಸಂಘವನ್ನು ಅಭಿವೃದ್ಧಿಪಡಿಸಬಹುದು ಎನ್ನುವುದಕ್ಕೆ ಈ ಸಂಘ ಉದಾಹರಣೆಯಾಗಿದೆ. ಇಲ್ಲಿನ ಅಧ್ಯಕ್ಷರು, ಆಡಳಿತ ಮಂಡಳಿ, ಅಧಿಕಾರಿ ವರ್ಗ ಉತ್ತಮವಾಗಿ ಕೆಲಸ ಮಾಡುತ್ತಿರುವ ಪರಿಣಾಮವಾಗಿ ಸಂಘವು ಲಾಭದಾಯಕವಾಗಿ ಕೆಲಸ ಮಾಡುವ ಮೂಲಕ ಸುಸಜ್ಜಿತವಾದ ಕಟ್ಟಡವನ್ನು ಸಹ ನಿರ್ಮಾಣ ಮಾಡಿಕೊಂಡಿದೆ ಎಂದು ಬಣ್ಣಿಸಿದರು.

ಶಾಸಕ ದರ್ಶನ್ ಪುಟ್ಟಣ್ಣಯ್ಯ ಮಾತನಾಡಿದರು. ಮನ್‌ಮುಲ್ ನಿರ್ದೇಶಕ ಸಿ. ಶಿವಕುಮಾರ್ ಮಾತನಾಡಿ, ಡೇರಿಗಳಲ್ಲಿ ಕಾಮನ್ ಸಾಫ್ಟ್‌ವೇರ್ ಅಳವಡಿಕೆ ಮಾಡಿದ ರಾಜ್ಯದ ಮೊದಲ ಸಂಘ ಎಂದರೆ ಚಿಕ್ಕಬ್ಯಾಡರಹಳ್ಳಿ ಡೇರಿ, ಇಲ್ಲಿ ಆರಂಭವಾದ ಬಳಿಕ ರಾಜ್ಯದ ಎಲ್ಲಾ ಡೇರಿಗಳಲ್ಲೂ ಕಾಮನ್ ಸಾಫ್ಟ್‌ವೇರ್ ಅಳವಡಿಸಲಾಗಿದೆ ಎಂದರು.

ಸಂಘದ ಅಧ್ಯಕ್ಷ ಸಿ.ಎನ್.ಚಂದನ್, ಉಪಾಧ್ಯಕ್ಷೆ ಗೀತಾ, ನಿರ್ದೇಶಕರಾದ ರಮೇಶ್, ಕುಮಾರ್, ಸುರೇಶ್, ಸಿ.ಕೆ.ಕುಮಾರ್, ವಿರೇಂದ್ರ, ನಿಂಗರಾಜಮ್ಮ, ವರಲಕ್ಷ್ಮಿ, ಪದ್ಮ, ಗ್ರಾಪಂ ಅಧ್ಯಕ್ಷ ರವಿರಾಜ್, ಪುಟ್ಟಸ್ವಾಮೀಗೌಡ, ಎ.ವಿಜಯೇಂದ್ರ ಮೂರ್ತಿ, ಆರ್. ಪ್ರಸಾದ್, ನಿರ್ಮಲ, ಡಿ.ಕೆ.ಕುಳ್ಳೇಗೌಡ, ಬಿ.ರವಿ, ಸಿ.ಎ.ನಿಂಗೇಗೌಡ, ಟಿ.ಎನ್.ಧರ್ಮ, ಕೆ.ಧರ್ಮಲಿಂಗು, ಚನ್ನೇಗೌಡ ಸೇರಿದಂತೆ ಮುಖಂಡರು, ಗ್ರಾಮಸ್ಥರು ಹಾಜರಿದ್ದರು.

ಕಲಾವಿದರ ಆರ್ಥಿಕ ಭದ್ರತೆಗೆ ಕಾರ್ಯಕ್ರಮ ರೂಪಿಸಿ

ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನ ಮಠದ ಶ್ರೀಗಳು ಕರೆ

ಮಂಡ್ಯ : ಜಾನಪದ, ರಂಗಭೂಮಿ ಸೇರಿದಂತೆ ವಿವಿಧ ವಿಭಾಗದ ಕಲಾವಿದರ ಆರ್ಥಿಕ ಭದ್ರತೆಗೆ ಸರ್ಕಾರ ಕಾರ್ಯಕ್ರಮ ರೂಪಿಸಬೇಕು ಎಂದು ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಶ್ರೀ ನಿಶ್ಚಲಾನಂದನಾಥಸ್ವಾಮೀಜಿ ಅಭಿಪ್ರಾಯಿಸಿದರು.

ನಗರದ ಬಾಲಭವನದಲ್ಲಿ ಜಾನಪದ ಮತ್ತು ಬೀದಗಿ ನಾಟಕ ಕಲಾತಂಡಗಳ ಒಕ್ಕೂಟ ಹಾಗೂ ಜಿಲ್ಲೆಯ ಎಲ್ಲಾ ಕಲಾ ಸಂಘ–ಸಂಸ್ಥೆಗಳ ಸಹಯೋಗದಲ್ಲಿ ನಡೆದ ಕಲಾವಿದ ವೈ.ಸಿ. ಕುಮಾರ್ ಕುಟುಂಬಕ್ಕೆ ನಿಧಿ ಹಸ್ತಾಂತರ ಹಾಗೂ ಜಿಲ್ಲಾ ಸಾಂಸ್ಕೃತಿಕ ಉತ್ಸವ ಕಾರ್ಯಕ್ರಮದಲ್ಲಿ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಸಿನಿಮಾದ ಕೆಲವರನ್ನು ಹೊರತುಪಡಿಸಿದರೆ, ಉಳಿದ ಬಹುತೇಕ ಕಲಾವಿದರು ಸಂಕಷ್ಟದಲ್ಲಿದ್ದಾರೆ. ಅವರ ಬದುಕಿನಲ್ಲಿ ಸಂಭವಿಸುವ ಆಕಸ್ಮಿಕ ದುರಂತದಿಂದ ಅವರ ಕುಟುಂಬಕ್ಕೆ ತೀವ್ರ ಆಘಾತ ಉಂಟಾಗಿ ಜೀವನ ನಿರ್ವಹಣೆ ಕಷ್ಟಸಾಧ್ಯವಾಗುತ್ತದೆ. ಆದ್ದರಿಂದ ಕಲಾವಿದರ ಬದುಕನ್ನು ಉತ್ತಮಪಡಿಸಲು ಸರ್ಕಾರ ಗಂಭೀರ ಚಿಂತನೆ ನಡೆಸಬೇಕು ಎಂದರು.

ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಧ್ಯಕ್ಷ ಎಲ್.ಸಂದೇಶ್ ಮಾತನಾಡಿ, ಸಾಂಸ್ಕೃತಿಕವಾಗಿ ಸಿರಿವಂತಿಕೆಯನ್ನು ಹೊಂದಿರುವ ಕಲಾವಿದರು ಆರ್ಥಿಕವಾಗಿ ಸಂಕಷ್ಟವನ್ನು ಎದುರಿಸುತ್ತಿರುತ್ತಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ನೋಂದಣಿಯಾಗಿರುವ ಕಲಾವಿದರು ಆಕಸ್ಮಿಕವಾಗಿ ಸಾವನ್ನಪ್ಪಿದರೆ ಅಥವಾ ಅಪಘಾತಕ್ಕೊಳಗಾದರೆ ಅಂತಹ ಕುಟುಂಬಗಳಿಗೆ ಸರ್ಕಾರ ಕನಿಷ್ಠ 5 ಲಕ್ಷ ರೂ. ಪರಿಹಾರವನ್ನು ನೀಡಬೇಕು. ಈ ನಿಟ್ಟಿನಲ್ಲಿ ವಿವಿಧ ಕಲಾ ಸಂಘಟನೆಗಳು ಸರ್ಕಾರವನ್ನು ಒತ್ತಾಯಿಸಬೇಕು ಎಂದು ಆಗ್ರಹಿಸಿದರು.

ಜಾನಪದ ಮತ್ತು ಬೀದಿ ನಾಟಕ ಕಲಾತಂಡಗಳ ಒಕ್ಕೂಟದ ಅಧ್ಯಕ್ಷ ಸಂತೆಕಸಲಗೆರೆ ಬಸವರಾಜು ಪ್ರಾಸ್ತಾವಿಕವಾಗಿ ಮಾತನಾಡಿದರು. ಎಲ್ಲರೊಳಗೊಂದಾಗು ಮಂಕುತಿಮ್ಮ ಟ್ರಸ್ಟ್ ಅಧ್ಯಕ್ಷ ವಿನಯ್ ಕುಮಾರ್ ಅಧ್ಯಕ್ಷತೆ ವಹಿಸಿದ್ದರು. ತಾಲೂಕು ಕಸಾಪ ಅಧ್ಯಕ್ಷ ಚಂದ್ರಲಿಂಗು, ಕಲಾವಿದ ಸಬ್ಬನಹಳ್ಳಿ ರಾಜು, ಹಾಲಹಳ್ಳಿ ಮುಕುಂದ, ಶೇಖರ್ ಹನಿಯಂಬಾಡಿ, ವೈರಮುಡಿ, ಡಾ.ಮಾದೇಶ್, ವೈ.ಸಿ.ಪರಮೇಶ್, ಮಡಿಲು ಸಂಸ್ಥೆಯ ಅರಸು ಇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಇದೇ ವೇಳೆ ಮೃತ ಕಲಾವಿದ ವೈ.ಸಿ. ಕುಮಾರ್ ಅವರ ಪತ್ನಿ ಹೇಮಾ ಅವರಿಗೆ ಗಣ್ಯರು ಒಂದು ಲಕ್ಷ ರೂ.ಗಳ ಚೆಕ್ ವಿತರಿಸಿದರು. ಕಲಾವಿದರಾದ ಗಾಮನಹಳ್ಳಿ ಸ್ವಾಮಿ, ಪ್ರತಿಭಾಂಜಲಿ ಡೇವಿಡ್, ಗೊರವಾಲೆ ರುದ್ರಪ್ಪ ಮತ್ತು ಚಂದ್ರಶೇಖರ್, ನಗರಸಭೆ ಸದಸ್ಯ ಶ್ರೀಧರ್, ಸೌಮ್ಯ, ಸರ್ವಮಂಗಳ, ಜಿ.ಜಿ.ನವೀನ್, ಸುಗ್ಗಿ ಸಿರಿ ತಂಡ ಸೇರಿದಂತೆ ಜಿಲ್ಲೆಯ ವಿವಿಧ ಗಾಯಕರು ಗಾಯನ ಕಾರ್ಯಕ್ರಮ ನಡೆಸಿ ಕೊಟ್ಟರು. ಹೇಮಾ ಮತ್ತು ತಂಡದವರಿಂದ ರಾಜ್ಯಾಧಿಕಾರ ನಾಟಕ ಪ್ರದರ್ಶನ ನಡೆಯಿತು.



ಕಲಾವಿದ ವೈ.ಸಿ. ಕುಮಾರ್ ಕುಟುಂಬಕ್ಕೆ ಪರಿಹಾರದ ಚೆಕ್ ನೀಡುತ್ತಿರುವ ಶ್ರೀಗಳು.

ಒಂದನೇ ಪುಟದಿಂದ

ವರಿಷ್ಠರ ನಿರ್ಧಾರಕ್ಕೆ ಬದ್ಧ

ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದರು.

ಶಿವಕುಮಾರ್, ನಮ್ಮ ಮನೆಗೆ ಊಟಕ್ಕೆ ಬನ್ನಿ ಎಂಬ ಆಹ್ವಾನ ನೀಡಿದ್ದರು. ಮತ್ತೊಂದು ದಿನ ಊಟಕ್ಕೆ ಬರೋಣ, ನಮ್ಮ ಮನೆಗೇ ಉಪಾಹಾರಕ್ಕೆ ಬನ್ನಿ ಎಂದು ಕರೆದೆ. ವರಿಷ್ಠರು ಏನು ಹೇಳುತ್ತಾರೋ ಅದೇ ರೀತಿ ಕೆಲಸ ಮಾಡಿಕೊಂಡು ಹೋಗಲು ತೀರ್ಮಾನಿಸಿದ್ದೇವೆ. ನಮ್ಮಲ್ಲಿ ಗುಂಪುಗಳು ಇಲ್ಲ. ಇರುವುದು ಒಂದೇ ಕಾಂಗ್ರೆಸ್ ಗುಂಪು. ಒಟ್ಟಿಗೆ ಸೇರಿ ಕೆಲಸ ಮಾಡಿಕೊಂಡು ಹೋಗುತ್ತೇವೆ. ಶಾಸಕರು ಮತ್ತು ಪಕ್ಷವನ್ನು ಶಕ್ತಿಶಾಲಿಯಾಗಿ ಬೆಳೆಸಿ 2028ರಲ್ಲೂ ಅಧಿಕಾರಕ್ಕೆ ತರುತ್ತೇವೆ. ನಮ್ಮ ನಡುವೆ ಆಗಿರುವ ಒಪ್ಪಂದದ ಬಗ್ಗೆ ಹೈಕಮಾಂಡ್‌ಗೆ ಮಾಹಿತಿ ನೀಡಲಾಗುವುದು ಎಂದರು.

ಕೆಲವು ಶಾಸಕರು ಸಚಿವ ಸಂಪುಟ ಪುನರ್ ರಚನೆಗೆ ಸಂಬಂಧಿಸಿದಂತೆ ದೆಹಲಿಗೆ ಭೇಟಿ ನೀಡಿರಬಹುದು. ಹಾಗೆಂದು ಬೇರೆ ಅರ್ಥ ಕಲ್ಪಿಸಬೇಕಿಲ್ಲ. ಕೆಲವರು ಇಂಥ ಕಾರಣಕ್ಕೆ ಭೇಟಿ ನೀಡಿರುವುದಾಗಿ ತಿಳಿಸಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಅನಗತ್ಯ ಗೊಂದಲಗಳು ನಿರ್ಮಾಣವಾಗಿವೆ. ನಾವು ಈ ಬಗ್ಗೆ ಮಾತನಾಡಿದ್ದೇವೆ. ಸ್ಥಳೀಯ ಸಂಸ್ಥೆ, ಕಾರ್ಪೊರೇಷನ್, ತಾಲೂಕು, ಜಿಲ್ಲಾ ಹಾಗೂ ಗ್ರಾಮ ಪಂಚಾಯತ್ ಚುನಾವಣೆಗಳು ಬಹಳ ಮುಖ್ಯ ವಾಗಿದ್ದು, ಈ ಬಗ್ಗೆ ಚರ್ಚೆ ಮಾಡಿದ್ದೇವೆ. 2028ರಲ್ಲಿ ಕಾಂಗ್ರೆಸ್ಸನ್ನು ಮತ್ತೆ ಅಧಿಕಾರಕ್ಕೆ ತರಬೇಕೆಂದು ಚರ್ಚಿಸಲಾಗಿದೆ. 2023ರ ವಿಧಾನಸಭಾ ಚುನಾವಣೆಯಲ್ಲಿ ಕೆಲಸ ಮಾಡಿದಂತೆಯೇ ಮುಂದೆಯೂ ಒಟ್ಟಿಗೆ ಸಾಗುವ ತೀರ್ಮಾನ ಮಾಡಿದ್ದೇವೆ. ನಮ್ಮಲ್ಲಿ ಯಾವುದೇ ಭಿನ್ನಾಭಿಪ್ರಾಯಗಳಿಲ್ಲ. ಮುಂದೆಯೂ ಇರುವುದಿಲ್ಲ.

ಬೆಳಗಾವಿ ವಿಧಾನಮಂಡಲದ ಚಳಿಗಾಲದ ಅಧಿವೇಶನ ಡಿ.8ರಿಂದ ಪ್ರಾರಂಭವಾಗಲಿದ್ದು, ವಿರೋಧ ಪಕ್ಷದವರನ್ನು ಸಮರ್ಥವಾಗಿ ಎದುರಿಸುತ್ತೇವೆ. ಅಪಪ್ರಚಾರ, ಸುಳ್ಳು ಆರೋಪ, ಅಪವಾದ ಮಾಡುವುದು ಬಿಜೆಪಿ ಹಾಗೂ ಜೆಡಿಎಸ್ ಚಾಳಿ, ಇವೆರಡೂ ಪಕ್ಷಗಳನ್ನು ನಾನು ಮತ್ತು ಉಪಮುಖ್ಯಮಂತ್ರಿ ಎದುರಿಸುತ್ತೇವೆ. ಅದಕ್ಕೆ ಅಗತ್ಯ ಕಾರ್ಯತಂತ್ರ ರೂಪಿಸಿಕೊಂಡಿದ್ದೇವೆ. ಅಧಿವೇಶನದಲ್ಲಿ ಬಿಜೆಪಿ, ಜೆಡಿಎಸ್ ಅವಿಶ್ವಾಸ ನಿರ್ಣಯ ಮಂಡಿಸುವ ಹೇಳಿಕೆ ನೀಡಿವೆ. ಇದು ಅಸಂಭವ. ಇದೊಂದು ವಿಫಲ ಪ್ರಯತ್ನ, ನಾವು 142 ಶಾಸಕರಿದ್ದು, ಬಿಜೆಪಿ 64 ಹಾಗೂ ಜೆಡಿಎಸ್ 18 ಶಾಸಕರಿದ್ದಾರೆ. ಇಬ್ಬರೂ ಸೇರಿ ಸಂಖ್ಯಾಬಲ 82 ಆಗುತ್ತದೆ ಎಂದರು.

ನಮ್ಮದು ಒಂದೇ ರಾಜಕೀಯ ನಿಲುವು: ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿ, ನಾಯಕತ್ವ ವಿಚಾರದಲ್ಲಿ ನನ್ನದು ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರದು ಒಂದೇ ರಾಜಕೀಯ ನಿಲುವಾಗಿದೆ. ಪಕ್ಷದ ವರಿಷ್ಠರು ಹೇಳಿದಂತೆ ನಾವಿಬ್ಬರು ನಡೆದುಕೊಳ್ಳುತ್ತೇವೆ ಎಂದರು. ನಾವು ಪಕ್ಷದ ನಿಷ್ಠಾವಂತ ಕಾರ್ಯಕರ್ತರು, ಪ್ರಸ್ತುತ ಪಕ್ಷ ರಾಷ್ಟ್ರಮಟ್ಟದಲ್ಲಿ ಕಷ್ಟದ ಸಮಯದಲ್ಲಿದೆ. ಈ ಸಂದರ್ಭದಲ್ಲಿ ಕರ್ನಾಟಕ ಮಹತ್ತರ ಪಾತ್ರ ನಿರ್ವಹಿಸಲಿದೆ. 2028ರ ರಾಜ್ಯ ವಿಧಾನಸಭಾ ಚುನಾವಣೆ ನಂತರ 2029ರ ಲೋಕಸಭಾ ಚುನಾವಣೆಯನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪಕ್ಷದ ಅಧಿನಾಯಕ ರಾಹುಲ್ ಗಾಂಧಿ ನಾಯಕತ್ವದಲ್ಲಿ ಎದುರಿಸುತ್ತೇವೆ. ರಾಜ್ಯದಲ್ಲಿ 2028ಕ್ಕೆ ಹಾಗೂ ರಾಷ್ಟ್ರಮಟ್ಟದಲ್ಲಿ 2029ರಲ್ಲಿ ಪಕ್ಷವನ್ನು ಅಧಿಕಾರಕ್ಕೆ ತರುವುದೇ ನಮ್ಮ ಗುರಿ. ಇಷ್ಟು ದಿನ ಒಗ್ಗಟ್ಟಿನಿಂದ ಕೆಲಸ ಮಾಡಿ ಕೊಂಡು ಹೋಗುತ್ತಿದ್ದು, ಮುಂದೆಯೂ ಇದೇ ರೀತಿ ಕೆಲಸ ಮಾಡಲು ಅಚಲ ನಿರ್ಧಾರ ಕೈಗೊಂಡಿದ್ದೇವೆ ಎಂದರು.

ನಾನು ಮುಖ್ಯಮಂತ್ರಿ ಅವರ ಮನೆಗೆ ಉಪಹಾರ ಕೂಟದಲ್ಲಿ ಭಾಗವಹಿಸಿದ್ದು, ಮುಂದಿನ ಒಂದೆರಡು ದಿನಗಳಲ್ಲಿ ಸಿದ್ದರಾಮಯ್ಯ ನಮ್ಮ ಮನೆಗೆ ಭೋಜನ ಕೂಟಕ್ಕೆ ಬರಲಿದ್ದಾರೆ. ನಾವು ಒಟ್ಟಾಗಿ ಕೆಲಸ ಮಾಡುತ್ತಿದ್ದೇವೆ. ಕಾರ್ಯಕರ್ತರ ಪರಿಶ್ರಮ, ಜನರ ಆಶೀರ್ವಾದ, ನಿಮ್ಮೆಲ್ಲರ ಸಹಕಾರದಿಂದ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಿದೆ. ನಾವು ಕೊಟ್ಟ ಮಾತಿನಂತೆ ಜನರ ಸೇವೆ ಮಾಡುತ್ತಿದ್ದೇವೆ. ಜನ ನಮ್ಮ ಮೇಲೆ ವಿಶ್ವಾಸ ಇಟ್ಟು ಸಹಕಾರ ನೀಡುತ್ತಿದ್ದಾರೆ. ಜನರ ನಿರೀಕ್ಷೆ, ಆಕಾಂಕ್ಷೆ, ಆಶೋತ್ತರ ಈಡೇರಿಸುವುದು ನಮ್ಮ ಕರ್ತವ್ಯ.

ನಮ್ಮಲ್ಲಿ ಯಾವುದೇ ಗುಂಪು ಇಲ್ಲ, ಎಸ್.ಎಂ.ಕೃಷ್ಣ ಕಾಲದಲ್ಲೂ ಗುಂಪುಗಾರಿಕೆ ಮಾಡಿಲ್ಲ, ಇವತ್ತಿಗೂ ಅವಕಾಶ ಕೊಟ್ಟಿಲ್ಲ, ನನಗೆ ಇರುವುದು ಒಂದೇ ಗುಂಪು, ಅದು ಕಾಂಗ್ರೆಸ್ ಗುಂಪು. ಸಿದ್ದರಾಮಯ್ಯ ಮೊದಲ ಬಾರಿ ಮುಖ್ಯಮಂತ್ರಿ ಆಗಿದ್ದಾಗ ಆರು ತಿಂಗಳು ನನ್ನನ್ನು ಮಂತ್ರಿ ಮಾಡದೇ ಇದ್ದಾಗಲೂ ನಾನು ಒಂದೇ ಒಂದು ಮಾತನ್ನೂ ಆಡಿರಲಿಲ್ಲ. ಒಟ್ಟಾಗಿ ಕೆಲಸ ಮಾಡುವ ನನ್ನ ನಿರ್ಧಾರಕ್ಕೆ ಅಚಲನಾಗಿದ್ದೇನೆ. ಹೈಕಮಾಂಡ್ ಹೇಳಿದಂತೆ ನಾವಿಬ್ಬರೂ ಕೆಲಸ ಮಾಡಿಕೊಂಡು ಹೋಗುತ್ತೇವೆ. ಎಲ್ಲರನ್ನೂ ಒಟ್ಟಾಗಿ ತೆಗೆದುಕೊಂಡು, ಪ್ರತಿಯೊಬ್ಬ ಶಾಸಕರಿಗೆ ಶಕ್ತಿ ತುಂಬಿ, ಪಕ್ಷವನ್ನು ಬಲಿಷ್ಠವಾಗಿ ಸಂಘಟಿಸುವುದು ನಮ್ಮಿಬ್ಬರ ಕರ್ತವ್ಯ.

ಮೆಕ್ಕೆಜೋಳ, ಕಬ್ಬು, ನೀರಾವರಿ ಯೋಜನೆ ಬಗ್ಗೆ ಸಂಸದರ ಜೊತೆ ಚರ್ಚಿಸಲು ದೆಹಲಿಗೆ ಹೋಗಬೇಕಿದೆ. ಪಕ್ಷದ ವರಿಷ್ಠರು ನಮ್ಮನ್ನು ಕರೆದರೆ, ಖಂಡಿತವಾಗಿಯೂ ಹೋಗುತ್ತೇವೆ. ಅದರ ಹೊರತಾಗಿ ಮೆಕ್ಕೆಜೋಳ, ಕಬ್ಬು ದರ ನಿಗದಿ ಹಾಗೂ ನೀರಾವರಿ ಯೋಜನೆಗಳಿಗೆ ಸಂಬಂಧಿಸಿದಂತೆ ಸಂಸತ್ ಅಧಿವೇಶನದಲ್ಲಿ ಸಂಸದರು ಧ್ವನಿ ಎತ್ತಬೇಕಿದೆ. ಈ ವಿಚಾರವಾಗಿ ಸಂಸದರ ಜೊತೆ ನಾವು ಚರ್ಚೆ ಮಾಡಬೇಕಿದೆ.

ಮೆಕ್ಕೆಜೋಳ ವಿಚಾರದಲ್ಲಿ ಕೇಂದ್ರ ಸರ್ಕಾರ ರಾಜ್ಯಕ್ಕೆ ನೀಡಬೇಕಾದ ಸಹಕಾರ ನೀಡುತ್ತಿಲ್ಲ. ಕೇಂದ್ರದ ನೆರವು ಪಡೆಯುವುದು ರಾಜ್ಯದ ಹಕ್ಕು. ಇತ್ತೀಚೆಗೆ ಮುಖ್ಯಮಂತ್ರಿ ಅವರು ಪ್ರಧಾನಿ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ್ದಾರೆ. ಈ ವಿಚಾರ ಸಂಸದರ ಜೊತೆ ಚರ್ಚಿಸಿ ಕೇಂದ್ರದ ಮೇಲೆ ಒತ್ತಡ ಹಾಕುವಂತೆ ತಿಳಿಸುತ್ತೇವೆ. ನಾವೆಲ್ಲರೂ ಒಟ್ಟಾಗಿ ರಾಜ್ಯದ ಹಿತ ಕಾಪಾಡಬೇಕಿದೆ. ಕೇಂದ್ರ ಸಚಿವರು ನಿಯೋಗದಲ್ಲಿ ನೀವು ಬನ್ನಿ ಎಂಬುದಾಗಿ ತಿಳಿಸಿದ್ದು, ನಾವೂ ಹೋಗುತ್ತೇವೆ. ಮೇಕೆದಾಟು ಯೋಜನೆ ವಿಚಾರದಲ್ಲಿ ನ್ಯಾಯಾಲಯದಿಂದ ರಾಜ್ಯದ ಪರ ತೀರ್ಪು ಬಂದಿದೆ. ಈಗ ಚೆಂಡು ಕೇಂದ್ರ ಜಲ ಆಯೋಗದ ಅಂಗಳದಲ್ಲಿದೆ. ನಾವು ಪರಿಷ್ಕೃತ ಡಿಪಿಆರ್ ಸಲ್ಲಿಸುತ್ತೇವೆ. ಜೊತೆಗೆ ಇತರೆ ನೀರಾವರಿ ಯೋಜನೆಗಳ ಬಗ್ಗೆಯೂ ಚರ್ಚೆ ಮಾಡಬೇಕಿದೆ. ಇಡೀ ವಿಶ್ವ ಭಾರತವನ್ನು ಕರ್ನಾಟಕ ಹಾಗೂ ಬೆಂಗಳೂರು ಮೂಲಕ ನೋಡುತ್ತಿದೆ ಎಂದರು. ಆಡಳಿತ ಪಕ್ಷದ ವಿರುದ್ಧ ಅವಿಶ್ವಾಸ ನಿರ್ಣಯ ಮಂಡನೆ ವಿರೋಧ ಪಕ್ಷಗಳಿಗೆ ಹಕ್ಕಿದೆ, ಎದುರಿಸಲು ನಾವು ಸಮರ್ಥರಿದ್ದೇವೆ ಎಂದರು. ಸಭೆಯಲ್ಲಿ ಸಿಎಂ ಕಾನೂನು ಸಲಹೆಗಾರ ಪೊನ್ನಣ್ಣ ಉಪಸ್ಥಿತರಿದ್ದರು.

ಅಧಿಕಾರ ಹಸ್ತಾಂತರ

ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಈ ವಿಷಯದಲ್ಲಿ ಏನು ತೀರ್ಮಾನ ತೆಗೆದುಕೊಳ್ಳುತ್ತಾರೋ ಅದಕ್ಕೆ ನಾವು ಬದ್ಧರಾಗಿರೋಣ ಎಂದಿದ್ದಾರೆ. ನುಡಿದಂತೆ ನಡೆಯಬೇಕು ಎಂಬುದಾಗಿ ಸಾರ್ವಜನಿಕವಾಗಿ ಹೇಳುವ ಮೂಲಕ ನನ್ನ ಮನಸ್ಸಿಗೆ ನೋವು ತಂದಿದ್ದೀರಿ. ಇದನ್ನು ನಾನು ವೇಣುಗೋಪಾಲ್ ಗಮನಕ್ಕೂ ತಂದಿದ್ದೇನೆ. ಇನ್ನು ಮುಂದೆ ಇಂತಹ ಹೇಳಿಕೆಗಳು ಬರಬಾರದು. ದೆಹಲಿಗೆ ಶಾಸಕರನ್ನು ಕಳುಹಿಸುವುದು ಹಾಗೂ ನುಡಿದಂತೆ ನಡೆದುಕೊಳ್ಳಬೇಕು ಎಂಬುದಾಗಿ ಪರೋಕ್ಷವಾಗಿ ಹೇಳುವ ಬದಲು ನೇರವಾಗಿ ನನ್ನ ಬಳಿಯೇ ಪ್ರಸ್ತಾಪಿಸಬಹುದಿತ್ತಲ್ಲ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ತಿಳಿಸಿದ್ದಾರೆ.

ಕಳೆದ 6 ತಿಂಗಳಿಂದ ಕೆಲವು ಸಚಿವರು ಸಿದ್ದರಾಮಯ್ಯನವರೇ ಪೂರ್ಣಾವಧಿಗೆ ಮುಖ್ಯಮಂತ್ರಿ ಎಂಬುದಾಗಿ ಹೇಳಿಕೆ ನೀಡುತ್ತಿದ್ದ ವೇಳೆ ನೀವು ಅವರ ವಿರುದ್ಧ ಕಠಿಣ ಕ್ರಮ ಕೈಗೊಂಡಿದ್ದರೆ, ಇಂದು ಈ ಸ್ಥಿತಿ ಬರುತ್ತಿರಲಿಲ್ಲ. ಎಲ್ಲವೂ ಮುಗಿದುಹೋಗಿದೆ. ಈಗ ಅದರ ಚರ್ಚೆ ಬೇಡ ಎಂದು ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ನಿಮ್ಮ ಮಾತಿನಂತೆ ನಡೆಯುತ್ತೇನೆ. ನಮ್ಮ ಮನೆಗೂ ನಾಳೆಯೋ, ಇನ್ನೊಂದು ದಿನ ಬನ್ನಿ ಎಂಬ ಶಿವಕುಮಾರ್ ಆಹ್ವಾನ ಸ್ವೀಕರಿಸಿದ ಸಿದ್ದರಾಮಯ್ಯ, ನಾಳೆ ಮೈಸೂರು ಪ್ರವಾಸ ಕೈಗೊಳ್ಳುತ್ತೇನೆ. ಮಂಗಳವಾರ ಊಟಕ್ಕೆ ಬರುವುದಾಗಿ ತಿಳಿಸಿದ್ದಾರೆ.

ಸುದೀರ್ಘ ಚರ್ಚೆ

ಉನ್ನತ ಮೂಲಗಳ ಪ್ರಕಾರ, ಮೊದಲು ಬಿಹಾರ ವಿಧಾನ ಸಭಾ ಚುನಾವಣಾ ಫಲಿತಾಂಶ ಕುರಿತು ಚರ್ಚಿಸಿದ ನಂತರ ಉಭಯ ನಾಯಕರು ಕರ್ನಾಟಕ ವಿಷಯ ಕುರಿತು ಕೆಲವು ತೀರ್ಮಾನ ಕೈಗೊಂಡರು ಎನ್ನಲಾಗಿದೆ. ಇದಕ್ಕೂ ಮುನ್ನ ದೆಹಲಿಗೆ ಕರೆಸಿಕೊಂಡಿದ್ದ ಪ್ರಿಯಾಂಕ್ ಖರ್ಗೆ ಮತ್ತು ಶರತ್ ಬಚ್ಚೇಗೌಡ ಜೊತೆ ರಾಹುಲ್ ಖಾಸಗಿಯಾಗಿ ಚರ್ಚಿಸಿದರು ಎನ್ನಲಾಗಿದೆ. ಮಲ್ಲಿಕಾರ್ಜುನ ಖರ್ಗೆ ಮತ್ತು ರಾಹುಲ್ ಗಾಂಧಿ ನಡುವಿನ ಚರ್ಚೆ ವಿವರಗಳು ತಿಳಿದುಬಂದಿಲ್ಲ. ಆದರೆ, ನಾಳೆ ಸೋನಿಯಾ ಗಾಂಧಿ ಸಮ್ಮುಖದಲ್ಲಿ ನಡೆಯುವ ಸಂಸದೀಯ ಮಂಡಳಿಯಲ್ಲಿ ಕೈಗೊಳ್ಳಬೇಕಾದ ತೀರ್ಮಾನದ ಬಗ್ಗೆ ಸಮಾಲೋಚಿಸಿದರು ಎನ್ನಲಾಗಿದೆ. ಇವರ ಮಾತುಕತೆ ಪೂರ್ಣಗೊಳ್ಳುವವರೆಗೂ ಪ್ರಿಯಾಂಕ್, ಶರತ್ ಸೇರಿದಂತೆ ಕರ್ನಾಟಕದ ಐವರು ಮುಖಂಡರು ಮನೆಯ ಹುಲ್ಲುಹಾಸಿನ ಅಂಗಳದಲ್ಲಿದ್ದರು.

ಸಿಎಂ ಸಿಡಿಮಿಡಿ

ನಂತರ ಮಾತನಾಡಿದ ಡಿ.ಕೆ.ಶಿವಕುಮಾರ್, ಮೊದಲು ನಾವು ಹೇಳಿದ್ದು ಕೇಳಿ ನಾವು ನಿಮ್ಮನ್ನ ಕರೆಸಿದ್ದೇವೆ. ಮೊದಲು ನೀವು ನಾವ್ ಹೇಳೋದು ಕೇಳಿ ಎಂದು ಗರಂ ಆಗಿಯೇ ಹೇಳಿದರು. ನಮ್ಮ ಸರ್ಕಾರದಲ್ಲಿ ಯಾವುದೇ ಗೊಂದಲವಿಲ್ಲ. ಸಿದ್ದರಾಮಯ್ಯ ನೇತೃತ್ವದಲ್ಲಿ ಸರ್ಕಾರ ನಡೆಯುತ್ತಿದೆ. ಅಧಿವೇಶನದ ಹಿನ್ನೆಲೆ ಸಿಎಂ ಸಿದ್ದರಾಮಯ್ಯ ಜೊತೆ ಚರ್ಚೆ ಮಾಡಿದ್ದೇನೆ. ನಮ್ಮಲ್ಲಿ ಇರೋದು ಒಂದೇ ಗುಂಪು, ಅದು ಕಾಂಗ್ರೆಸ್ ಹೈಕಮಾಂಡ್ ಗುಂಪು ಎಂದರು. ನಾನು, ಸಿಎಂ ಒಟ್ಟಿಗೆ ಕೆಲಸ ಮಾಡಿಕೊಂಡು ಹೋಗುತ್ತೇವೆ ನಾನು ಹೈಕಮಾಂಡ್ ಹಾಗೂ ಸಿದ್ದರಾಮಯ್ಯ ಮಾತಿಗೆ ಎದುರಾಡಿಲ್ಲ. 2028ಕ್ಕೆ ಮತ್ತೆ ಕೇಂದ್ರದಲ್ಲಿ ಅಧಿಕಾರಕ್ಕೆ ಬರುತ್ತೆ. ಇದಕ್ಕೆ ಕಾರ್ಯಕ್ರಮ ರೂಪಿಸಿದ್ದೇವೆ. ಅದಕ್ಕಾಗಿ ಒಮ್ಮತದಿಂದ ಆಡಳಿತ ಮಾಡಿಕೊಂಡು ಹೋಗುತ್ತೇವೆಂದು ತಿಳಿಸಿದರು.

ಡಿಎಲ್, ಆರ್‌ಸಿ ಸ್ಮಾರ್ಟ್ ಕಾರ್ಡ್ ವಿತರಣೆ

ಬೇಕೆಂದವರು ಹಳೆಯದನ್ನು ಹಿಂತಿರುಗಿಸಿ ಶುಲ್ಕ ಪಾವತಿಸಿ ಹೊಸ ಸ್ಮಾರ್ಟ್ ಕಾರ್ಡ್‌ಗಳನ್ನು ಪಡೆದುಕೊಳ್ಳಲು ಅವಕಾಶವಿದೆ.

ಎಲೆಕ್ಟ್ರಿಕ್ ಬಸ್‌ಗಳ ಡಿಪೋ ಸ್ಥಾಪನೆ: ರಸ್ತೆ ಸಾರಿಗೆ ನಿಗಮ ಸಂಬಂಧ ಮೈಸೂರಿನ ಬನ್ನಿಮಂಟಪದಲ್ಲಿ ಎಲೆಕ್ಟ್ರಿಕ್ ಬಸ್‌ಗಳ ಡಿಪೋ ಸ್ಥಾಪನೆಗೆ ಈಗಾಗಲೇ ನಿಗಮದ ಅಧಿಕಾರಿಗಳಿಂದ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಈ ಸಂಬಂಧ ಪ್ರಕ್ರಿಯೆ ಚುರುಕುಗೊಳಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ಬಸ್ ನಿಲ್ದಾಣಗಳಲ್ಲಿ ಶೌಚಾಲಯಗಳಿಗೆ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಬೇಕೆಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದೇನೆ ಎಂದರು.

ಮೈಸೂರಿನ ಬನ್ನಿಮಂಟಪದಲ್ಲಿ ಹೊಸ ಕೇಂದ್ರೀಯ ಬಸ್ ನಿಲ್ದಾಣ ಕಾಮಗಾರಿ ಪ್ರಗತಿಯಲ್ಲಿದ್ದು, 120 ಕೋಟಿ ರೂ. ವೆಚ್ಚದಲ್ಲಿ ಇದನ್ನು ನಿರ್ಮಾಣ ಮಾಡಲಾಗುತ್ತಿದೆ. 18 ತಿಂಗಳ ಅವಧಿಯಲ್ಲಿ ಪೂರ್ಣಗೊಳಿಸಲು ಸಮಯ ನಿಗದಿ ಮಾಡಲಾಗಿದೆ. ಈಗಾಗಲೇ ನಾಲ್ಕೈದು ತಿಂಗಳು ಕಳೆದಿದ್ದು, ನಮ್ಮ ಅವಧಿಯಲ್ಲೇ ನಿಲ್ದಾಣದ ಕಾಮಗಾರಿ ಪೂರ್ಣಗೊಳ್ಳಲಿದೆ ಎಂದರು.

ಬಳಿಕ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಸಾರಿಗೆ ಇಲಾಖೆ ಅಪರ ಸಾರಿಗೆ ಆಯುಕ್ತೆ ಎಂ.ಪಿ.ಓಂಕಾರೇಶ್ವರಿ, ಆರ್‌ಸಿ ಹಾಗೂ ಡಿಎಲ್ ಸಂಬಂಧ ಇಡೀ ದೇಶದಲ್ಲಿ ಒಂದೇ ರೀತಿ ವಿನ್ಯಾಸದ ಸ್ಮಾರ್ಟ್ ಕಾರ್ಡ್‌ಗಳ ಇರಲೆಂಬುದು 'ಒನ್ ನೇಷನ್ ಒನ್ ಕಾರ್ಡ್'ನ ಉದ್ದೇಶವಾಗಿದೆ. ಇದರಡಿ ಡಿಎಲ್‌ನ ಸ್ಮಾರ್ಟ್ ಕಾರ್ಡ್ ಹಾಗೂ ಆರ್‌ಸಿಯ ಸ್ಮಾರ್ಟ್‌ಗಳು ಪ್ರತ್ಯೇಕವಾಗಿ ಬರಲಿವೆ. ಇವುಗಳ ವಿನ್ಯಾಸವನ್ನು ಕೇಂದ್ರದಿಂದಲೇ ಮಾಡಿ ಕಳುಹಿಸಲಾಗಿದೆ. ಇವು ಚಿಪ್ ಹಾಗೂ ಕ್ಯೂಆರ್ ಕೋಡ್ ಹೊಂದಿರಲಿವೆ. ರಾಜ್ಯದಲ್ಲಿ 2009ರಿಂದ ಸ್ಮಾರ್ಟ್ ಕಾರ್ಡ್ ವಿನ್ಯಾಸದಲ್ಲಿ ಆರ್‌ಸಿ ಹಾಗೂ ಡಿಎಲ್ ವಿತರಣೆ ಮಾಡಲಾಗುತ್ತಿದೆ. ಈಗ ಕೇಂದ್ರ ಸರ್ಕಾರ ವಿನ್ಯಾಸಗೊಳಿಸಿರುವ ಹೊಸ ಮಾದರಿಯ ಸ್ಮಾರ್ಟ್ ಕಾರ್ಡ್‌ಗಳು ಬರುತ್ತಿವೆ ಎಂದು ವಿವರಿಸಿದರು.

ಮೈಸೂರು ವಿಭಾಗದ ಸಾರಿಗೆ ಕಚೇರಿಗಳ ವ್ಯಾಪ್ತಿಯ ಮೈಸೂರು ಪೂರ್ವ ಹಾಗೂ ಪಶ್ಚಿಮ, ಮಂಡ್ಯ, ಹಾಸನ, ಸಕಲೇಶಪುರ, ಹುಣಸೂರು, ಮಡಿಕೇರಿ, ಚಾಮರಾಜನಗರ ಹಾಗೂ ಗುಂಡ್ಲುಪೇಟೆ ಹಾಗೂ ಪುಣಜೂರು ಸೇರಿದಂತೆ (2 ಚೆಕ್‌ಪೋಸ್ಟ್) 2025ರ ಏಪ್ರಿಲ್‌ನಿಂದ ಅಕ್ಟೋಬರ್‌ವರೆಗೆ 648 ಕೋಟಿ ರಾಜಸ್ವ ಸಂಗ್ರಹಿಸಿದ್ದು, ಇದು ಶೇ.63ರಷ್ಟಿದೆ. ಸಂಚಾರ ನಿಯಮ ಉಲ್ಲಂಘನೆ ಸಂಬಂಧ ಇದೇ ಅವಧಿಯಲ್ಲಿ 15 ಕೋಟಿ 17 ಲಕ್ಷ ಸಂಗ್ರಹಿಸಲಾಗಿದೆ ಎಂದರು. ಮೈಸೂರು ವಿಭಾಗದ ಜಂಟಿ ಸಾರಿಗೆ ಆಯುಕ್ತ ವಸಂತ ಈಶ್ವರ ಚವ್ಹಾಣ್, ಮೈಸೂರು ಪೂರ್ವ ಪ್ರಾದೇಶಿಕ ಸಾರಿಗೆ ಅಧಿಕಾರಿ ಮಧುರ, ಉಪ ಪ್ರಾದೇಶಿಕ ಸಾರಿಗೆ ಅಧಿಕಾರಿ ರಾಮಚಂದ್ರ, ರಾಜ್ಯ ರಸ್ತೆ ಸಾರಿಗೆ ನಿಗಮದ ಮೈಸೂರು ನಗರ ಸಾರಿಗೆ ವಿಭಾಗೀಯ ನಿಯಂತ್ರಣಾಧಿಕಾರಿ ವೀರೇಶ್, ಗ್ರಾಮಾಂತರ ವಿಭಾಗೀಯ ನಿಯಂತ್ರಣಾಧಿಕಾರಿ ಶ್ರೀನಿವಾಸ್, ಕಾರ್ಯಪಾಲಕ ಅಭಿಯಂತರ ರಂಗರಾಜು ಮತ್ತಿತರ ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

ಬೆಮೆಲ್ ಆವರಣದಲ್ಲಿ ಹುಲಿ ಪ್ರತ್ಯಕ್ಷ

ಭದ್ರತಾ ಸಿಬ್ಬಂದಿ ಡಾಂಬರು ರಸ್ತೆಯಲ್ಲಿ ಓಡಾಡುತ್ತಿದ್ದ ಹುಲಿ ಕಂಡಿದ್ದಾರೆ. ನಂತರ ಅದು ಪೊದೆಯೊಳಗೆ ಹೊಕ್ಕಿದೆ. ಸಹಜವಾಗಿಯೇ ಡಾಂಬರು ರಸ್ತೆಯಲ್ಲಿ ಹೆಜ್ಜೆ ಗುರುತು ಸಿಗುವುದಿಲ್ಲ. ಪೊದೆಯಲ್ಲೂ ಹೆಜ್ಜೆ ಗುರುತು ಸಿಗದು. ಆದರೆ, ವೀಡಿಯೋ ಪರಿಶೀಲಿಸಿದಾಗ ಹುಲಿ ಸಂಚರಿಸಿರುವುದು ದೃಢಪಟ್ಟಿದೆ. ಈ ಹಿನ್ನೆಲೆಯಲ್ಲಿ ಬೆಮೆಲ್ ಕಾರ್ಖಾನೆ ಸಿಬ್ಬಂದಿ ಎಚ್ಚರಿಕೆಯಿಂದ ಓಡಾಡುವಂತೆ ಅರಣ್ಯ ಇಲಾಖೆಯ ಅಧಿಕಾರಿಗಳು ಸೂಚನೆ ನೀಡಿದ್ದಾರೆ. ದ್ವಿಚಕ್ರ ವಾಹನ ಇಲ್ಲವೇ ಕಾಲ್ನಡಿಗೆಯಲ್ಲಿ ಸಂಚರಿಸುವುದು ಅಪಾಯಕಾರಿಯಾಗಿದೆ. ನಾಲ್ಕು ಚಕ್ರದ ವಾಹನದಲ್ಲಿ ಸಂಚರಿಸುವುದು ಉತ್ತಮ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಅದೇ ವೇಳೆ ಹುಲಿ ಪತ್ತೆಗಾಗಿ ನಾಳೆ (ಭಾನುವಾರ) ಕೂಂಬಿಂಗ್ ನಡೆಸಲು ಅರಣ್ಯ ಅಧಿಕಾರಿಗಳು ನಿರ್ಧರಿಸಿದ್ದಾರೆ. ಅಗತ್ಯ ಸ್ಥಳಗಳಲ್ಲಿ ಕ್ಯಾಮರಾ ಟ್ರ್ಯಾಪ್ ಅಳವಡಿಸಲೂ ತೀರ್ಮಾನಿಸಲಾಗಿದೆ. ಹುಲಿ ಹೆಜ್ಜೆ ಗುರುತು ಪತ್ತೆ ಹಚ್ಚುವ ಸಲುವಾಗಿ ಹುಲಿ ಪ್ರತ್ಯಕ್ಷವಾದ ಸ್ಥಳದ ಸುತ್ತಮುತ್ತ ಮಣ್ಣಿರುವ ಪ್ರದೇಶದಲ್ಲಿ ನೀರು ಸುರಿಯಲಾಗಿದೆ. ಮತ್ತೆ ಈ ಪ್ರದೇಶಕ್ಕೆ ಹುಲಿ ಬಂದದ್ದೇ ಆದರೆ ಅದರ ಹೆಜ್ಜೆ ಗುರುತು ಸಿಗಬಹುದು ಎಂಬ ನಿರೀಕ್ಷೆ ಅರಣ್ಯ ಅಧಿಕಾರಿಗಳದ್ದು.

ಕಳೆದ ಸುಮಾರು 2 ತಿಂಗಳ ಹಿಂದೆ ಇಲವಾಲ ಬಳಿಯ ಅಲೋಕ ಸಮೀಪ ಮರಿಗಳೊಂದಿಗೆ ತಾಯಿ ಹುಲಿ ಪ್ರತ್ಯಕ್ಷವಾಗಿತ್ತು. ಆ ಸಂದರ್ಭದಲ್ಲಿ ಅರಣ್ಯ ಇಲಾಖೆ ಸಿಬ್ಬಂದಿ ಕಾರ್ಯಾಚರಣೆ ನಡೆಸಿದ್ದು, ಒಂದು ಹೆಣ್ಣು ಹುಲಿ ಹಾಗೂ 3 ಮರಿಗಳು ಆ ಭಾಗದಲ್ಲಿ ಇದ್ದದ್ದು ಪತ್ತೆಯಾಗಿತ್ತು. ಆ ವೇಳೆ ಅರಣ್ಯ ಸಿಬ್ಬಂದಿ ಒಂದು ಹುಲಿ ಮರಿಯನ್ನು ಸೆರೆ ಹಿಡಿದಿದ್ದರು. ಇನ್ನುಳಿದ ಹೆಣ್ಣು ಹುಲಿ ಹಾಗೂ 2 ಮರಿಗಳು ಪತ್ತೆಯಾಗಿಲ್ಲ. ಅವುಗಳು ಹುಣಸೂರು ತಾಲೂಕಿನ ಅರಬ್ಬಿತಿಟ್ಟು ಅರಣ್ಯದತ್ತ ನುಸುಳಿರಬಹುದು ಎಂದು ಅರಣ್ಯಾಧಿಕಾರಿಗಳು ಅಂದಾಜಿಸಿದ್ದರು. 2 ವರ್ಷದ ಹಿಂದೆ ಕಡಕೊಳ ಬಳಿ ಹೆಣ್ಣು ಹುಲಿ ಹಾಗೂ 3 ಮರಿಗಳು ಪತ್ತೆಯಾಗಿದ್ದವು. ಅವುಗಳಲ್ಲಿ ಒಂದು ಗಂಡು ಮರಿಹುಲಿ ಕಡಕೊಳ ಬಳಿ ಊಟಿ ಹೆದ್ದಾರಿಯಲ್ಲಿ ಅಪರಿಚಿತ ವಾಹನ ಡಿಕ್ಕಿ ಹೊಡೆದು ಸಾವಿಗೀಡಾಗಿತ್ತು. ತಾಯಿ ಹುಲಿಯಂತೂ ಬಂಡೀಪುರ ಅರಣ್ಯ ಸೇರಿಕೊಂಡಿದೆ ಎಂಬುದು ಅರಣ್ಯ ಇಲಾಖೆಗೆ ಖಚಿತಪಟ್ಟಿತ್ತು. ತಾಯಿಯಿಂದ ಬೇರ್ಪಟ್ಟಿದ್ದ 2 ಮರಿಗಳ ಪೈಕಿ ಒಂದು ವರಕೋಡು ಗ್ರಾಮದ ಬಳಿ ಪ್ರತ್ಯಕ್ಷವಾಗಿದ್ದರೆ, ಮತ್ತೊಂದು ಶ್ರೀರಂಗಪಟ್ಟಣ ತಾಲೂಕು ಮಹದೇವಪುರ ಬಳಿ ಪ್ರತ್ಯಕ್ಷವಾಗಿತ್ತು. ಅವುಗಳನ್ನು ಸೆರೆ ಹಿಡಿಯಲು ಪ್ರಯತ್ನಿಸಿತ್ತಾದರೂ, ಅವು ಸಿಕ್ಕಿಲ್ಲ. ಈ ಎರಡೂ ಮರಿಗಳು ಎಲ್ಲಿವೆ ಎಂಬುದೂ ಕೂಡ ಖಚಿತಪಟ್ಟಿಲ್ಲ. ಇದೀಗ ಆ ಮರಿಗಳು ದೊಡ್ಡದಾಗಿದ್ದು, ಯಾವುದೋ ಅರಣ್ಯ ಭಾಗದಲ್ಲಿ ಸುರಕ್ಷಿತವಾಗಿರಬಹುದು ಎಂದು ಭಾವಿಸಲಾಗಿದೆ.

15 ದಿನದಿಂದಲೇ ಹುಲಿ ಸಂಚಾರ?

ಕಾಡಿನಿಂದ ಹೇಗೋ ಈ ಪ್ರದೇಶಕ್ಕೆ ಬಂದಿರುವ ಹುಲಿ ಕಾರ್ಖಾನೆ ಸುತ್ತಲೂ ಕಾಂಪೌಂಡ್ ಇರುವುದರಿಂದ ಹೊರ ಹೋಗಲು ಸಾಧ್ಯವಾಗದೇ ಅಲ್ಲೇ ಸುತ್ತಾಡುತ್ತಿರಬಹುದು. ಬೆಮೆಲ್ ಕಾರ್ಖಾನೆ ಆವರಣದಲ್ಲಿ ಬೆಳೆದಿರುವ ದಟ್ಟವಾದ ಪೊದೆಗಳ ನಡುವೆ ಕಾಡು ಹಂದಿಗಳು ಯಥೇಚ್ಛವಾಗಿದ್ದು, ಹುಲಿಗೆ ಆಹಾರಕ್ಕೂ ಕೊರತೆ ಇಲ್ಲ. ಹೀಗಾಗಿ ಹುಲಿ ಇಲ್ಲೇ ಬೀಡು ಬಿಟ್ಟಿರಬಹುದು ಎಂದು ಶಂಕಿಸಲಾಗಿದೆ. ಕ್ಯಾಮರಾ ಟ್ರ್ಯಾಪ್‌ಗೆ ಸಿಕ್ಕಿ ಬೀಳುವ ಹುಲಿಗಳಿಗೆ ಅದರ ಮೈಮೇಲೆ ಇರುವ ಪಟ್ಟೆಗಳನ್ನು ಗುರುತು ಮಾಡಿಕೊಂಡು, ಅದಕ್ಕೆ ಅರಣ್ಯ ಇಲಾಖೆಯಿಂದ ಒಂದು ಐಡಿ (ಗುರುತು) ಕ್ರಿಯೇಟ್ ಮಾಡಲಾಗುತ್ತದೆ. ಎಲ್ಲಾದರೂ ಹುಲಿ ಪ್ರತ್ಯಕ್ಷವಾದರೆ ಅದು ಯಾವ ಹುಲಿ ಎಂಬುದು ಈ ಐಡಿಯಿಂದ ಪತ್ತೆಯಾಗುತ್ತದೆ. ಆದರೆ ಇಂದು ಮುಂಜಾನೆ ಬೆಮೆಲ್ ಭದ್ರತಾ ಸಿಬ್ಬಂದಿ ಮೊಬೈಲ್‌ನಲ್ಲಿ ಸೆರೆಯಾಗಿರುವ ವೀಡಿಯೋ ದೃಶ್ಯಾವಳಿಯನ್ನು ಪರಿಶೀಲಿಸಿದಾಗ ಈ ಹುಲಿ ಹಿಂದೆ ಯಾವುದೇ ಕ್ಯಾಮರಾ ಟ್ರ್ಯಾಪ್‌ಗೆ ಸಿಕ್ಕಿಲ್ಲವೆಂದು ಕಾಣುತ್ತಿದೆ. ಇದು ಐಡಿ ಇಲ್ಲದ ಹುಲಿ ಎಂದು ತಕ್ಷಣಕ್ಕೆ ನಿರ್ಧರಿಸಿರುವ ಅರಣ್ಯಾಧಿಕಾರಿಗಳು ನಾಳೆ ಬೆಮೆಲ್ ಆವರಣದಲ್ಲಿ ಅಳವಡಿಸುವ ಕ್ಯಾಮರಾ ಟ್ರ್ಯಾಪ್‌ಗೆ ಹುಲಿ ಸೆರೆ ಸಿಕ್ಕರೆ ಆಗ ಸ್ಪಷ್ಟವಾಗಿ ಅದು ಯಾವ ಹುಲಿ ಎಂಬುದು ಗೊತ್ತಾಗುತ್ತದೆ. ಒಂದು ವೇಳೆ ಐಡಿ ಇಲ್ಲದ ಹುಲಿ ಇದೇ ಆಗಿದ್ದರೆ ಅದಕ್ಕೆ ಒಂದು ಐಡಿ ಕ್ರಿಯೇಟ್ ಮಾಡಲಾಗುತ್ತದೆ. ಅಲ್ಲದೇ ಈ ಹುಲಿಯನ್ನು ಸೆರೆ ಹಿಡಿದು ಅರಣ್ಯಕ್ಕೆ ಬಿಡಲು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಮೂಲಗಳು ತಿಳಿಸಿವೆ.

“ಬೆಮೆಲ್ ಆವರಣದಲ್ಲಿ ಹುಲಿ ಸಂಚರಿಸಿರುವ ಬಗ್ಗೆ ಮಾಹಿತಿ ಬಂದ ತಕ್ಷಣ ನಾವು ಹೋಗಿ ಪರಿಶೀಲನೆ ನಡೆಸಿದ್ದೇವೆ. ನಾಳೆ (ಭಾನುವಾರ) ಕೆಲವು ಸ್ಥಳಗಳಲ್ಲಿ ಕ್ಯಾಮರಾ ಟ್ರ್ಯಾಪ್ ಅಳವಡಿಸುವುದರ ಜೊತೆಗೆ ಕೂಂಬಿಂಗ್ ಆಪರೇಷನ್ ಆರಂಭಿಸಲಾಗುವುದು. ಬೆಮೆಲ್ ಸಿಬ್ಬಂದಿಗೆ ಎಚ್ಚರಿಕೆಯಿಂದಿರುವಂತೆ ಸೂಚನೆ ನೀಡಲಾಗಿದೆ. –ಕೆ.ಪರಮೇಶ್, ಡಿಸಿಎಫ್

ಮೈಸೂರು ವಿವಿ ಭದ್ರತಾ ಸಿಬ್ಬಂದಿ ನೇಮಕಾತಿ ಅವ್ಯವಹಾರ

ಕರ್ತವ್ಯದ ವೇಳೆ ಸಾವನ್ನಪ್ಪಿದ ಮೈವಿವಿ ಭದ್ರತಾ ಸಿಬ್ಬಂದಿಗೆ ನ್ಯಾಯ ಒದಗಿಸದಿದ್ದರೆ ಹೋರಾಟ

ಮೈಸೂರು,ನ.29(ಜಿಎ)–ಮೈಸೂರು ವಿವಿಯಲ್ಲಿ ಹಲವಾರು ವರ್ಷಗಳಿಂದ ಭದ್ರತಾ ಸಿಬ್ಬಂದಿ ನೇಮಕದಲ್ಲಿ ಭಾರೀ ಅವ್ಯವಹಾರ ನಡೆದಿದೆ. ಈಚೆಗೆ ರಜೆಯಿಲ್ಲದ ಕಾರಣ ಅಸ್ವಸ್ಥನಾಗಿದ್ದರೂ ಕೆಲಸಕ್ಕೆ ಹಾಜರಾದ ವೇಳೆ ಮೃತಪಟ್ಟ ಭದ್ರತಾ ಸಿಬ್ಬಂದಿಗೆ ನ್ಯಾಯ ಒದಗಿಸುವಲ್ಲಿ ವಿವಿ ವಿಫಲವಾಗಿದೆ. ಹೀಗಾಗಿ ಕೂಡಲೇ ಸ್ಪಂದಿಸದಿದ್ದರೆ ಲೋಕಾಯುಕ್ತಕ್ಕೆ ದೂರು ಅಥವಾ ಅಹೋರಾತ್ರಿ ಧರಣಿ ಹಮ್ಮಿಕೊಳ್ಳಬೇಕಾಗುತ್ತದೆಂದು ಸಂತ್ರಸ್ಥರ ಪರವಾಗಿ ಕಾರ್ಮಿಕ ಮುಖಂಡ ಚಂದ್ರಶೇಖರ ಮೇಟಿ ಎಚ್ಚರಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಜೆ ಇಲ್ಲದೆ ಸತತ ಕರ್ತವ್ಯ ನಿರ್ವಹಿಸಿ ಅಸ್ವಸ್ಥರಾಗಿದ್ದ ಭದ್ರತಾ ಸಿಬ್ಬಂದಿ ಸಂಜಯ್‌ಕುಮಾರ್ ಅವರನ್ನು ಬಲವಂತವಾಗಿ ಕರ್ತವ್ಯಕ್ಕೆ ಹಾಜರಾಗುವಂತೆ ಸೂಚಿಸಿದ ಕಾರಣ ಆತ ಕರ್ತವ್ಯ ನಿರತನಾಗಿದ್ದ ವೇಳೆ ಸಾವನ್ನಪ್ಪಿದರು. ಈತನ ಕುಟುಂಬಕ್ಕೆ ನ್ಯಾಯ ಒದಗಿಸುವುದಾಗಿ ಭರವಸೆ ನೀಡಿದ್ದ ವಿವಿ ಕುಲಸಚಿವರು ಮಾತಿಗೆ ತಪ್ಪಿದ್ದಾರೆ ಎಂದರು.

ವಿವಿಯಲ್ಲಿ ಸುಮಾರು 152 ಮಂದಿಯನ್ನು ಭದ್ರತಾ ಕಾರ್ಮಿಕರನ್ನಾಗಿ ನೇಮಕ ಮಾಡಿಕೊಳ್ಳಲಾಗಿದೆ ಎಂದು ಕಳೆದ ಏಳೆಂಟು ವರ್ಷಗಳಿಂದ ಬಿಲ್ ಮಾಡಲಾಗುತ್ತಿದೆ. ಆದರೆ ವಾಸ್ತವವಾಗಿ ಕೇವಲ 120 ಮಂದಿ ಮಾತ್ರ ಕೆಲಸ ನಿರ್ವಹಿಸುತ್ತಿದ್ದಾರೆ. ಇದೇ ವೇಳೆ ಪ್ರತಿಯೊಬ್ಬರಿಗೂ ಸುಮಾರು 23 ಸಾವಿರ ವೇತನವೆಂದು ತಿಳಿಸಿ, ಕೇವಲ 12 ಸಾವಿರ ರೂ. ನೀಡಿ ದುಡಿಸಿಕೊಳ್ಳಲಾಗುತ್ತಿದೆ. ಈ ರೀತಿ ಕೋಟ್ಯಾಂತರ ರೂ. ಅವ್ಯವಹಾರ ವಿವಿಯಲ್ಲಿ ಭದ್ರತಾ ಕಾರ್ಮಿಕರ ಪೂರೈಕೆ ಗುತ್ತಿಗೆ ಪಡೆದಿದ್ದ ಕಂಪನಿಗಳು ನಡೆಸಿವೆ. ಈ ಕುರಿತು ಈಚೆಗೆ ಪ್ರತಿಭಟನೆ ನಡೆಸಿದ ವೇಳೆ ಸಮಸ್ಯೆ ಸರಿಪಡಿಸುವುದಾಗಿ ಕುಲಸಚಿವರು ಭರವಸೆ ನೀಡಿದ್ದರು. ಹೊಸ ಕಂಪನಿಗೆ ಹೊರಗುತ್ತಿಗೆ ನೀಡಿದ ಕಾರಣ ಕೇವಲ 90 ಮಂದಿಯನ್ನು ಮಾತ್ರ ಕೆಲಸಕ್ಕೆ ತೆಗೆದುಕೊಳ್ಳಲಾಗಿದೆ. ಆದರೆ ಇವರಾರಿಗೂ ಕಾನೂನುಬದ್ಧ ಸೌಲಭ್ಯ ದೊರಕುತ್ತಿಲ್ಲ ಎಂದು ದೂರಿದರು.

ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಕಾರಣ ಆರು ಮಂದಿಯನ್ನು ಗುತ್ತಿಗೆದಾರ ಕೆಲಸದಿಂದ ತೆಗೆದುಹಾಕಿದ್ದಾರೆ. ಈ ಎಲ್ಲಾ ಅವ್ಯವಹಾರಗಳಿಗೆ ಸೂಪರ್‌ವೈಸರ್ ಹಾಗೂ ವಿವಿಯ ಕೆಲವರು ಕಾರಣರಾಗಿದ್ದಾರೆ. ಹೀಗಾಗಿ ಹಗರಣ ಕುರಿತು ತನಿಖೆ ನಡೆಸಬೇಕು. ಭದ್ರತಾ ಸಿಬ್ಬಂದಿಗೆ ಎಲ್ಲ ಸೌಲಭ್ಯ ನೀಡಬೇಕು, ಮೃತ ಸಂಜಯ್‌ಕುಮಾರ್ ಕುಟುಂಬಕ್ಕೆ ನ್ಯಾಯ ದೊರಕಿಸಿಕೊಡಬೇಕು. ಇಲ್ಲದಿದ್ದಲ್ಲಿ ಲೋಕಾಯುಕ್ತಕ್ಕೆ ದೂರು ನೀಡುವ ಅಥವಾ ಕ್ರಾಫರ್ಡ್ ಹಾಲ್ ಎದುರು ಅಹೋರಾತ್ರಿ ಧರಣಿ ನಡೆಸುವ ನಿರ್ಧಾರಕ್ಕೆ ಬರಬೇಕಾಗುತ್ತದೆ ಎಂದು ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಪ್ರಗತಿಪರ ಹೋರಾಟಗಾರ ಉಗ್ರ ನರಸಿಂಹೇಗೌಡ, ನಾರಾಯಣ್, ಶಿವಣ್ಣ, ಶಿವಕುಮಾರ್ ನೊಂದ ಭದ್ರತಾ ಕಾರ್ಮಿಕರು ಉಪಸ್ಥಿತರಿದ್ದರು.

ಅಭಿನಂದನೆ



ಬಿಜೆಪಿ ಮೈಸೂರು ನಗರ ಎಸ್‌ಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಹಾಗೂ ಸೇವಾ ಚಿಲುಮೆ ಚಾರಿಟೆಬಲ್ ಟ್ರಸ್ಟ್ ಅಧ್ಯಕ್ಷ ಕಾರ್ತಿಕ್ ಮರಿಯಪ್ಪ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಸಂಸದ ಯದುವೀರ್ ಒಡೆಯರ್, ಮಾಜಿ ಶಾಸಕ ಎಲ್.ನಾಗೇಂದ್ರ, ಶಾಸಕ ಟಿ.ಎಸ್.ಶ್ರೀವತ್ಸ, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ, ಮಾಜಿ ಸಚಿವ ಸಿ.ಟಿ.ರವಿ, ಬಿಜೆಪಿ ಜಿಲ್ಲಾಧ್ಯಕ್ಷ ಕುಂಬ್ರಳ್ಳಿ ಸುಬ್ಬಣ್ಣ, ಮಾಜಿ ಸಂಸದ ಪ್ರತಾಪ್ ಸಿಂಹ, ಮಾಜಿ ಶಾಸಕ ಹರ್ಷವರ್ಧನ್, ಮಾಜಿ ಮೇಯರ್ ಸಂದೇಶ್‌ಸ್ವಾಮಿ, ನಿಗಮ ಮಂಡಳಿ ಮಾಜಿ ಅಧ್ಯಕ್ಷ ಫಣೀಶ್, ಎಸ್.ಮಹದೇವಯ್ಯ, ಬಿ.ಎಂ.ರಘು, ಕೇಬಲ್ ಮಹೇಶ್, ಹೆಚ್.ಜಿ.ಗಿರಿಧರ್, ಅನಿಲ್, ಶೈಲೇಂದ್ರ ಶುಭ ಕೋರಿದರು.

ಭತ್ತ, ರಾಗಿ ಕಟಾವು ಯಂತ್ರಕ್ಕೆ ಬಾಡಿಗೆ ದರ ನಿಗದಿ



ಮೈಸೂರು,ನ.29–ಮೈಸೂರು ಜಿಲ್ಲೆಯಲ್ಲಿ 2025–26ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ 83,430 ಹೆಕ್ಟೇರ್ ಪ್ರದೇಶದಲ್ಲಿ ಭತ್ತದ ಬೆಳೆ ಆವರಿಸಿದ್ದು, ಈಗಾಗಲೇ ಕಟಾವು ಕಾರ್ಯ ಪ್ರಾರಂಭವಾಗಬೇಕಾಗಿರುತ್ತದೆ. ಜಿಲ್ಲೆಯಲ್ಲಿ ಭತ್ತ ಹಾಗೂ ರಾಗಿ ಕಟಾವಿಗೆ ರೈತರು ಕಂಬೈನ್ಡ್ ಹಾರ್ವೆಸ್ಟರ್ ಯಂತ್ರಗಳನ್ನು ಬಾಡಿಗೆಗೆ ಪಡೆದು ಒಕ್ಕಣೆ ಮಾಡುವುದು ವಾಡಿಕೆಯಾಗಿರುತ್ತದೆ. ಆದ್ದರಿಂದ ಕಂಬೈನ್ಡ್ ಹಾರ್ವೆಸ್ಟರ್ ಯಂತ್ರಗಳ ಬಾಡಿಗೆ ದರ ನಿಗದಿಪಡಿಸುವ ಸಲುವಾಗಿ ಮೈಸೂರು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಅಧ್ಯಕ್ಷತೆಯಲ್ಲಿ ಸಭೆ ನಡೆಸಲಾಯಿತು.

ಭತ್ತ ಕಟಾವು ಯಂತ್ರದಿಂದ ಕಟಾವು ಮಾಡಲು ಪ್ರತಿ ಗಂಟೆಗೆ ಚೈನ್ ಮಾದರಿ ಕಟಾವು ಯಂತ್ರಕ್ಕೆ ಪ್ರತಿ ಗರಿಷ್ಟ ಗಂಟೆಗೆ ರೂ. 2500 (2 ಸಾವಿರದ 5 ನೂರು ಮಾತ್ರ), ಟೈರ್ (ಗ್ರಿಪ್) ಮಾದರಿ ಭತ್ತದ ಕಟಾವು ಯಂತ್ರಕ್ಕೆ ಪ್ರತಿ ಗಂಟೆಗೆ ಗರಿಷ್ಟ ರೂ. 2000 (2 ಸಾವಿರ ಮಾತ್ರ)ಗಳಂತೆ ಟೈರ್ (ಸಾಮಾನ್ಯ) ಮಾದರಿ ಭತ್ತದ ಕಟಾವು ಯಂತ್ರಕ್ಕೆ ಪ್ರತಿ ಗಂಟೆಗೆ ಗರಿಷ್ಟ ರೂ. 1800 (1 ಸಾವಿರದ 8 ನೂರು ಮಾತ್ರ)ಗಳಂತೆ ಹಾಗೂ ರಾಗಿ ಕಟಾವು ಯಂತ್ರಕ್ಕೆ ಪ್ರತಿ ಗಂಟೆಗೆ ಗರಿಷ್ಟ ರೂ. 2900 (2 ಸಾವಿರದ 9 ನೂರು ಮಾತ್ರ)ಗಳಂತೆ ದರ ನಿಗದಿಪಡಿಸಲಾಯಿತು.

ಆನ್‌ಲೈನ್ ಇಂಡಕ್ಷನ್ ಕಾರ್ಯಕ್ರಮ...



2025–26ನೇ ಸಾಲಿನಲ್ಲಿ ಜುಲೈ ಆವೃತ್ತಿಯಲ್ಲಿ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿ ಮಿತ್ರರಿಗೆ ಶೈಕ್ಷಣಿಕ ಕಾರ್ಯಕ್ರಮಗಳ ಕಿರು ಪರಿಚಯ ಮಾಡಿಕೊಡುವ ಆನ್‌ಲೈನ್ ಇಂಡಕ್ಷನ್ ಕಾರ್ಯಕ್ರಮ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ದೃಶ್ಯ ಸ್ಟುಡಿಯೋ ವಿಭಾಗದಲ್ಲಿ ನಡೆಯಿತು. ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಹಾಗೂ ಇನ್ನಿತರರು ಈ ವೇಳೆ ಉಪಸ್ಥಿತರಿದ್ದರು.

ಹನಗೋಡು ಬಳಿ ಹುಲಿ ಮರಿಗಳಿಗಾಗಿ ಹುಡುಕಾಟ



ಮುಳ್ಳೂರು ಬಳಿ ಮುಳ್ಳಂದಿ ಗೂಡಿಗೆ ನುಗ್ಗಿದ್ದ ಹುಲಿ ಮರಿ ರಕ್ಷಣೆ ಮಾಡಿರುವ ದೃಶ್ಯ.

ಮುಳ್ಳೂರು ಬಳಿ ಮುಳ್ಳಂದಿ ಗೂಡಿಗೆ ನುಗ್ಗಿದ್ದ ಮರಿ

ಕಳೆದ 15 ದಿನದ ಹಿಂದೆ ಸರಗೂರು ತಾಲೂಕಿನ ಮುಳ್ಳೂರಿನ ಬಳಿ ತಾಯಿ ಹುಲಿ ಸೆರೆ ಹಿಡಿದ ಬಳಿ ಅದರ ಮೂರು ಮರಿಗಳನ್ನು ರಕ್ಷಣೆ ಮಾಡಲು ಮುಂದಾಗಿದ್ದಾಗ ಒಂದು ಮರಿ ಸುಮಾರು 6–7 ಅಡಿ ಆಳದ ಮುಳ್ಳಂದಿ ಗೂಡಿನೊಳಗೆ ನುಗ್ಗಿ ಆಶ್ರಯ ಪಡೆದಿತ್ತು. ಆ ಮರಿ ರಕ್ಷಣೆ ಮಾಡಲೇಬೇಕಾಗಿದ್ದರಿಂದ ಜೆಸಿಬಿ ಮೂಲಕ ಮುಳ್ಳಂದಿ ಗೂಡಿನ ಪಕ್ಕ ಹಳ್ಳ ತೋಡಿ ಒಳಗೆ ಸಿಲುಕಿದ್ದ ಮರಿಯನ್ನು ರಕ್ಷಣೆ ಮಾಡಲಾಗಿತ್ತು. ಅದೇ ಮಾದರಿಯಲ್ಲಿ ಗೌಡನಕಟ್ಟೆ ಗ್ರಾಮ ಬಳಿ ಹೊಲದಲ್ಲಿ ಅವಿತುಕೊಂಡಿರುವ ಮರಿಗಳ ಹುಡುಕಾಟ ತೀವ್ರಗೊಳಿಸಲಾಗಿದೆ. ಗ್ರಾಮಸ್ಥರಿಗೆ ಹುಲಿ ಮರಿ ಕಂಡರೆ ಮಾಹಿತಿ ನೀಡುವಂತೆ ಸಲಹೆ ನೀಡಲಾಗಿದೆ.

ಕಲ್ಲೂರಪ್ಪನ ಬೆಟ್ಟದ ಬಳಿ 12 ಅಡಿ ಉದ್ದದ ಹೆಬ್ಬಾವು ರಕ್ಷಣೆ...



ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಕಾಡಂಚಿನ ಕಲ್ಲೂರಪ್ಪನ ಬೆಟ್ಟದ ಬಳಿ 12 ಅಡಿ ಉದ್ದದ ಹೆಬ್ಬಾವನ್ನು ವೀರನಹೊಸಳ್ಳಿ ವಲಯದ ಸಿಬ್ಬಂದಿಗಳ ತಂಡ ರಕ್ಷಣೆ ಮಾಡಿ ಅರಣ್ಯ ಪ್ರದೇಶದಲ್ಲಿ ಬಿಡುಗಡೆ ಮಾಡಿತು.

ಮೈಸೂರು,ನ.29(ಎಂಟಿವೈ)– ತಾಯಿ ಮಡಿಲಿಗೆ ಸೇರಿಸಲು ನಾಪತ್ತೆಯಾಗಿರುವ ನಾಲ್ಕು ಹುಲಿ ಮರಿಗಳ ಪತ್ತೆಗಾಗಿ ಅರಣ್ಯ ಇಲಾಖೆ ನಡೆಸುತ್ತಿರುವ ಕೂಂಬಿಂಗ್ ಕಾರ್ಯಾಚರಣೆಯ ಸಿಬ್ಬಂದಿಗಳ ಕಣ್ಣಿಗೆ ಬೀಳದೆ ಅಜ್ಞಾತ ಸ್ಥಳದಲ್ಲಿ ಅಡಗಿರುವ ಹುಲಿ ಮರಿಗಳು ಅರಣ್ಯ ಇಲಾಖೆಗೆ ತಲೆ ನೋವಾಗಿ ಪರಿಣಮಿಸಿವೆ.

ಹುಣಸೂರು ತಾಲೂಕಿನ ಹನಗೋಡು ಹೋಬಳಿಯ ಗೌಡನಕಟ್ಟೆ ಬಳಿ ಮೆಕ್ಕೆ ಜೋಳದ ಹೊಲದಲ್ಲಿ ಅಡಗಿದ್ದ ತಾಯಿ ಹುಲಿಯನ್ನು ಶುಕ್ರವಾರ ಮಧ್ಯರಾತ್ರಿ ಸೆರೆ ಹಿಡಿದು ಕೂರ್ಗಳ್ಳಿಯಲ್ಲಿರುವ ಮೃಗಾಲಯದ ಪುನರ್ವಸತಿ ಕೇಂದ್ರಕ್ಕೆ ಸ್ಥಳಾಂತರಿಸಲಾಗಿತ್ತು. ಕೂಂಬಿಂಗ್ ಕಾರ್ಯಾಚರಣೆ ವೇಳೆ ನಾಲ್ಕು ಮರಿಗಳು ಪೊದೆಗಳಲ್ಲಿ ಅವಿತುಕೊಂಡಿದ್ದರಿಂದ ಅವುಗಳನ್ನು ರಕ್ಷಣೆ ಮಾಡಲು ಸಾಧ್ಯವಾಗಿರಲಿಲ್ಲ. ಆದರೆ, ಶುಕ್ರವಾರ ಬೆಳಗ್ಗಿನಿಂದಲೇ ಹುಲಿ ಮರಿಗಳಿಗಾಗಿ ಹುಡುಕಾಟ ಆರಂಭಿಸಲಾಗಿತ್ತು.

ಶನಿವಾರ ಬೆಳಗ್ಗಿನಿಂದಲೂ ಶೋಧ ಕಾರ್ಯ ನಡೆಸಲಾಯಿತಾದರೂ ಹುಲಿ ಮರಿಗಳ ಸುಳಿವು ಸಿಗದೇ ಇರುವುದು ಅರಣ್ಯ ಇಲಾಖೆ ತಲೆ ನೋವಾಗಿದೆ. ಹುಲಿ ಮರಿಗಳಿಗೆ 3–4 ತಿಂಗಳಷ್ಟೇ ಆಗಿರುವುದರಿಂದ ಆಹಾರ ಸೇವನೆಗೆ ತಾಯಿಯನ್ನೇ ಅವಲಂಭಿಸಿದ್ದವು. ಬೇಟೆಯಾಡುವ ಶಕ್ತಿಯೂ ಇಲ್ಲದ ಕಾರಣ ಹಸಿವಿನಿಂದ ಹುಲಿ ಮರಿಗಳು ಕಂಗೆಟ್ಟಿರುವ ಸಾಧ್ಯತೆ ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ಹುಲಿ ಮರಿಗಳ ಹುಡುಕಾಟಕ್ಕೆ ಹೆಚ್ಚಿನ ಆದ್ಯತೆ ನೀಡಿ, ಕೂಂಬಿಂಗ್ ಕಾರ್ಯಾಚರಣೆ ನಡೆಸಲಾಗುತ್ತಿದೆ.

ಶಾಸಕರಾದ ಜಿ.ಟಿ.ದೇವೇಗೌಡರಿಗೆ ಹುಟ್ಟುಹಬ್ಬದ ಶುಭಾಶಯ...



ಚಾಮುಂಡೇಶ್ವರಿ ಕ್ಷೇತ್ರದ ಶಾಸಕರು, ರಾಜ್ಯ ಸಹಕಾರ ಮಹಾಮಂಡಳ ಅಧ್ಯಕ್ಷರೂ ಆದ ಮಾಜಿ ಸಚಿವರಾದ ಜಿ.ಟಿ. ದೇವೇಗೌಡ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಅವರ ಪತ್ನಿ ಶ್ರೀಮತಿ ಲಲಿತಾ ಅವರನ್ನು ಮಾಜಿ ಶಾಸಕ ಎಲ್.ನಾಗೇಂದ್ರ ಅಭಿನಂದಿಸಿ, ಶುಭಾಶಯ ಕೋರಿದರು. ಈ ವೇಳೆ ನಗರಪಾಲಿಕೆ ಮಾಜಿ ಸದಸ್ಯರಾದ ರಂಗಸ್ವಾಮಿ, ಚಿಕ್ಕವೆಂಕಟು, ಸೋಮಶೇಖರರಾಜು, ಬಿಜೆಪಿ ಮುಖಂಡ ಪುನೀತ್, ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ಎನ್.ಯೋಗಾನಂದ್, ಆರ್.ಸೋಮಣ್ಣ, ಗಂಗೋತ್ರಿ ರಮೇಶ್, ಸಚಿನ್‌ಗೌಡ, ಶಿವಕುಮಾರ್ ಇನ್ನಿತರರಿದ್ದಾರೆ.

ಹೆಚ್ಚುವರಿ ಕ್ಲಾಸ್‌ಗಳಿಂದ ದೈಹಿಕ ಶಿಕ್ಷಣ ತರಗತಿಗಳಿಗೆ ಅಡ್ಡಿಪಡಿಸದಂತೆ ರಾಜ್ಯದ ಶಾಲೆಗಳಿಗೆ ನಿರ್ದೇಶನ

ಬೆಂಗಳೂರು,ನ.29–10ನೇ ತರಗತಿಯ ವಿದ್ಯಾರ್ಥಿಗಳಿಗೆ ಆಟ ಮತ್ತು ದೈಹಿಕ ಶಿಕ್ಷಣ ತರಗತಿಗಳಿಗೆ ವಿಷಯ ಶಿಕ್ಷಕರು ಅಡ್ಡಿಪಡಿಸದಂತೆ ನೋಡಿಕೊಳ್ಳಿ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ರಾಜ್ಯದ ಎಲ್ಲಾ ಪ್ರೌಢಶಾಲೆಗಳ ಶಿಕ್ಷಕರು ಮತ್ತು ಪ್ರಾಂಶುಪಾಲರಿಗೆ ಸೂಚನೆ ನೀಡಿದೆ. 10ನೇ ತರಗತಿಯ ವಿದ್ಯಾರ್ಥಿಗಳಿಗೆ ಆಟ ಮತ್ತು ದೈಹಿಕ ಶಿಕ್ಷಣದ ಕೊರತೆಯ ಬಗ್ಗೆ ಕೆಎಸ್‌ಸಿಪಿಸಿಆರ್ ಸದಸ್ಯರು ಪತ್ರ ಬರೆದ ನಂತರ ಶಿಕ್ಷಣ ಇಲಾಖೆಯಿಂದ ಈ ಸೂಚನೆಯನ್ನು ನೀಡಲಾಗಿದೆ.

ಕರ್ನಾಟಕ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಕೆ.ಟಿ.ತಿಪ್ಪೇಸ್ವಾಮಿ ಅವರು, ಕಳೆದ ತಿಂಗಳು ನಾನು ವಿವಿಧ ಶಾಲೆಗಳಿಗೆ ಭೇಟಿ ನೀಡಿ 10ನೇ ತರಗತಿ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದ್ದೇನೆ. ಕ್ರೀಡಾ ಅವಧಿಯಲ್ಲಿ ಆಟವಾಡಲು ಅಥವಾ ದೈಹಿಕ ತರಗತಿಗಳನ್ನು ನಡೆಸುತ್ತಿಲ್ಲ ಎಂದು ವಿದ್ಯಾರ್ಥಿಗಳು ಆಯೋಗಕ್ಕೆ ತಿಳಿಸಿದ್ದಾರೆ.

ಈ ದೈಹಿಕ ಶಿಕ್ಷಣ ತರಗತಿಗಳನ್ನು ಹೆಚ್ಚುವರಿ ತರಗತಿಗಳನ್ನು ನಡೆಸಲು ಮತ್ತು ಅವರ ಪಠ್ಯಕ್ರಮವನ್ನು ಪೂರ್ಣಗೊಳಿಸಲು ಇತರ ವಿಷಯದ ಶಿಕ್ಷಕರು ಬಳಸಿಕೊಳ್ಳುತ್ತಿದ್ದಾರೆ ಎಂದು ಹೇಳಿದ್ದಾರೆ.

ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳಲ್ಲಿ ಉತ್ತಮ ಅಂಕಗಳನ್ನು ಗಳಿಸುವಂತೆ ಪೋಷಕರಿಂದ ಒತ್ತಡಕ್ಕೊಳಗಾಗುತ್ತಾರೆ. ಆದ್ದರಿಂದ, ಶಿಕ್ಷಕರು ದೈಹಿಕ ಶಿಕ್ಷಣ ತರಗತಿಗಳನ್ನು ಹೆಚ್ಚುವರಿ ತರಗತಿಗಳಿಗೆ ಬಳಸಿಕೊಳ್ಳಬಾರದು ಎಂದು ಆದೇಶ ಹೊರಡಿಸುವಂತೆ ನಾನು ಶಿಕ್ಷಣ ಆಯುಕ್ತ ವಿಕಾಸ್ ಕಿಶೋರ್ ಅವರಿಗೆ ಪತ್ರ ಬರೆದಿದ್ದೇನೆ ಎಂದರು.

25 ನರ್ಸಿಂಗ್ ಸೀಟುಗಳಿಗೆ ನೇರ ದಾಖಲಾತಿ ಇಂದು

ಮೈಸೂರು,ನ.29–2025–26ನೇ ಸಾಲಿನಲ್ಲಿ ಕೆಇಎ ಮೂಲಕ ಅಂತಿಮ ಸುತ್ತಿನ ಸೀಟು ಹಂಚಿಕೆಯ ನಂತರ ಸರ್ಕಾರಿ ನರ್ಸಿಂಗ್ ಕಾಲೇಜುಗಳಲ್ಲಿ ಉಳಿದಿರುವ ಎಂ.ಎಸ್ಸಿ ನರ್ಸಿಂಗ್ ಸೀಟುಗಳನ್ನು ಭರ್ತಿ ಮಾಡಿಕೊಳ್ಳಲು ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯವು ಆದೇಶಿಸಿದ್ದು, ಸದರಿ ಆದೇಶದನ್ವಯ ದಿನಾಂಕ: ನ.30 ರಂದು ಬೆಳಗ್ಗೆ 9 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಸರ್ಕಾರಿ ಶುಶ್ರೂಷಾ ಮಹಾವಿದ್ಯಾಲಯ, (government college of nursing) ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಇರ್ವಿನ್ ರಸ್ತೆ, ಮೈಸೂರು ಇಲ್ಲಿ ಕೆಇಎ ವತಿಯಿಂದ ಹಂಚಿಕೆಯಾಗದೇ ಉಳಿದಿರುವ 25 ಸೀಟುಗಳನ್ನು ನೇರ ದಾಖಲಾತಿ (Walk in Ad mission) ಮೂಲಕ ಭರ್ತಿ ಮಾಡಲಾಗುವುದು ಎಂದು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಪ್ರಾಂಶುಪಾಲರು ತಿಳಿಸಿದ್ದಾರೆ.

ಗ್ರೇಟರ್ ಮೈಸೂರಿಗೆ ಸಂಪುಟ ಅನುಮೋದನೆ

ಸಿಎಂ, ಡಿಸಿಎಂ, ಸಚಿವ ಸಂಪುಟದ ಸದಸ್ಯರಿಗೆ ಕೃತಜ್ಞತೆ ಸಲ್ಲಿಸಿದ ಮುಡಾ ಮಾಜಿ ಅಧ್ಯಕ್ಷ ರಾಜೀವ್



ಹೆಚ್.ವಿ.ರಾಜೀವ್

ಮೈಸೂರು, ನ.29(ಜಿಎ)–ಗ್ರೇಟರ್ ಮೈಸೂರಿಗೆ ಸಚಿವ ಸಂಪುಟದಲ್ಲಿ ಅನುಮೋದನೆ ನೀಡಿರುವುದಕ್ಕೆ ಮೈಸೂರು ಜನತೆ ಪರವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಹಾಗೂ ಸಂಪುಟದ ಎಲ್ಲಾ ಸದಸ್ಯರಿಗೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹಾಗೂ ಕೆಪಿಸಿಸಿ ಸದಸ್ಯರೂ ಆದ ಹೆಚ್.ವಿ.ರಾಜೀವ್ ಇಂದಿಲ್ಲಿ ಕೃತಜ್ಞತೆ ಸಲ್ಲಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಹೊರವಲಯದ ಹೂಟಗಳ್ಳಿ ನಗರ ಸಭೆ, ಶ್ರೀರಾಂಪುರ, ಬೋಗಾದಿ, ರಮ್ಮನಹಳ್ಳಿ ಹಾಗೂ ಕಡಕೊಳ ಪಟ್ಟಣ ಪಂಚಾಯಿತಿ ಜೊತೆಗೆ ಚಾಮುಂಡಿಬೆಟ್ಟ, ಆಲನಹಳ್ಳಿ, ಸಿದ್ದಲಿಂಗಪುರ, ಧನಗಳ್ಳಿ, ಇಲವಾಲ ಸೇರಿದಂತೆ ಬಹುತೇಕ ಎಲ್ಲಾ ಪ್ರದೇಶವನ್ನು ಬೃಹತ್ ಮೈಸೂರು ವ್ಯಾಪ್ತಿಗೆ ಸೇರಿಸಿರುವುದರಿಂದ ಮುಂದಿನ ದಿನಗಳಲ್ಲಿ ಪ್ರವಾಸೋದ್ಯಮ, ಕೈಗಾರಿಕೆ, ಇನ್ನಿತರ ಆರ್ಥಿಕ ಚಟುವಟಿಕೆಗಳ ದೃಷ್ಟಿಯಿಂದ ಸಮಗ್ರವಾಗಿ ಅಭಿವೃದ್ಧಿ ಹೊಂದಲಿದೆ ಎಂದು ಹೆಚ್.ವಿ.ರಾಜೀವ್ ಸಂತಸ ವ್ಯಕ್ತಪಡಿಸಿದರು.

ಈಗಾಗಲೇ ಮೂಲ ಸೌಕರ್ಯ ದೃಷ್ಟಿಯಿಂದ ಸಮಸ್ಯೆ ಎದುರಿಸುತ್ತಿರುವ ಪ್ರದೇಶಗಳು ಬೃಹತ್ ಮೈಸೂರು ವ್ಯಾಪ್ತಿಗೆ ಬಂದು, ಎಲ್ಲ ರೀತಿಯ ಅಭಿವೃದ್ಧಿ ಕಾಣಲಿವೆ ಎಂದರು.

ಜೊತೆಗೆ, ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಬರುವ ಅನುದಾನವೂ ಹೆಚ್ಚಳವಾಗಲಿದೆ. ರಸ್ತೆಗಳು ವಿಶಾಲವಾಗಲಿವೆ. ಮೈಸೂರಿಗೆ ಹೊಂದಿಕೊಂಡಂತಿರುವ ನಂಜನಗೂಡು, ಕೆ.ಆರ್.ಎಸ್. ಶ್ರೀರಂಗಪಟ್ಟಣದಂತಹ ಧಾರ್ಮಿಕ, ಪ್ರವಾಸೋದ್ಯಮ ಕೇಂದ್ರಗಳು ಪ್ರಗತಿ ಕಾಣಲಿವೆ ಎಂದು ತಿಳಿಸಿದರು.

ಮೆಟ್ರೋ, ಇನ್ನಿತರ ಸಾರ್ವಜನಿಕ ಸಾರಿಗೆ ವ್ಯವಸ್ಥೆ ಆರಂಭ, ಇಲ್ಲವೇ ಸುಧಾರಣೆ ಕಾಣಲಿವೆ. ನೋಂದಣಿಯಾಗಿದ್ದರೂ ನಿರ್ವಹಣೆ ರಹಿತವಾಗಿರುವ ಬಡಾವಣೆಗಳಲ್ಲಿ ಪರಿಸ್ಥಿತಿ ಸುಧಾರಿಸಲಿದೆ. ಜಲಶುದ್ಧೀಕರಣ ವ್ಯವಸ್ಥೆ ಆರಂಭಿಸಿ, ಕಲುಷಿತ ನೀರು ಸಂಸ್ಕರಿಸುವ ಕೆಲಸ ನಡೆಯುವ ಕಾರಣ ಅಕ್ಕಪಕ್ಕದ ನದಿಗಳು ಕಲುಷಿತವಾಗುವುದು ತಪ್ಪುತ್ತದೆ. ವಿಮಾನ ನಿಲ್ದಾಣ ವಿಸ್ತರಣೆ, ರೈಲ್ವೆ ಸೌಕರ್ಯ ವಿಸ್ತರಣೆ ಸಾಧ್ಯವಾಗಲಿದೆ. ನಗರ ಮೈಸೂರು ಮಹಾರಾಜರ ನಂತರ ಮತ್ತೆ ವ್ಯವಸ್ಥಿತವಾಗಿ ಬೆಳವಣಿಗೆ ಹೊಂದಲು ಇದು ಕಾರಣವಾಗಲಿದೆ. ಆಸ್ತಿ ತೆರಿಗೆ ಏಕರೂಪವಾಗಲಿದೆ ಎಂಬ ಆಶಾಭಾವನೆ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾಜಿ ಮೇಯರ್ ಬಿ.ಎಲ್.ಭೈರಪ್ಪ, ಎನ್.ಡಿ. ಮಮತಾ, ಕೆ.ಎ.ಎಸ್.ಸಿದ್ದಲಿಂಗಪ್ಪ ಹಾಗೂ ಉಪಸ್ಥಿತರಿದ್ದರು.

ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಗ್ರಾಪಂ ನೌಕರರ ಪ್ರತಿಭಟನೆ



ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಮೈಸೂರಲ್ಲಿ ಗ್ರಾಪಂ ನೌಕರರು ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿದರು.

ಮೈಸೂರು, ನ.29(ಎಂಟಿವೈ)–ಕನಿಷ್ಠ ವೇತನ ನೀಡುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಮೈಸೂರಲ್ಲಿ ಗ್ರಾಮ ಪಂಚಾಯಿತಿ ನೌಕರರು ಶನಿವಾರ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿದರು.

ಚಾಮರಾಜ ಜೋಡಿ ರಸ್ತೆ, ರಾಮಸ್ವಾಮಿ ವೃತ್ತದ ಮೂಲಕ ಜಿಲ್ಲಾ ಪಂಚಾಯತ್ ಕಚೇರಿವರೆಗೂ ಪ್ರತಿಭಟನಾ ಮೆರವಣಿಗೆಯಲ್ಲಿ ಸಾಗಿ ಧರಣಿ ನಡೆಸಿದರು.

1957ರಲ್ಲಿ ದೆಹಲಿಯಲ್ಲಿ ನಡೆದ 15ನೇ ಕಾರ್ಮಿಕ ಸಮ್ಮೇಳನದಲ್ಲಿ ದುಡಿಯುವ ವರ್ಗಕ್ಕೆ ಸೂಕ್ತ ಕನಿಷ್ಠ ವೇತನ ನಿಗದಿಪಡಿಸಲು ನಿರ್ದಿಷ್ಟ ಸೂತ್ರಗಳನ್ನು ಅಳವಡಿಸಿದೆ. ಹಿಂದಿನ ಬೊಮ್ಮಾಯಿ ಸರ್ಕಾರ ಈ ಮಾರ್ಗದರ್ಶಿ ಸೂತ್ರಗಳನ್ನು ಅನುಸರಿಸಿರಲಿಲ್ಲ. ಇದಕ್ಕೆ ಸಂಘದಿಂದ ನ್ಯಾಯಾಲಯದ ಮೆಟ್ಟಿಲೇರಿ ಕನಿಷ್ಠ ವೇತನ ಜಾರಿ ಮಾಡಲು ಗಡುವು ನೀಡಲಾಗಿತ್ತು. ಆದರೆ, ಈವರೆಗೂ ಅದು ಅನುಷ್ಠಾನವಾಗಿಲ್ಲ ಎಂದು ಕಿಡಿಕಾರಿದರು.

ಬೇಡಿಕೆಗಳು: ಗ್ರಾಮ ಪಂಚಾಯಿತಿ ನೌಕರರಿಗೆ ವೈಜ್ಞಾನಿಕ ಕನಿಷ್ಠ ವೇತನ ನಿಗದಿ ಮಾಡಬೇಕು. ಪಿಂಚಣಿ ಅಥವಾ ಇಡಿಗಂಟು ನೀಡಬೇಕು. ಘನ ತ್ಯಾಜ್ಯ ವಿಲೇವಾರಿ ಮಾಡುತ್ತಿರುವ ಚಾಲಕಿಯರು ಮತ್ತು ಸಹಾಯಕಿಯರಿಗೆ ಪ್ರತಿ ತಿಂಗಳು ವೇತನ ನೀಡಬೇಕು. ತರಬೇತಿ ಪಡೆದಿರುವ ಎಲ್ಲರಿಗೂ ಕೆಲಸ ನೀಡಬೇಕು. ಇವರನ್ನು ಗ್ರಾಮ ಪಂಚಾಯಿತಿ ನೌಕರರೆಂದು ಪರಿಗಣಿಸಬೇಕು. ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ಲೆಕ್ಕ ಸಹಾಯಕ ಹುದ್ದೆ ಮಂಜೂರು ಮಾಡಬೇಕು. ಸೇವಾ ಹಿರಿತನ ಭತ್ಯೆ ಹೆಚ್ಚಳ ಮಾಡಬೇಕು ಎಂದು ಒತ್ತಾಯಿಸಿದರು. ಬಳಿಕ ಮುಖ್ಯಮಂತ್ರಿಗಳ ಆಪ್ತ ಕಾರ್ಯದರ್ಶಿ ವಿಜಯ್ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಸಂಘದ ರಾಜ್ಯ ಉಪಾಧ್ಯಕ್ಷರಾದ ಜಿ.ರಾಮಕೃಷ್ಣ, ರೇಖಾ.ಎಸ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಟಿ.ಎಸ್.ದಿನೇಶ್, ಕೊಡಗು ಜಿಲ್ಲಾಧ್ಯಕ್ಷ ಪಿ.ಆರ್.ಭರತ್, ಚಾಮರಾಜನಗರ ಜಿಲ್ಲಾಧ್ಯಕ್ಷ ಸಿದ್ದರಾಜು, ಮಂಡ್ಯ ಜಿಲ್ಲಾಧ್ಯಕ್ಷ ಎಂ.ಎಂ. ಶಿವಕುಮಾರ್, ಹಾಸನ ಜಿಲ್ಲಾಧ್ಯಕ್ಷ ಕೆ.ಟಿ. ಹೊನ್ನೇಗೌಡ ಸೇರಿದಂತೆ ಮೈಸೂರು, ಚಾಮರಾಜನಗರ, ಮಂಡ್ಯ, ಹಾಸನ, ಕೊಡಗು ಜಿಲ್ಲೆಗಳ ಗ್ರಾಮ ಪಂಚಾಯಿತಿ ನೌಕರರು ಹಲವರು ಭಾಗವಹಿಸಿದ್ದರು.

ದೇಶ - ವಿದೇಶ

ಬೇಟೆಗಾಗಿ ಬಳಸುವ ಮೇಕೆ ಕದಿಯುವಾಗ ಚಿರತೆಯ ಬೋನಿನಲ್ಲಿ ಸಿಕ್ಕಿಬಿದ್ದ ವ್ಯಕ್ತಿ!



ಬಹ್ರೈಚ್: ಉತ್ತರಪ್ರದೇಶದ ಬಹ್ರೈಚ್ ಜಿಲ್ಲೆಯಲ್ಲಿ ಚಿರತೆಯನ್ನು ಹಿಡಿಯಲು ಅರಣ್ಯ ಇಲಾಖೆ ಸಿಬ್ಬಂದಿ ಹಾಕಿದ್ದ ಬೋನಿನಲ್ಲಿ ಆಕಸ್ಮಿಕವಾಗಿ ವ್ಯಕ್ತಿಯೊಬ್ಬ ಸಿಲುಕಿಕೊಂಡ ವಿಚಿತ್ರ ಘಟನೆ ನಡೆದಿದೆ. ಫಖರ್‌ಪುರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿರುವ ಉಮ್ರಿ ಗ್ರಾಮದಲ್ಲಿ ಈ ಘಟನೆ ನಡೆದಿದೆ. ಚಿರತೆಯನ್ನು ಹಿಡಿಯಲು ಬೋನಿನ ಒಳಗೆ ಕಟ್ಟಿದ್ದ ಮೇಕೆಯನ್ನು ಕದಿಯುವ ಉದ್ದೇಶದಿಂದ ತಡರಾತ್ರಿ ಆ ವ್ಯಕ್ತಿ ಬೋನಿನ ಕಡೆಗೆ ನುಸುಳಿದ್ದಾನೆ. ಮೇಕೆಯನ್ನು ನೋಡಿ ಆಮಿಷಕ್ಕೆ ಆತ ಬೋನಿನೊಳಗೆ ಪ್ರವೇಶಿಸಿದ್ದಾನೆ. ಅದರ ಒಳಗೆ ಕಾಲಿಟ್ಟ ತಕ್ಷಣ, ಬೋನಿನ ಸ್ವಯಂಚಾಲಿತ ಬಾಗಿಲು ಮುಚ್ಚಿಕೊಂಡು ಸಿಕ್ಕಿಬಿದ್ದಿದ್ದಾನೆ. ಆತ ಬಾಗಿಲು ತೆರೆಯಲು ಪದೇ ಪದೇ ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ಹಲವಾರು ನಿಮಿಷಗಳ ಕಾಲ ಹೆಣಗಾಡಿದ ನಂತರ ಆತ ಮೊಬೈಲ್ ಫೋನ್ ತೆಗೆದುಕೊಂಡು ಸಹಾಯಕ್ಕಾಗಿ ಪರಿಚಯಸ್ಥರಿಗೆ ಕರೆ ಮಾಡಿದ್ದಾನೆ. ಮಾಹಿತಿ ಪಡೆದ ಗ್ರಾಮಸ್ಥರು ಸ್ಥಳಕ್ಕೆ ಧಾವಿಸಿ ಅರಣ್ಯ ಇಲಾಖೆಗೆ ಮಾಹಿತಿ ನೀಡಿದರು. ಸ್ವಲ್ಪ ಸಮಯದ ನಂತರ ಅರಣ್ಯ ಸಿಬ್ಬಂದಿ ಆಗಮಿಸಿ, ಬೋನಿನ ಬಾಗಿಲು ತೆರೆದು ಆತನನ್ನು ಬಿಡಿಸಿದ್ದಾರೆ.

62ನೇ ವಯಸ್ಸಲ್ಲಿ ಮದುವೆ: ಹುದ್ದೆಯಲ್ಲಿದ್ದಾಗ ವಿವಾಹವಾದ ಮೊದಲ ಆಸಿಸ್ ಪಿಎಂ ಆಲ್ಬನೀಸ್



ಮೆಲ್ಬರ್ನ್: ಆಸ್ಟ್ರೇಲಿಯಾ 62 ವರ್ಷದ ಪ್ರಧಾನಿ ಆಂಥೋನಿ ಆಲ್ಬನೀಸ್ ಶನಿವಾರ ತಮ್ಮ ದೀರ್ಘಕಾಲದ ಗೆಳತಿ ಜೊಡಿ ಹೇಡನ್ ಅವರನ್ನು ವಿವಾಹವಾದರು. ಆಲ್ಬನೀಸ್ ಅವರಿಗೆ ಇದು ಎರಡನೇ ಮದುವೆಯಾಗಿದೆ. ಅಧಿಕಾರದಲ್ಲಿರುವಾಗಲೇ ವಿವಾಹವಾದ ದೇಶದ ಮೊದಲ ಪ್ರಧಾನಿಯಾಗಿದ್ದಾರೆ. ಕ್ಯಾನ್‌ಬೆರಾದ ತಮ್ಮ ಅಧಿಕೃತ ನಿವಾಸವಾದ ದಿ ಲಾಡ್ಜ್‌ನಲ್ಲಿ ನಡೆದ ಖಾಸಗಿ ಸಮಾರಂಭದಲ್ಲಿ 46 ವರ್ಷದ ಹಣಕಾಸು ಸೇವಾ ಉದ್ಯೋಗಿಯನ್ನು ವರಿಸಿದರು. ನಮ್ಮ ಮುಂದಿನ ಜೀವನವನ್ನು ಒಟ್ಟಿಗೆ ಕಳೆಯಲು ನಮ್ಮ ಪ್ರೀತಿ ಮತ್ತು ಬದ್ಧತೆಯನ್ನು ನಮ್ಮ ಕುಟುಂಬ ಮತ್ತು ಸ್ನೇಹಿತರ ಮುಂದೆ ಹಂಚಿಕೊಳ್ಳಲು ಸಂತೋಷಪಡುತ್ತೇವೆ ಎಂದು ಆಲ್ಬನೀಸ್ ತಿಳಿಸಿದ್ದಾರೆ. ಮ್ಯಾರಿಡ್ ಎಂದು ಸಾಮಾಜಿಕ ಮಾಧ್ಯಮದಲ್ಲಿ ಒಂದು ಪದದ ಪೋಸ್ಟ್ ಮಾಡಿರುವ ಅವರು, ಮದುವೆಯಲ್ಲಿ ಗೆಳತಿಯ ಕೈಹಿಡಿದು ಸಂತಸದಿಂದ ಸಾಗುತ್ತಿರುವ ವಿಡಿಯೊ ಹಂಚಿಕೊಂಡಿದ್ದಾರೆ. 2024ರ ಪ್ರೇಮಿಗಳ ದಿನದಂದು ಗೆಳತಿ ಹೇಡನ್ ಬಳಿ ಪ್ರೇಮ ನಿವೇದನೆ ಮಾಡಿದ್ದ ಆಲ್ಬನೀಸ್, ವರ್ಷದ ನಂತರ ವಿವಾಹವಾಗಿದ್ದಾರೆ.

ಶಹಜಹಾನ್‌ಪುರದಲ್ಲಿ ಗುಡಿಸಲಿಗೆ ಬೆಂಕಿ ತಗುಲಿ ವೃದ್ಧ ಸಜೀವದಹನ

ಶಹಜಹಾನ್‌ಪುರ: ಉತ್ತರ ಪ್ರದೇಶದ ಶಹಜಾನ್‌ಪುರದಲ್ಲಿ ಗುಡಿಸಲಿಗೆ ಬೆಂಕಿ ತಗುಲಿ ಅದರಲ್ಲಿ ಮಲಗಿದ್ದ 60 ವರ್ಷದ ವ್ಯಕ್ತಿಯೊಬ್ಬರು ಸಾವನ್ನಪ್ಪಿದ್ದಾರೆ.

ಕಾಂತ್ ಪ್ರದೇಶದ ಅಲಿಯಾಪುರದಲ್ಲಿ ದೀರ್ಘ ಕಾಲದಿಂದ ಅಸ್ವಸ್ಥರಾಗಿದ್ದ ರಾಂಪಾಲ್ ಶ್ರೀವಾಸ್ತವ ಅವರು ಶುಕ್ರವಾರ ರಾತ್ರಿ ಊಟ ಮಾಡಿದ ನಂತರ ತಮ್ಮ ಮನೆಯ ಹೊರಗೆ ನಿರ್ಮಿಸಲಾದ ಗುಡಿಸಲಿನಲ್ಲಿ ಮಲಗಿದ್ದರು. ಈ ವೇಳೆ ಬೆಂಕಿ ಹೊತ್ತಿಕೊಂಡು ಈ ದುರ್ಘಟನೆ ಸಂಭವಿಸಿದೆ. ಪೊಲೀಸ್ ಅಧಿಕಾರಿಯ ಪ್ರಕಾರ, ರಾತ್ರಿಯ ಸಮಯದಲ್ಲಿ ಆ ಗುಡಿಸಲಿಗೆ ಬೆಂಕಿ ಹೊತ್ತಿಕೊಂಡಿತು. ಕುಟುಂಬದ ಸದಸ್ಯರು ಈ ವೇಳೆ ಮನೆಯೊಳಗೆ ಮಲಗಿದ್ದರು. ಆದರೆ, ಆ ವೃದ್ಧ ಮನೆಯ ಹೊರಗೆ ಇರುವ ಸಣ್ಣ ಗುಡಿಸಲಿನಲ್ಲಿ ಮಲಗಲು ಹೋಗಿದ್ದರು. ಸಾಮಾನ್ಯವಾಗಿ ಅವರು ಅಲ್ಲೇ ಮಲಗಿದ್ದರು. ಆಗ ಬೆಂಕಿ ಹೊತ್ತಿಕೊಂಡಿತ್ತು. ಈ ವೇಳೆ ಶಬ್ದ ಕೇಳಿ ಮನೆಯವರು ಹೊರಗೆ ಬಂದರು. ಆದರೆ ಬೆಂಕಿ ತೀವ್ರವಾಗಿ ಹರಡಿದ್ದರಿಂದ ಅವರಿಗೆ ಆ ವ್ಯಕ್ತಿಯನ್ನು ಕಾಪಾಡಲು ಸಾಧ್ಯವಾಗಲಿಲ್ಲ.

ಬೆಂಕಿಯನ್ನು ನಂದಿಸುವ ಅವರ ಎಲ್ಲಾ ಪ್ರಯತ್ನಗಳು ವಿಫಲವಾದವು. ಗುಡಿಸಲಿನೊಳಗೆ ಜೀವಂತವಾಗಿ ಸುಟ್ಟು ಹೋದ ಶ್ರೀವಾಸ್ತವ್ ಅವರ ಮೃತದೇಹವನ್ನು ಮರಣೋತ್ತರ ಪರೀಕ್ಷೆ ನಡೆಸಿ, ವಾರಸುದಾರರಿಗೆ ಒಪ್ಪಿಸಲಾಯಿತು.

ಶ್ರೀಲಂಕಾದಲ್ಲಿ ಧಾರಾಕಾರ ಮಳೆ, ಪ್ರವಾಹಕ್ಕೆ 123 ಮಂದಿ ಸಾವು



ಕೊಲಂಬೋ: ದಿಟ್ವಾ ಚಂಡಮಾರುತದಿಂದ ಉಂಟಾದ ಧಾರಾಕಾರ ಮಳೆ ಮತ್ತು ಪ್ರವಾಹದಿಂದಾಗಿ ಶ್ರೀಲಂಕಾದಾದ್ಯಂತ ಇದುವರೆಗೆ 123 ಜನರು ಸಾವನ್ನಪ್ಪಿದ್ದಾರೆ. ಇನ್ನೂ 130 ಜನರು ಕಾಣೆಯಾಗಿದ್ದಾರೆ ಎಂದು ವಿಪತ್ತು ನಿರ್ವಹಣಾ ಕೇಂದ್ರ ಶನಿವಾರ ತಿಳಿಸಿದೆ. ಒಂದು ವಾರದಿಂದ ಸುರಿಯುತ್ತಿರುವ ಭಾರೀ ಮಳೆಯಲ್ಲಿ ಮನೆಗಳು ನಾಶವಾದ ನಂತರ ಪರಿಹಾರ ಕಾರ್ಯಾಚರಣೆಗಳು ನಡೆಯುತ್ತಿವೆ ಎಂದು ಮಹಾನಿರ್ದೇಶಕ ಸಂಪತ್ ಕೊಟುವೆಗೊಡ ಹೇಳಿದ್ದಾರೆ. ಹವಾಮಾನ ವ್ಯವಸ್ಥೆಯು ದ್ವೀಪದಿಂದ ನೆರೆಯ ಭಾರತದ ಕಡೆಗೆ ಚಲಿಸುತ್ತಿದೆ ಆದರೆ ಅದು ಈಗಾಗಲೇ ಭಾರಿ ವಿನಾಶವನ್ನುಂಟುಮಾಡಿದೆ ಎಂದು ಡಿಎಂಸಿ ತಿಳಿಸಿದೆ. ಸಶಸ್ತ್ರ ಪಡೆಗಳ ಸಹಾಯ ದಿಂದ ಪರಿಹಾರ ಕಾರ್ಯಾಚರಣೆಗಳು ನಡೆಯುತ್ತಿವೆ ಎಂದು ಕೊಟುವೆಗೊಡ ಕೊಲಂಬೊದಲ್ಲಿ ತಿಳಿಸಿದರು. ಶನಿವಾರ ತಗ್ಗು ಪ್ರದೇಶಗಳಲ್ಲಿ ಪ್ರವಾಹ ಪರಿಸ್ಥಿತಿ ಹದಗೆಟ್ಟಿದ್ದು, ಕೊಲಂಬೊದಿಂದ ಹಿಂದೂ ಮಹಾಸಾಗರಕ್ಕೆ ಹರಿಯುವ ಕೆಲಾನಿ ನದಿಯ ದಡದಲ್ಲಿ ವಾಸಿಸುವವರಿಗೆ ಸ್ಥಳಾಂತರಿಸುವ ಆದೇಶಗಳನ್ನು ಅಧಿಕಾರಿಗಳು ಹೊರಡಿಸಿದ್ದಾರೆ.

ಆಂಧ್ರದಲ್ಲಿ ಕಾರು ಅಪಘಾತ; ಇಬ್ಬರು ಮಕ್ಕಳು ಸೇರಿ ಕುಟುಂಬದ ಐವರ ಸಾವು



ಕೋಲಾರ: ಆಂಧ್ರ ಪ್ರದೇಶದ ಕರ್ನೂಲ್ ಜಿಲ್ಲೆಯ ಯಮ್ಮಿಗನೂರು ಬಳಿ ಶನಿವಾರ ನಸುಕಿನಲ್ಲಿ ಸಂಭವಿಸಿದ ಕಾರು ಅಪಘಾತದಲ್ಲಿ ಇಬ್ಬರು ಮಕ್ಕಳು ಸೇರಿದಂತೆ ಕೋಲಾರ ಮೂಲದ ಒಂದೇ ಕುಟುಂಬದ ಐವರು ಮೃತಪಟ್ಟಿದ್ದಾರೆ.

ವೆಂಕಟೇಶಪ್ಪ (70), ಸತೀಶ್ ಕುಮಾರ್ (34), ಮೀನಾಕ್ಷಿ (32), ಬನಿತ್‌ಗೌಡ (5) ಹಾಗೂ ರಿತ್ವಿಕ್(4) ಮೃತರು.

ಚಾಲಕ ಚೇತನ್ ಸೇರಿದಂತೆ ಇಬ್ಬರು ತೀವ್ರವಾಗಿ ಗಾಯಗೊಂಡಿದ್ದು, ಅದೋನಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಕೋಲಾರ ಜಿಲ್ಲೆಯ ಚೊಕ್ಕಹೊಸಹಳ್ಳಿ ಗ್ರಾಮದ ಏಳು ಮಂದಿ ಸ್ವಿಫ್ಟ್ ಡಿಸೈರ್ ಕಾರಿನಲ್ಲಿ (KA07B9672) ಮಂತ್ರಾಲಯಕ್ಕೆ ತೆರಳುತ್ತಿದ್ದರು. ಆಗ ಅದೋನಿಯಿಂದ ಬರುತ್ತಿದ್ದ ಫಾರ್ಚೂನರ್ (AP39SS2020) ಕಾರಿನೊಂದಿಗೆ ಮುಖಾಮುಖಿ ಡಿಕ್ಕಿಯಾಗಿದೆ. ಫಾರ್ಚೂನರ್ ಕಾರಿನಲ್ಲಿದ್ದ ಆಂಧ್ರದ ಮೂವರು ಗಾಯಗೊಂಡಿದ್ದು, ಅವರು ಕೂಡ ಅದೋನಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಪೊಲೀಸರು ವಾಹನಗಳನ್ನು ಠಾಣೆಗೆ ರವಾನಿಸಿದ್ದಾರೆ.

ಅನ್ಯ ಭಾಷೆಗಳ ಬಳಕೆಯಿಂದ ಶುದ್ಧ ಕನ್ನಡ ಕಣ್ಮರೆ

ವಿರಾಜಪೇಟೆ,ನ.29–ನಾವು ಮಾತನಾಡುವ ಸಂದರ್ಭದಲ್ಲಿ ಬೇರೆ ಬೇರೆ ಭಾಷೆಗಳ ಶಬ್ದ ಗಳನ್ನು ಬಳಸುತ್ತಿರುವುದರಿಂದ ಇಂದು ಶುದ್ಧ ಕನ್ನಡ ಎಂಬುದು ಕಣ್ಮರೆಯಾಗುತ್ತಿದೆ. ಎಂಬುದು ತೀರ್ಪುಗಾರರ ಅಭಿಮತ

70ನೇ ಕನ್ನಡ ರಾಜ್ಯೋತ್ಸವದ ಅಂಗ ವಾಗಿ ಎಂಬಾರ್ಕ್ ಅಸೋಸಿಯೇಷನ್ ವತಿ ಯಿಂದ ಸರ್ಕಾರಿ ಪ್ರೌಢಶಾಲೆ ಸಭಾಂಗಣ ದಲ್ಲಿ ವಿದ್ಯಾರ್ಥಿಗಳಿಗಾಗಿ ವಿವಿಧ ವಿಷಯ ಗಳ ಕುರಿತಂತೆ ಸ್ವಚ್ಛಕನ್ನಡ ಭಾಷಣ ಸ್ಪರ್ಧೆ ಏರ್ಪಡಿಸಲಾಗಿತ್ತು. ತೀರ್ಪುಗಾರರಾಗಿದ್ದ ನಿವೃತ್ತ ಶಿಕ್ಷಕ ಅಬ್ದುಲ್ ಲತೀಫ್ ಮಾತ ನಾಡಿ, ಭಾಷೆಯನ್ನು ಧೀಮಂತಗೊಳಿಸ ಬೇಕಾದರೆ ಶಬ್ದ ಉಚ್ಚರಣೆ, ಅರ್ಥವನ್ನು ಗ್ರಹಿಸಿ ಮಾತನಾಡುವುದು ಮುಖ್ಯ. ಕನ್ನಡ ಭಾಷೆಗೆ ತನ್ನದೆ ಆದ ಸ್ಥಾನಮಾನಗಳಿವೆ. ಆಧುನಿಕ ಕನ್ನಡವು ಇಂದು ಹಲವು ಭಾಷೆಗಳ ಬೆರಕೆಯಿಂದಾಗಿ ತಾಯಿ ಭಾಷೆ ಕಲಬೆರೆಕೆ ಭಾಷೆಯಾಗಿ ಹೊರಹೊಮ್ಮಿದೆ ಎಂದರು.



ರಾಜ್ಯೋತ್ಸವದ ಅಂಗವಾಗಿ ಎಂಬಾರ್ಕ್ ಅಸೋಸಿಯೇಷನ್ ಆಯೋಜಿಸಿದ್ದ ಸ್ವಚ್ಛಕನ್ನಡ ಭಾಷಣ ಸ್ಪರ್ಧೆಯಲ್ಲಿ ವಿಜೇತರಾದ ಅಭ್ಯರ್ಥಿಗಳಿಗೆ ಪ್ರಶಸ್ತಿಪತ್ರ ನೀಡಿ ಸತ್ಕರಿಸಿದರು.

ನಿವೃತ್ತ ಶಿಕ್ಷಕ ಚಾರ್ಲ್ಸ್ ಡಿಸೋಜಾ ಮಾತ ನಾಡಿ, ಪ್ರಾಥಮಿಕ, ಪ್ರೌಢಶಾಲೆ, ಕಾಲೇಜು ಶಿಕ್ಷಣ ಕನ್ನಡ ಮಾಧ್ಯಮದಲ್ಲಿ ಪೂರೈಸಿದ ಯುವ ಸಮುದಾಯವು ದಿನ ಬಳಕೆಗಾಗಿ ಬೆರೆಕೆ ಕನ್ನಡದಲ್ಲಿ ವ್ಯವಹರಿಸುತ್ತಿರುವುದು ಕಳವಳಕಾರಿ ಸಂಗತಿ ಎಂದರು.

ಪತ್ರಕರ್ತೆ ಉಷಾ ಪ್ರೀತಂ ಮಾತನಾಡಿ, ಕನ್ನಡ ಮಾಧ್ಯಮದಲ್ಲಿ ಓದಿ ಕೆಲಸ ಗಿಟ್ಟಿಸಿ ಕೊಂಡ ವ್ಯಕ್ತಿಗಳು ಇಂದು ಕನ್ನಡ ಭಾಷೆ ಯನ್ನು ಮರೆತಂತಿರುವಂತೆ ನಟಿಸಿ ಇತರ ಭಾಷೆಗೆ ಮನ್ನಣೆ ನೀಡುತ್ತಿದ್ದಾರೆ ಎಂದರು.

ಸರ್ಕಾರಿ ಪ್ರೌಢಶಾಲೆಯ ಸಹ ಶಿಕ್ಷಕ ಮದನ್ ಕಾರ್ಯಕ್ರಮ ಉದ್ದೇಶಿಸಿ ಮಾತ ನಾಡಿದರು. ಸಂಸ್ಥೆಯ ಅಧ್ಯಕ್ಷ ದಿವಾಕರ್ ಶೆಟ್ಟಿ ಪ್ರಾಸ್ತಾವಿಕ ಭಾಷಣ ಮಾಡಿದರು

ಕರ್ನಾಟಕದ ಜಾನಪದ ಕಲೆಗಳು ವಿಷಯದಲ್ಲಿ 10ನೇ ತರಗತಿ ವಿದ್ಯಾರ್ಥಿ ನಜೀರುದ್ದೀನ್ ಹೆಚ್. ಎಂ ಪ್ರಥಮ ಜ. ತಿಮ್ಮಯ್ಯ ವಿಷಯದಲ್ಲಿ ಮೊಹಮ್ಮದ್ ಇಶಾಮ್ ಕೆ.ಎಸ್.(10ನೇ ತರಗತಿ) ದ್ವಿತಿಯ ಡಾ. ರಾಜ್‌ಕುಮಾರ್ ವಿಷಯ ದಲ್ಲಿ ಲಾವಣ್ಯ ಪಿ.ಟಿ. ತೃತೀಯ ಸ್ಥಾನ ಪಡೆದುಕೊಂಡರು. ಒಟ್ಟು 18 ವಿದ್ಯಾರ್ಥಿ ಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದರು.

ವಿಜೇತರಿಗೆ ನೆನಪಿನ ಕಾಣಿಕೆ, ಪ್ರಮಾಣ ಪತ್ರ ವಿತರಣೆ ಮಾಡಲಾಯಿತು. ಎಂಬಾರ್ಕ್ ಅಸೋಸಿಯೇಷನ್ ಎ.ಕೆ. ರವಿಶಂಕರ್, ಸುರೇಶ್, ಸಜೀತ್, ಮನ್ಸೂರ್, ಭರತ್ ಪೂಜಾರಿ, ಪಾಪಣ್ಣ ಆಚಾರ್, ಟಿ.ಜೆ.ಶಂಕರ್ ಶೆಟ್ಟಿ, ಸೇರಿದಂತೆ ಸರ್ಕಾರಿ ಪ್ರೌಢಶಾಲೆಯ ಶಿಕ್ಷಕರು, ವಿದ್ಯಾರ್ಥಿಗಳು ಹಾಜರಿದ್ದರು.

ಪಾನತ್ತಿಲದ ರಸ್ತೆ ಬದಿ ಕಡವೆ ಕಳೇಬರ ಪತ್ತೆ

ನಾಪೋಕು, ನ.29(ದುಗ್ಗಳ)–ದಕ್ಷಿಣ ಕನ್ನಡ ಗಡಿ ಭಾಗವಾದ ಪೆರಾಜೆ ಪಾನತ್ತಿಲದ ರಸ್ತೆ ಬದಿಯಲ್ಲಿ ಕಡವೆಯ ಮೃತದೇಹವೊಂದು ಪತ್ತೆಯಾಗಿದೆ.



ಪೆರಾಜೆ ಗ್ರಾಮ ಪಂಚಾಯತಿ ವ್ಯಾಪ್ತಿಯ ನಿಡ್ಯಮಲೆ ಪಾನತ್ತಿಲದ ಎಂಬಲ್ಲಿ ಗುರುವಾರ ರಾತ್ರಿ ಬೇಟೆಗಾರರು ಕಡವೆಗೆ ಗುಂಡು ಹಾರಿಸಿದ್ದಾರೆ. ಇದರಿಂದ ಅದು ರಸ್ತೆ ಬದಿ ಬಂದು ಬಿದ್ದು ಸತ್ತಿರಬಹುದೆಂದು ಶಂಕಿಸಲಾಗಿದೆ. ಈ ವ್ಯಾಪ್ತಿಯಲ್ಲಿ ಬೇಟೆಗಾರರು ನಿರಂತರ ಕಾಡು ಪ್ರಾಣಿಗಳನ್ನು ಬೇಟೆಯಾಡುತ್ತಿದ್ದು ಅರಣ್ಯ ಇಲಾಖೆ ಕಠಿಣ ಕಾನೂನಿನ ಕ್ರಮ ಕೈಗೊಳ್ಳಬೇಕೆಂದು ಪ್ರಜ್ಞಾವಂತ ನಾಗರಿಕರು ಒತ್ತಾಯಿಸಿದ್ದಾರೆ.

ರಸ್ತೆಯ ಬದಿಯಲ್ಲಿ ಕಡವೆ ಬಿದ್ದಿರುವುದನ್ನು ಗಮನಿಸಿದ ಸ್ಥಳೀಯ ನಿವಾಸಿಗಳು ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದರ ಮೇರೆಗೆ ಸಂಪಾಜೆ ಅರಣ್ಯ ಇಲಾಖೆಯ ಅಧಿಕಾರಿಗಳು ಸತ್ತ ಕಡವೆಯನ್ನು ವಶಕ್ಕೆ ಪಡೆದಿದ್ದು, ಘಟನೆಗೆ ಸಂಬಂಧಿಸಿದಂತೆ ಹಲವರನ್ನು ವಿಚಾರಣೆಗೆ ಒಳಪಡಿಸಿ ಮಾಹಿತಿ ಸಂಗ್ರಹಕ್ಕೆ ಮುಂದಾಗಿದ್ದಾರೆ.

ಸ್ವಯಂಪ್ರೇರಿತ ರಕ್ತದಾನ ಅಗತ್ಯ



ಗೋಣಿಕೊಪ್ಪದಲ್ಲಿ ಆಯೋಜಿಸಲಾಗಿದ್ದ ರಕ್ತದಾನ ಶಿಬಿರವನ್ನು ಗಣ್ಯರು ಉದ್ಘಾಟಿಸಿದರು.

ಗೋಣಿಕೊಪ್ಪ ನ.29–ಒಬ್ಬರು ರಕ್ತದಾನ ಮಾಡಿದರೆ, ಅದರಿಂದ ಮೂವರ ಜೀವ ಉಳಿಸಬಹುದಾಗಿದೆ ಅದರಿಂದ ಸಾರ್ವಜನಿಕರು ಸ್ವಯಂಪ್ರೇರಿತವಾಗಿ ರಕ್ತದಾನ ಮಾಡಲು ಮುಂದಾಗಬೇಕು ಎಂದು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ರಕ್ತನಿಧಿ ಕೇಂದ್ರದ ಮುಖ್ಯಸ್ಥ ಡಾ. ಕರುಂಬಯ್ಯ ತಿಳಿಸಿದ್ದಾರೆ.

ಮಾಧ್ಯಮ ಸ್ಪಂದನ, ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ರಕ್ತನಿಧಿ ಕೇಂದ್ರ, ಪೊನ್ನಂಪೇಟೆ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘ, ಗೋಣಿಕೊಪ್ಪ ಗ್ರಾಮ ಪಂಚಾಯಿತಿ, ರೋಟರಿ ಸಹಯೋಗದಲ್ಲಿ ಉಮಾ ಮಹೇಶ್ವರಿ ದೇವಸ್ಥಾನದ ಸಭಾಂಗಣದಲ್ಲಿ ಆಯೋಜಿಸಿದ್ದ ರಕ್ತದಾನ ಶಿಬಿರದಲ್ಲಿ ಮಾತನಾಡಿ, ಒಬ್ಬರು ನೀಡುವ ರಕ್ತದಿಂದ ಕನಿಷ್ಠ ಮೂವರ ಜೀವ ಉಳಿಸಲು ಸಾಧ್ಯವಿದೆ. ಇದರಿಂದ ರಕ್ತದಾನದ ಮಹತ್ವವನ್ನು ಅರಿತು ಕೊಂಡು ಸ್ವಯಂಪ್ರೇರಿತರಾಗಿ ನೀಡಲು ಮುಂದಾಗಬೇಕಿದೆ ಎಂದು ಮನವಿ ಮಾಡಿಕೊಂಡರು.

ಮಾಧ್ಯಮ ಸ್ಪಂದನ ಸಂಸ್ಥಾಪಕ ಅಜ್ಜಮಾಡ ರಮೇಶ್ ಕುಟ್ಟಪ್ಪ, ಕಾವೇರಿ ಪೊಮ್ಮಕ್ಕಡ ಕೂಟ ಅಧ್ಯಕ್ಷ ಕೊಟ್ಟಂಗಡ ವಿಜು ದೇವಯ್ಯ, ಗೋಣಿ ಕೊಪ್ಪ ಗ್ರಾಪಂ ಅಧ್ಯಕ್ಷ ಕುಲ್ಲಚಂಡ ಪ್ರಮೋದ್ ಗಣಪತಿ, ಕಾರ್ಯನಿರತ ಪತ್ರಕರ್ತ ಸಂಘದ ರಾಜ್ಯ ಸಮಿತಿ ಸದಸ್ಯೆ ಬಿ.ಆರ್. ಸವಿತಾರೈ, ರೋಟರಿ ಸಂಸ್ಥೆ ಅಧ್ಯಕ್ಷ ಪಿ.ಆರ್.ವಿಜಯ ಮಾತನಾಡಿದರು.

ಉಮಾಮಹೇಶ್ವರಿ ದೇವಸ್ಥಾನ ಟ್ರಸ್ಟ್ ಪ್ರಮುಖರಾದ ಜಪ್ಪೆಕೋಡಿ ರಾಜ, ಉದ್ಯಮಿ ಬಿ.ಎಂ. ಪ್ರಕಾಶ್, ಪೊನ್ನಂಪೇಟೆ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಸಣ್ಣುವಂಡ ಕಿಶೋರ್ ನಾಚಪ್ಪ, ಕಾರ್ಯಕ್ರಮ ಸಂಚಾಲಕ ವಿ.ವಿ. ಅರುಣ್‌ಕುಮಾರ್ ಇದ್ದರು. ಸಿಂಗಿ ಸತೀಶ್ ಸ್ವಾಗತಿಸಿದರು. ಕೆ.ಬಿ. ಜಗದೀಶ್ ಜೋಡುಬೀಟಿ ನಿರೂಪಿಸಿದರು.

ರಕ್ತದಾನಿಗಳಿಗೆ ಹಣ್ಣು–ಹಂಪಲು ನೀಡಿ ಪ್ರೋತ್ಸಾಹಿಸಲಾಯಿತು.

ಸನ್ಮಾನ : ಗೋಣಿಕೊಪ್ಪದ ಸ್ವಚ್ಛತಾ ಸೇವಕಿ ಗೌರಿ ರಾಜ, ವೈದ್ಯಕೀಯ ಸೇವೆ ಮೂಲಕ ತುರ್ತು ಆರೋಗ್ಯಕ್ಕಾಗಿ ನೊಂದವರಿಗಾಗಿ ಮಿಡಿಯುತ್ತಿರುವ ಚೋಕಂಡ ಸಂಜು ಸುಬ್ಬಯ್ಯ, 59 ಬಾರಿ ರಕ್ತದಾನ ಮಾಡಿರುವ ರಕ್ತದಾನಿ ಕುಲ್ಲಚಂಡ ಪ್ರಮೋದ್ ಗಣಪತಿ, 38 ಬಾರಿ ರಕ್ತದಾನ ಮಾಡಿರುವ ರಕ್ತ ದಾನಿ ವಿ. ವಿ. ಅರುಣ್ ಕುಮಾರ್ ಹಾಗೂ ಆರೋಗ್ಯ ಸೇವೆ ನೀಡುತ್ತಿರುವ ಸಂತೋಷ್ ರೈ ಸನ್ಮಾನ ಸ್ವೀಕರಿಸಿದರು.

ಪ್ರಯಾಣಿಕನ ಬ್ಯಾಗ್‌ನಿಂದ 2.50 ಲಕ್ಷ ರೂ. ಕಳವು

ಕುಶಾಲನಗರ, ನ.29–ಬಸ್‌ಗೆ ಕಾಯುತ್ತಿದ್ದ ಪ್ರಯಾಣಿಕನ ಬ್ಯಾಗ್‌ನಿಂದ ರೂ.2.50 ಲಕ್ಷ ಕಳವು ಮಾಡಿರುವ ಘಟನೆ ಪಟ್ಟಣದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ನಡೆದಿದೆ.

ಪಿರಿಯಾಪಟ್ಟಣ ತಾಲೂಕಿನ ಹಾರ್ನಹಳ್ಳಿ ಹೋಬಳಿಯ ಚಿಕ್ಕಕಮರಹಳ್ಳಿ ಗ್ರಾಮದ ನಿವಾಸಿ ಸೋಮಶೇಖರ ಎಂಬವರೆ ಹಣ ಕಳೆದುಕೊಂಡಿರುವವರಾಗಿದ್ದಾರೆ. ಮೈಸೂರಿನ ಸಂಬಂಧಿಕರೊಬ್ಬರಿಗೆ ವಿವಾಹ ಸಂಬಂಧದ ವೆಚ್ಚಕ್ಕೆಂದು ನೀಡಲು ಸೋಮಶೇಖರ್ ಪಟ್ಟಣದ ಬ್ಯಾಂಕ್‌ನಿಂದ ರೂ. 9,5 ಲಕ್ಷ ಮತ್ತು ಮನೆಯಿಂದ ತಂದಿದ್ದ 50 ಸಾವಿರ ಒಟ್ಟು ರೂ. 10 ಲಕ್ಷ ಹಣವನ್ನು ಬ್ಯಾಗಿನಲ್ಲಿ ಹಾಕಿಕೊಂಡು ಗುರುವಾರ ಸಂಜೆ 6 ಗಂಟೆ ಸಮಯದಲ್ಲಿ ಇಲ್ಲಿನ ಸಾರಿಗೆ ಬಸ್ ನಿಲ್ದಾಣದಲ್ಲಿ ಬಸ್‌ಗಾಗಿ ಕಾಯುತ್ತಿದ್ದರು. ಈ ಸಂದರ್ಭದಲ್ಲಿಯೇ ಬ್ಯಾಗ್ ಅನ್ನು ಬ್ಲೇಡ್‌ನಿಂದ ಕತ್ತರಿಸಿ ರೂ. 2.5 ಲಕ್ಷದ ಒಂದು ಬಂಡಲ್ ಹಣ ಅಪಹರಿಸಿ ಪರಾರಿಯಾಗಿದ್ದಾರೆ. ಉಳಿದಂತೆ ರೂ. 7.5 ಲಕ್ಷ ಬ್ಯಾಗಿನಲ್ಲಿ ಉಳಿದಿದೆ.

ಈ ಬಗ್ಗೆ ಸೋಮಶೇಖರ್ ಟೌನ್ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ನಿಲ್ದಾಣದ ಸಿಸಿ ಕ್ಯಾಮರಾ ಪರಿಶೀಲನೆ ನಡೆಸಿ, ಆರೋಪಿ ಪತ್ತೆ ಕಾರ್ಯದಲ್ಲಿ ತೊಡಗಿದ್ದಾರೆ.

ಇಂದು ಅರೆಭಾಷೆ ಸಂಸ್ಕೃತಿ, ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪ್ರದಾನ

ಮಡಿಕೇರಿ, ನ.29– ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ವತಿಯಿಂದ ನ.30 ರ ಬೆಳಗ್ಗೆ 9.30 ಕ್ಕೆ ಅರೆಭಾಷೆ ಅಕಾಡೆಮಿ ಗೌರವ ಪ್ರಶಸ್ತಿ ಪ್ರದಾನ ಸಮಾರಂಭವು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯಲಿದೆ.

ಅರೆಭಾಷೆ ಸಾಹಿತ್ಯ ಮತ್ತು ಶೈಕ್ಷಣಿಕ ಸೇವೆ ಕ್ಷೇತ್ರದಲ್ಲಿ ಕೆ.ಆರ್ ಗಂಗಾಧರ, ಸಾಹಿತ್ಯ ಮತ್ತು ಪತ್ರಿಕೋದ್ಯಮ ಸೇವೆ ಕ್ಷೇತ್ರದಲ್ಲಿ ಯು.ಪಿ ಶಿವಾನಂದ, ಅರೆಭಾಷಿಕರ ಸಂಘಟನೆ ಮತ್ತು ಆಡಳಿತ ಸೇವೆ ಕ್ಷೇತ್ರದಲ್ಲಿ ಡಿ.ಎಸ್.ಆನಂದ ಅವರು 2024 ನೇ ವರ್ಷದ ಕರ್ನಾಟಕ ಅರೆಭಾಷೆ ಅಕಾಡೆಮಿ ಗೌರವ ಪ್ರಶಸ್ತಿ ಸ್ವೀಕರಿಸುವರು

ಮುಖ್ಯಮಂತ್ರಿ ಸಿದ್ಧರಾಮಯ್ಯ, ಸಭಾಧ್ಯಕ್ಷ ಡಾ.ಯು.ಟಿ. ಖಾದರ್, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ, ಕೇಂದ್ರ ಮಾಜಿ ಸಚಿವ ಡಿ.ವಿ. ಸದಾನಂದ ಗೌಡ, ಅಕಾಡೆಮಿ ಅಧ್ಯಕ್ಷ ಸದಾನಂದ ಮಾವಜಿ, ಶಾಸಕರಾದ ಎ.ಎಸ್. ಪೊನ್ನಣ್ಣ, ಡಾ.ಮಂತರ್ ಗೌಡ, ಉದಯ್ ಬಿ.ಗರುಡಾಚಾರ್, ಭಾಗೀರಥಿ ಮುರುಳ್ಯ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಪುರುಷೋತ್ತಮ ಬಿಳಿಮಲೆ, ಪಾಲ್ಗೊಳ್ಳಲಿದ್ದಾರೆ.

ಇಂದು ಉಚಿತ ಆರೋಗ್ಯ ತಪಾಸಣ ಶಿಬಿರ

ವಿರಾಜಪೇಟೆ: ಲಯನ್ಸ್ ಕ್ಲಬ್ ಮೈಸೂರು ನಾರಾಯಣ ಆಸ್ಪತ್ರೆ ಸಂಯುಕ್ತ ಆಶ್ರಯದಲ್ಲಿ ಇಲ್ಲಿಗೆ ಸಮೀಪದ ಬಿಟ್ಟಂಗಾಲದಲ್ಲಿರುವ ಕ್ರೆಡೋ–ನಾರಾಯಣ ಎಮರ್ಜೆನ್ಸಿ ಕೇರ್ ಸಭಾಂಗಣದಲ್ಲಿ ನ.30ರ ಭಾನುವಾರ ಬೆಳಿಗ್ಗೆ 10ರಿಂದ ಮಧ್ಯಾಹ್ನ 3 ಗಂಟೆವರೆಗೆ ಉಚಿತ ಆರೋಗ್ಯ ತಪಾಸಣ ಶಿಬಿರವನ್ನು ಏರ್ಪಡಿಸಲಾಗಿದೆ ಸಾರ್ವಜನಿಕರು ಇದರ ಸದುಪಯೋಗ ಪಡಿಸಿಕೊಳ್ಳುವಂತೆ ಲಯನ್ಸ್ ಕ್ಲಬ್ ಕಾರ್ಯದರ್ಶಿ ಪೌಲ್ ಜೇವಿಯರ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವೆಂಟ್ರನ್ಸ್ ಅಥ್ಲೆಟಿಕ್‌ನಲ್ಲಿ ಕೊಡಗಿಗೆ ಕೀರ್ತಿ ತಂದ ಕ್ರೀಡಾಪಟುಗಳು

ನಾಪೋಕ್ಲು, ನ.29–ಬಳ್ಳಾರಿಯ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ ರಾಜ್ಯಮಟ್ಟದ 45ನೇ ಅಥ್ಲೆಟಿಕ್ಸ್ ಕ್ರೀಡಾಕೂಟ ವೆಂಟ್ರನ್ಸ್ ಅಥ್ಲೆಟಿಕ್‌ನಲ್ಲಿ ಕೊಡಗಿನ ಕ್ರೀಡಾಪಟುಗಳು ಪಾಲ್ಗೊಂಡು ಜಿಲ್ಲೆಗೆ ಕೀರ್ತಿ ತಂದಿದ್ದಾರೆ.

ಈ ಕ್ರೀಡಾಕೂಟದಲ್ಲಿ ಜಿಲ್ಲೆಯಿಂದ 9 ಕ್ರೀಡಾಪಟುಗಳು ಸ್ಪರ್ಧಿಸಿ ಅತ್ಯುತ್ತಮ ಸಾಧನೆಯೊಂದಿಗೆ ಬಹುತೇಕ ಪದಕಗಳನ್ನು ಮುಡಿಗೇರಿಸಿಕೊಂಡು ಜಿಲ್ಲೆಗೆ ಕೀರ್ತಿ ತಂದಿದ್ದಾರೆ.

ನಾಂಗಾಲ ಬಿಟ್ಟಂಗಲ ಗ್ರಾಮದ ಚೇಮೀರ ಸೀತಮ್ಮ ಪ್ರೇಮ ಭಾರದ ಗುಂಡು ಎಸೆತದಲ್ಲಿ ಪ್ರಥಮ, ತಟ್ಟೆ ಎಸೆತದಲ್ಲಿ ಪ್ರಥಮ ಸ್ಥಾನ ಜಾವಲಿನ್ ಎಸೆತದಲ್ಲಿ ಪ್ರಥಮ ಸ್ಥಾನವನ್ನು ಹ್ಯಾಮರ್ ಎಸೆತದಲ್ಲಿ ಪ್ರಥಮ ಸ್ಥಾನವನ್ನು ಗಳಿಸಿದ್ದಾರೆ. ಬಾಳೆಲೆಯ ಕೊಟ್ಟಗೇರಿ ಗ್ರಾಮದ ಅರಮಣಮಾಡ ಮಮತಾ ಮನು ಭಾರದ ಗುಂಡು ಎಸೆತ,



ವಿಜೇತರಾದ ಕೊಡಗಿನ ಕ್ರೀಡಾಪಟುಗಳು.

ಜಾವಲಿನ್ ಎಸೆತದಲ್ಲಿ ಪ್ರಥಮ ಸ್ಥಾನವನ್ನು ಗಳಿಸಿದ್ದಾರೆ.

ಟಿ.ಶೆಟ್ಟಿಗೇರಿ ಪೆಮ್ಮಂಡ ಸಬಿತ ಕುಶಾಲಪ್ಪ ಡಿಸ್ಕಸ್ ಥ್ರೋ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಭಾರದ ಗುಂಡು ಎಸೆತ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಜಾವಲಿನ್ ಎಸೆತದಲ್ಲಿ ದ್ವಿತೀಯ ಸ್ಥಾನ ಗಳಿಸಿದ್ದಾರೆ. ಕುಶಾಲನಗರದ ಐಮೂಡಿಯಂಡ ಶೈಲಾ 100 ಮೀಟರ್ ಓಟದ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ, 1500 ಮೀಟರ್ ಓಟದ ಸ್ಪರ್ಧೆಯಲ್ಲಿ ಪ್ರಥಮ, ಉದ್ದ ಜಿಗಿತದಲ್ಲಿ ಪ್ರಥಮ ಸ್ಥಾನ ಗಳಿಸಿದ್ದಾರೆ.

ಪಟ್ಟಚೆರುವಂಡ ಗಗನ್ ಮೇದಪ್ಪ (ಜಿಮ್ಮ) 200 ಮೀಟರ್ ಓಟದ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ, ಉದ್ದ ಜಿಗಿತದಲ್ಲಿ ಪ್ರಥಮ ಸ್ಥಾನ, 100 ಮೀಟರ್ ಓಟದ ಅಡ್ಡಲ್ಸ್ ರನ್ನಿಂಗ್‌ನಲ್ಲಿ ಪ್ರಥಮ ಸ್ಥಾನ, ತಟ್ಟೆ ಎಸೆತದಲ್ಲಿ ಪ್ರಥಮ ಸ್ಥಾನ ಗಳಿಸಿದ್ದಾರೆ.

ಪಿರಿಯಾಪಟ್ಟಣ ತಾಲೂಕು ಕೋಮಲಾಪುರ ಗ್ರಾಮದ ಆಶಾ ಅನಂತಕುಮಾರ್ ಭಾರದ ಗುಂಡು ಎಸೆತದಲ್ಲಿ ಪ್ರಥಮ ಸ್ಥಾನ, ಹ್ಯಾಮರ್ ಥ್ರೋನಲ್ಲಿ ಪ್ರಥಮ ಸ್ಥಾನ ಗಳಿಸಿದ್ದಾರೆ.

ಮುಳ್ಳೆರ ಪೊನ್ನಮ್ಮ ಜಾವಲಿನ್ ಎಸೆತದಲ್ಲಿ ಪ್ರಥಮ ಸ್ಥಾನ, ಭಾರದ ಗುಂಡು ಎಸೆತದಲ್ಲಿ ಪ್ರಥಮ ಸ್ಥಾನ, 100 ಮೀಟರ್ ಓಟದ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಹಾಗೂ ತಟ್ಟೆ ಎಸೆತದಲ್ಲಿ ಪ್ರಥಮ ಸ್ಥಾನದೊಂದಿಗೆ ಚಿನ್ನದ ಪದಕ ಹಾಗೂ ಬೆಳ್ಳಿಯ ಪದಕವನ್ನು ಪಡೆದುಕೊಂಡಿದ್ದರೆ, ಬಿಟ್ಟಂಗಲ ಬಾಲುಗೋಡು ನಿವಾಸಿ ಶಾಂತಿ ಬೆಳ್ಳಿಯಪ್ಪ ಗುಂಡು ಎಸೆತ ಪ್ರಥಮ. ಜಾವಲಿನ್ ಎಸೆತದಲ್ಲಿ ದ್ವಿತೀಯ ಸ್ಥಾನ, ಹ್ಯಾಮರ್ ಎಸೆತ ತೃತೀಯ ಸ್ಥಾನ ಗಳಿಸಿದ್ದಾರೆ.

ಪಿವಿಗಳು ಕೊಡುವ ಪದವಿ ಬದುಕಿಗೆ ಮುಖ್ಯವಲ್ಲ

ಕೊಳ್ಳೇಗಾಲ, ನ.29–ವಿಜ್ಞಾನ ಕ್ಷೇತ್ರದಲ್ಲಿ ಬಂದೊದಗುವ ಸವಾಲುಗಳನ್ನು ಎದುರಿಸುವ ಮನೋಭಾವವನ್ನು ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕೆಂದು ಭಾರತೀಯ ಬಾಹ್ಯಕಾಶ ಸಂಶೋಧನಾ ಸಂಸ್ಥೆಯ ವಿಶ್ರಾಂತ ಅಧ್ಯಕ್ಷ ಡಾ. ಸೋಮನಾಥ್ ತಿಳಿಸಿದ್ದಾರೆ.

ಪಟ್ಟಣದ ಮಾನಸ ಶಿಕ್ಷಣ ಸಂಸ್ಥೆಯಲ್ಲಿ ಆಯೋಜಿಸಲಾಗಿದ್ದ ಸಮಾರಂಭದಲ್ಲಿ 2025 ಸಾಲಿನ ಮಾನಸ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಅವರು, ಎಲೆಕ್ಟ್ರಾನಿಕ್ ಮೆಕಾನಿಕ್, ಕಂಪ್ಯೂಟರ್ ಸೈನ್ಸ್, ಸಿವಿಲ್ ಇಂಜಿನಿಯರ್ ವಿಭಾಗದಲ್ಲಿ ಡಿಜಿಟಲೀಕರಣವನ್ನು ಹೆಚ್ಚಾಗಿ ಬಳಸಬೇಕು, ವಿಶ್ವವಿದ್ಯಾನಿಲಯಗಳು ಕೊಡುವ ಪದವಿ ಮುಖ್ಯವಲ್ಲ ನಾವು ನಮ್ಮ ಕೆಲಸದಲ್ಲಿ ಹೊಂದುವ ಕೌಶಲ್ಯ, ಸಾಮರ್ಥ್ಯ, ನಾಯಕತ್ವದ ಗುಣ ಮುಖ್ಯ ಎಂದರು.

ಶಿಕ್ಷಣ ಸಂಸ್ಥೆಯಲ್ಲಿ ನೂತನವಾಗಿ ನಿರ್ಮಾಣವಾಗಿರುವ ಕಂಪ್ಯೂಟರ್ ಲ್ಯಾಬನ್ನು ಸಾಲೂರು ಮಠಾಧ್ಯಕ್ಷ ಶ್ರೀ ಶಾಂತ ಮಲ್ಲಿಕಾರ್ಜುನ ಸ್ವಾಮಿಗಳು ಉದ್ಘಾಟಿಸಿ, ನಾವು ಜಗತ್ತಿಗೆ ಏನಾದರೂ ಕೊಡುಗೆ ನೀಡಬೇಕಾದರೆ ಶಿಕ್ಷಣ ಮತ್ತು ಸಂಸ್ಕಾರದಿಂದ ಮಾತ್ರ ಸಾಧ್ಯ. ಒಂದು ನಾಣ್ಯಕ್ಕೆ ಎರಡು ಮುಖಗಳಿದ್ದ ಹಾಗೆ ಡಾ. ಎಸ್.ದತ್ತೇಶ್ ಹಾಗೂ ನಾಗರಾಜು ಈ ಸಂಸ್ಥೆ ಕಣ್ಣುಗಳಾಗಿ ಶಿಕ್ಷಣದ ಜೊತೆಗೆ ಸಂಸ್ಕಾರವನ್ನೂ ಸಹ ವಿದ್ಯಾರ್ಥಿಗಳಿಗೆ ನೀಡುತ್ತಿರುವುದು ಹೆಮ್ಮೆಯ ಸಂಗತಿ ಎಂದು ತಿಳಿಸಿದರು.



ಮಾನಸ ಶಿಕ್ಷಣ ಸಂಸ್ಥೆಯಲ್ಲಿ ನಡೆದ ಸಮಾರಂಭ ದಲ್ಲಿ ಡಾ.ಸೋಮನಾಥ್ ಅವರಿಗೆ 2025 ಸಾಲಿನ ಮಾನಸ ಪ್ರಶಸ್ತಿ ನೀಡಿ ಗೌರವಿಸಿತು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಕವಿತಾ ಮಾತನಾಡಿ, ಪ್ರತಿಯೊಬ್ಬ ವ್ಯಕ್ತಿಯ ಜೀವನಕ್ಕೆ ಮಹತ್ವವನ್ನು ನೀಡುವಂತಹ ಶಿಕ್ಷಣವನ್ನು 30 ವರ್ಷಗಳಿಂದ ಈ ಸಂಸ್ಥೆ ನೀಡುತ್ತಾ ಬಂದಿದೆ ಎಂದು ಶ್ಲಾಘಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಹಿರಿಯ ಪತ್ರಕರ್ತ ಅಂಶಿಪ್ರಸನ್ನ ಕುಮಾರ್ ಮಾತನಾಡಿ ಅಬ್ದುಲ್ ಕಲಾಂ, ಸರ್ ಸಿ.ವಿ.ರಾಮನ್ ವಿಕ್ರಂ ಸಾರಾಬಾಯಿರವರ ಸಾಲಿನಲ್ಲಿ ಡಾ. ಸೋಮನಾಥ್ ನಿಲ್ಲುತ್ತಾರೆ ಚಂದ್ರಯಾನ 3ರ ಯಶಸ್ವಿ ರೂವಾರಿ ಡಾ. ಸೋಮನಾಥ್ ರವರನ್ನು ಮಾನಸ ಶಿಕ್ಷಣ ಸಂಸ್ಥೆ 2025 ಸಾಲಿನ ಮಾನಸ ಪ್ರಶಸ್ತಿ ನೀಡಿ ಗೌರವಿಸಿದೆ. ಪ್ರಶಸ್ತಿ ಪುರಸ್ಕೃತರ ಜೀವನ ಸಾಧನೆ ವಿದ್ಯಾರ್ಥಿಗಳಿಗೆ ಸ್ಫೂರ್ತಿಯಾಗಬೇಕು ಮತ್ತು ದಾರಿದೀಪವಾಗಬೇಕು ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಮಂಜುಳಾ, ವೃತ್ತ ನಿರೀಕ್ಷಕ ಶಿವಮಾದಯ್ಯ, ಮೈವಿವಿ ಪ್ರಾಚ್ಯ ವಿದ್ಯಾ ಸಂಶೋಧನಾಲಯದ ವಿಶ್ರಾಂತ ನಿರ್ದೇಶಕ ಡಾ.ಶಿವರಾಜಪ್ಪ, ಮಾನಸ ಸಂಸ್ಥೆ ಅಧ್ಯಕ್ಷ ನಾಗರಾಜು, ಸಂಸ್ಥಾಪಕ ಕಾರ್ಯದರ್ಶಿ ಡಾ.ದತ್ತೇಶ್ ಕುಮಾರ್, ನಾಗಭೂಷಣ್, ಡಾ.ಚನ್ನಶೆಟ್ಟಿ, ಕೃಷ್ಣೆಗೌಡ, ಡಾ. ಧನಂಜಯ್, ಶಂಕರ್, ನಯನ, ಮಾನಸ ಬಾಬು ಇದ್ದರು.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವಿರುದ್ಧ ಗ್ರಾಮಸ್ಥರು, ರೈತ ಮುಖಂಡರ ಪ್ರತಿಭಟನೆ

ಚಾಮರಾಜನಗರ, ನ.29–ತಾಲೂಕಿನ ಬದನಗುಪ್ಪೆ, ಪಣ್ಯದಹುಂಡಿ, ಮುತ್ತಿಗೆ ಗ್ರಾಮಗಳ ವ್ಯಾಪ್ತಿಯಲ್ಲಿ ರೈಲ್ವೆ ಮೇಲ್ಸೇತುವೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಿರುವ ಭೂಮಿಯ ಪರಿಹಾರದ ಹಣವನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ಅವೈಜ್ಞಾನಿಕವಾಗಿ ನೀಡಲಾಗುತ್ತಿದೆ ಎಂದು ಆರೋಪಿಸಿ ತಾಲೂಕಿನ ಪಣ್ಯದಹುಂಡಿ ಗ್ರಾಮದಲ್ಲಿ ಗ್ರಾಮಸ್ಥರು ಹಾಗೂ ರೈತ ಮುಖಂಡರು ಪ್ರತಿಭಟನೆ ನಡೆಸಿದರು.

ರೈಲ್ವೆ ಮೇಲ್ಸೇತುವೆ ನಿರ್ಮಾಣಕ್ಕಾಗಿ ಉದ್ದೇಶಿಸಿರುವ ಭೂಮಿಯಲ್ಲಿನ ಕಟ್ಟಡಗಳನ್ನು ತೆರವುಗೊಳಿಸಲು ಶುಕ್ರವಾರ ಪಣ್ಯದಹುಂಡಿ, ಬದನಗುಪ್ಪೆ ಗ್ರಾಮಕ್ಕೆ ಪ್ರಾಧಿಕಾರದ ಅಧಿಕಾರಿಗಳು ಹಾಗೂ ಸಿಬ್ಬಂದಿ ಜೆಸಿಬಿಯೊಂದಿಗೆ ಬಂದು ಕಾರ್ಯಾಚರಣೆ ಆರಂಭಿಸಲು ಮುಂದಾದಾಗ ಗ್ರಾಮಸ್ಥರು ಹಾಗೂ ರೈತರು ಮಧ್ಯೆ ಪ್ರವೇಶಿಸಿ, ಹೊಸ ಡಿಪಿಆರ್ ರಚಿಸಬೇಕು, ಸೂಕ್ತ ಪರಿಹಾರ ಘೋಷಣೆ ಮಾಡುವವರೆಗೂ ಯೋಜನೆ ಸಂಬಂಧ ಯಾವುದೇ ತೆರವು ಹಾಗೂ ಕಾಮಗಾರಿ ಮಾಡಬಾರದು ಎಂದು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡು ದಿಢೀರ್ ಪ್ರತಿಭಟನೆ ನಡೆಸಿದರು.

ಪರಿಹಾರದಲ್ಲಿ ತಾರತಮ್ಯ: ಜಿಲ್ಲಾ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಕುಮಾರ್ ಮಾತನಾಡಿ, ಬದನಗುಪ್ಪೆ ಪಣ್ಯದಹುಂಡಿ, ಮುತ್ತಿಗೆ ಗ್ರಾಮಗಳಲ್ಲಿ ಸುಮಾರು 1.68 ಕಿ.ಮೀ. ಉದ್ದ ನೂತನ ರೈಲ್ವೆ ಮೇಲ್ಸೇತುವೆ ನಿರ್ಮಾಣಕ್ಕೆ ರಾಷ್ಟ್ರೀಯ ಹೆದ್ದಾರಿ



ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವಿರುದ್ಧ ಪಣ್ಯದಹುಂಡಿ ಗ್ರಾಮಸ್ಥರು, ರೈತ ಮುಖಂಡರು ಪ್ರತಿಭಟನೆ ನಡೆಸಿದರು.

ಪ್ರಾಧಿಕಾರದಿಂದ 37ಕ್ಕೂ ಹೆಚ್ಚು ರೈತರ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಮುಂದಾಗಿದೆ. ಆದರೆ, ಈ ಬಗ್ಗೆ ಎಲ್ಲಾ ರೈತರಿಗೂ ಸಮರ್ಪಕವಾದ ಮಾಹಿತಿ ನೀಡಿಲ್ಲ. ಅಲ್ಲದೇ ಬದನಗುಪ್ಪೆ ಎಲ್ಲೆಗೆ ಸೇರಿದ ಜಮೀನಿನ ಒಂದು ಗುಂಟೆಗೆ 7 ಲಕ್ಷ ರೂ ಹಾಗೂ ಪಣ್ಯದಹುಂಡಿ, ಮುತ್ತಿಗೆ ಗ್ರಾಮದ ಎಲ್ಲೆಗೆ ಸೇರಿದ ಜಮೀನುಗಳಿಗೆ ಕೇವಲ 1.30 ಲಕ್ಷ ರೂ. ಪರಿಹಾರ ನಿಗದಿಪಡಿಸುವ ಮೂಲಕ ತಾರತಮ್ಯ ಮಾಡಲಾಗುತ್ತಿದೆ ಎಂದು ದೂರಿದರು.

ಮೇಲ್ಸೇತುವೆ ನಿರ್ಮಾಣ ಕಾಮಗಾರಿಯು ಸಂಪೂರ್ಣವಾಗಿ ಅವೈಜ್ಞಾನಿಕವಾಗಿದೆ. ಯೋಜನೆಯ ಡಿಪಿಆರ್‌ನಲ್ಲಿ ಪಣ್ಯದಹುಂಡಿ ಗ್ರಾಮದ ಬಸ್ ನಿಲ್ದಾಣವೇ ಇಲ್ಲ. ಇದರಿಂದ ಪಣ್ಯದಹುಂಡಿ ಗ್ರಾಮಕ್ಕೆ ಸಂಪರ್ಕವೇ ಕಡಿತವಾಗುವ ಸಾಧ್ಯತೆಯಿದ್ದು ಸುತ್ತಮುತ್ತಲಿನ ಗ್ರಾಮಸ್ಥರಿಗೆ ತೊಂದರೆಯಾಗಲಿದೆ ಎಂದರು.

ಗ್ರಾಮದಲ್ಲಿ ಗುಂಟೆಗೆ 14 ರಿಂದ 15 ಲಕ್ಷ ರೂಗಳ ಮೌಲ್ಯವಿದ್ದು, ಪ್ರಾಧಿಕಾರವು ಅಷ್ಟೇ ಪ್ರಮಾಣದ ಪರಿಹಾರವನ್ನು ನೀಡಬೇಕು. ಅಲ್ಲದೇ ಯೋಜನೆಗಾಗಿ ಎಷ್ಟು ಎಕರೆ ಭೂಮಿಯನ್ನು ವಶಪಡಿಸಿಕೊಳ್ಳಲಾಗುತ್ತಿದೆ ಎಂಬುದರ ಮಾಹಿತಿಯನ್ನು ಗ್ರಾಮಸ್ಥರಿಗೆ ನೀಡಬೇಕು. ಪ್ರಸ್ತುತ ರಚಿಸಿರುವ ಡಿಪಿಆರ್ ಅನ್ನು ತೆಗೆದುಹಾಕಿ ಹೊಸ ಡಿಪಿಆರ್ ರಚಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಮುಖಂಡರಾದ ವೇಲಾಜಿಪುರದ ಚನ್ನಮಲ್ಲಪ್ಪ (ಮಲ್ಲೇಶ್), ಪಣ್ಯದಹುಂಡಿ ಶಿವಲಿಂಗೇಗೌಡ, ಅಶೋಕ್, ಸಂತೋಷ್, ವಿಜಿಕುಮಾರ್, ಮಹೇಶ್, ಮೋಹನ್, ಮಾದೇಶ್, ನಟರಾಜು, ನಾಗರಾಜುಮೂರ್ತಿ, ರವಿ, ಸೇರಿದಂತೆ ಪಣ್ಯದಹುಂಡಿ, ಬದನಗುಪ್ಪೆ ಮುತ್ತಿಗೆ ಗ್ರಾಮಸ್ಥರು ಹಾಗೂ ಇತರರು ಇದ್ದರು.

ಹಿಂದೂ ಜಾಗೃತಿ ಸಮಿತಿಯಿಂದ ರಾಜ್ಯೋತ್ಸವ



ಹಿಂದೂ ಜಾಗೃತಿ ಸಮಿತಿಯಿಂದ ಭುವನೇಶ್ವರಿಗೆ ಪುಷ್ಪಾರ್ಚಣೆ ಮಾಡಿ ಕನ್ನಡ ರಾಜ್ಯೋತ್ಸವ ನಡೆಸಲಾಯಿತು. ಕೃಷ್ಣಪ್ಪ, ದರ್ಶನ್, ಅರ್ಚಕ ರಾಮಚಂದ್ರ, ಸುರೇಶ್ ನಾಯಕ, ಮೂಡ್ಲುಪುರ ನಂದೀಶ್, ಟಿ.ಗುರು, ಶಿವು ವಿರಾಟ್, ಶಿವರಾಜ್ ಇದ್ದರು.

ಉಪಲೋಕಾಯುಕ್ತರಿಂದ 47 ಅರ್ಜಿಗಳ ಇತ್ಯರ್ಥ

ಚಾಮರಾಜನಗರ: ರಾಜ್ಯ ಉಪಲೋಕಾಯುಕ್ತ ಕೆ.ಎನ್.ಫಣೀಂದ್ರ ಅವರು ಸಾರ್ವಜನಿಕರಿಂದ ಬಂದ 65 ದೂರು ಅರ್ಜಿಗಳ ಪೈಕಿ 47 ಅರ್ಜಿಗಳನ್ನು ಸ್ಥಳದಲ್ಲೇ ಇತ್ಯರ್ಥಪಡಿಸಿದರು.

ನಗರದ ಜಿಲ್ಲಾ ಕೆಡಿಪಿ ಸಭಾಂಗಣದಲ್ಲಿ ಶುಕ್ರವಾರ ಬೆಳಿಗ್ಗೆ 9.30ರಿಂದ ರಾತ್ರಿ 8 ಗಂಟೆಯವರೆಗೆ ವಿಚಾರಣೆಗೆ ಬಾಕಿಯಿದ್ದ 65 ಅರ್ಜಿಗಳ ವಿಚಾರಣೆಯನ್ನು ಕೈಗೆತ್ತಿಕೊಂಡು 47 ಅರ್ಜಿಗಳನ್ನು ಸ್ಥಳದಲ್ಲೇ ಇತ್ಯರ್ಥಗೊಳಿಸಿದರು. 4 ಮಂದಿ ಅರ್ಜಿದಾರರು ಗೈರು ಹಾಜರಾಗಿದ್ದು, 14 ಅರ್ಜಿಗಳನ್ನು ವಿವಿಧ ಕಾರಣಗಳಿಂದಾಗಿ ಮುಂದಿನ ವಿಚಾರಣೆಗೆ ಕಾಯ್ದಿರಿಸಿದರು. 5 ಸ್ವಯಂ ಪ್ರೇರಿತ ದೂರುಗಳನ್ನು ದಾಖಲಿಸಲು ಉಪಲೋಕಾಯುಕ್ತರು ನಿರ್ದೇಶಿಸಿ ಸಾರ್ವಜನಿಕ ದೂರುಗಳ ನಿವಾರಣೆಗೆ ಕಾನೂನಾತ್ಮಕ ಪರಿಹಾರಗಳನ್ನು ಒದಗಿಸುವ ಬಗ್ಗೆ ವಿವಿಧ ಇಲಾಖೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಕೆಲವು ಪ್ರಕರಣಗಳಿಗೆ ಸಂಬಂಧಿಸಿದಂತೆ ಇತ್ಯರ್ಥಕ್ಕೆ ಕಾಲಮಿತಿಯನ್ನು ನಿಗದಿಪಡಿಸಿದರು.

ಹಸಿದವರಿಗೆ ಅನ್ನ ಕೊಡುವುದು ಪುಣ್ಯದ ಕೆಲಸ



ಶಿವು ಜನಸ್ನೇಹಿ ಟ್ರಸ್ಟ್‌ನ ಅಕ್ಷಯ ಜೋಳಿಗೆ ಕಾರ್ಯಕ್ರಮಕ್ಕೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಚಾಲನೆ ನೀಡಿದರು. ಮರಿಯಾಲ ಶ್ರೀಗಳು ಹಾಜರಿದ್ದರು.

ಚಾಮರಾಜನಗರ, ನ.29–ಹಸಿದವರಿಗೆ ಅನ್ನ ಕೊಡುವುದು ಒಂದು ಪುಣ್ಯದ ಕೆಲಸವಾಗಿದೆ ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ಹೇಳಿದರು.

ನಗರದ ಶ್ರೀಚಾಮರಾಜೇಶ್ವರ ದೇವಸ್ಥಾನದ ಮುಂಭಾಗದಲ್ಲಿ ಶಿವು ಜನಸ್ನೇಹಿ ಟ್ರಸ್ಟ್ ಅಕ್ಷಯ ಜೋಳಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಶಿವು ಜನಸ್ನೇಹಿ ಟ್ರಸ್ಟ್ ಅಕ್ಷಯ ಜೋಳಿಗೆ ಕಾರ್ಯಕ್ರಮ ಜನೋಪಯೋಗಿ ಕಾರ್ಯಕ್ರಮವಾಗಿದೆ ಎಂದು ಪ್ರಶಂಸಿಸಿದರು.

ಕಾರ್ಯಕ್ರಮದ ಸಾನಿಧ್ಯ ವಹಿಸಿದ್ದ ಮರಿಯಾಲ ಶ್ರೀ ಇಮ್ಮಡಿ ಮುರುಘರಾಜೇಂದ್ರ ಸ್ವಾಮೀಜಿ ಮಾತನಾಡಿ, ಮಾನವನಿಂದ ಹಿಡಿದು ಪ್ರಾಣಿ, ಪಕ್ಷಿ ಸಂಕುಲ ಸೇರಿದಂತೆ ಎಲ್ಲದಕ್ಕೂ ಆಹಾರದ ಅಗತ್ಯವಿದೆ. ಆಹಾರ ಇಲ್ಲದೆ ನಿರ್ಗತಿಕರ ಸಂಖ್ಯೆ ಹೆಚ್ಚಿರುವಾಗ ಕಲ್ಯಾಣ ಮಂಟಪ, ದೇವಾಲಯಗಳಲ್ಲಿ ಆಹಾರಗಳನ್ನು ಯಥೇಚ್ಛವಾಗಿ ಹಾಳಾಗುತ್ತಿದೆ. ಎಷ್ಟೋ ಮಂದಿ ಆಹಾರವನ್ನು ಸುರಿಯುತ್ತಾರೆ, ಚೆಲ್ಲುತ್ತಾರೆ ಇದನ್ನು ಮನಗಂಡು ಶಿವು ಅಕ್ಷಯ ಜೋಳಿಗೆ ಹಮ್ಮಿಕೊಂಡಿರುವ ಕಾರ್ಯಕ್ರಮ ಯಶ್ವಸಿಯಾಗಲಿ ಎಂದು ಶುಭ ಕೋರಿದರು.

ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ಕನಿಷ್ಠ ವೇತನಾ ಸಲಹಾ ಸಮಿತಿ ಮಾಜಿ ಅಧ್ಯಕ್ಷ ಉಮೇಶ್ ಎಸ್‌ಪಿಕೆ, ಜಿಲ್ಲಾ ಕುರುಬರ ಸಂಘದ ಅಧ್ಯಕ್ಷ ನಂಜೇಗೌಡ, ಕನಕ ನೌಕರರ ಸಂಘದ ಅಧ್ಯಕ್ಷ ನಿಂಗೇಗೌಡ, ಉದ್ಯಮಿ ಶ್ರೀನಿಧಿ ಕುಂದರ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಪ್ರದೇಶ ಕುರುಬರ ಸಂಘದ ಹಿರಿಯ ಉಪಾಧ್ಯಕ್ಷೆ ರಾಜೇಶ್ವರಿ ಸ್ವಾಮಿ, ಚಾ.ರಂ. ಶ್ರೀನಿವಾಸಗೌಡ, ಕೆಡಿಪಿ ಸದಸ್ಯ ಸೈದಯ್ ಮುಸಾಯಿಬ್, ಎಂ.ರಮೇಶ್ ಪ್ರಭು, ವಕೀಲ ನಾಗಾರ್ಜುನ ಪೃಥ್ವಿ, ಮಹೇಶ್, ಡಾ.ವಿ.ಜಿ.ಸಾಗರ್, ಉಮ್ಮತ್ತೂರು ಚಂದ್ರು, ಕರ್ನಾಟಕ ರಾಜ್ಯ ಭೀಮ್ ಸೇನೆ ಜಿಲ್ಲಾಧ್ಯಕ್ಷ ಸತೀಶ್ ಹೆಗ್ಗೋಠಾರ ಇತರರಿದ್ದರು.

ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ



ಪೂಜ್ಯ ವಿರೇಂದ್ರ ಹೆಗ್ಗಡೆಯವರ ಹುಟ್ಟುಹಬ್ಬದ ಪ್ರಯುಕ್ತ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆಯನ್ನು ಶ್ರೀ ಬಸವರಾಜ ಸ್ವಾಮೀಜಿ ಉದ್ಘಾಟಿಸಿದರು.

ಯಳಂದೂರು,ನ.29(ವಿ.ನಾಗರಾಜು)–ತಾಲೂಕಿನ ಗುಂಬಳ್ಳಿ ವಲಯದಲ್ಲಿ ಪೂಜ್ಯ ವಿರೇಂದ್ರ ಹೆಗ್ಗಡೆಯವರ ಹುಟ್ಟುಹಬ್ಬದ ಪ್ರಯುಕ್ತ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ ಹಮ್ಮಿಕೊಂಡಿತ್ತು.

ಕಾರಾಪುರ ವಿರಕ್ತಮಠದ ನಿ.ಪ್ರ.ಸ್ವ ಶ್ರೀ ಬಸವರಾಜ ಸ್ವಾಮಿಗಳು ಒಡೆಯರ್, ತಹಸೀಲ್ದಾರ್ ಶ್ರೀಮತಿ ಎಸ್.ಎಲ್ ನಯನ ಕಾರ್ಯಕ್ರಮ ಉದ್ಘಾಟಿಸಿದರು. ಸಾಮೂಹಿಕ ಶ್ರೀ ಸತ್ಯನಾರಾಯಣ ಸಮಿತಿಯ ಅಧ್ಯಕ್ಷ ಕಾಳೇಗೌಡ್ರು, ತಾಲೂಕಿನ ಯೋಜನಾಧಿಕಾರಿ ಆನಂದ್‌ಗೌಡ, ಶ್ರೀ ಜನ ಜಾಗೃತಿ ವೇದಿಕೆ ಸದಸ್ಯ ಆರ್. ವೆಂಕಟರಂಗಯ್ಯ 1912 ನೇ ಮದ್ಯವರ್ಜನ ಶಿಬಿರ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ಡಿ.ಸಿ. ಬಾಬು ಉಪಸ್ಥಿತರಿದ್ದರು.

ಮೈಸೂರು ಮಿತ್ರ
ಭಾನುವಾರ 30–11–2025

ವಾರದ ಮಿತ್ರ
ಸಾಪ್ತಾಹಿಕ ಪುರವಣಿ



ನಮ್ಮಲ್ಲೇ ಚಿನ್ನ!

ಬಾಪುಲಿಂಗರಾಜ್ ಅರಸ್

ನಮ್ಮ ಸುತ್ತಮುತ್ತಲೇ ಚಿನ್ನವಿದೆ! ಆಶ್ಚರ್ಯವಾಗುತ್ತಾ! ನಿಜ... ನಿಜ... ಚಾಮರಾಜನಗರ ಹಾಗೂ ಮಂಡ್ಯದಲ್ಲಿ ಚಿನ್ನದ ನಿಕ್ಷೇಪವನ್ನು ಭಾರತೀಯ ಭೂ ವೈಜ್ಞಾನಿಕ ಸರ್ವೇಕ್ಷಣಾ ಸಂಸ್ಥೆ ಪತ್ತೆ ಮಾಡಿದೆ. ಭಾರತದ ಭೌಗೋಳಿಕ ನಕ್ಷೆಯಲ್ಲಿ ಮಿನರಲ್ ಅಂಶಗಳನ್ನು ಪತ್ತೆ ಮಾಡುವ ವೇಳೆ ಮಿನರಲೈಸೇಷನ್ ಮ್ಯಾಪ್‌ನಲ್ಲಿ ಚಾಮರಾಜನಗರ ಹಾಗೂ ಮಂಡ್ಯದಲ್ಲಿ ಚಿನ್ನದ ನಿಕ್ಷೇಪ ಇರುವುದು ಪತ್ತೆಯಾಗಿದೆ. ಈ ವಿಚಾರವನ್ನು ಕೇಂದ್ರ ಸರ್ಕಾರ ಅಧಿಕೃತವಾಗಿ ಪ್ರಕಟಿಸಿದೆ.

ಚಾಮರಾಜನಗರ ಜಿಲ್ಲೆ ಹನೂರು ತಾಲೂಕಿನ ಅಜ್ಜಿಪುರ, ಕೌದಳ್ಳಿ ಹಾಗೂ ದೊಡ್ಡ ಆಲತ್ತೂರು ಗ್ರಾಮದಲ್ಲಿ ಚಿನ್ನದ ನಿಕ್ಷೇಪ ಪತ್ತೆಯಾಗಿದೆ. ಈ ಹಿನ್ನೆಲೆಯಲ್ಲಿ ಭಾರತೀಯ ಭೂ ವೈಜ್ಞಾನಿಕ ಸರ್ವೇಕ್ಷಣಾ ಸಂಸ್ಥೆಯ ಹಿರಿಯ ಭೂ ವಿಜ್ಞಾನಿಗಳಾದ ಒಡಿಸ್ಸಾದ ಸೌಭಾಗ್ಯಲಕ್ಷ್ಮಿ ಸಾಬು ಹಾಗೂ ಅಯಾನ್ಸು ನೇತತ್ವದ ತಂಡ ಚಿನ್ನದ ನಿಕ್ಷೇಪ ಪತ್ತೆಯಾಗಿರುವ ಅಜ್ಜಿಪುರ, ಕೌದಳ್ಳಿ ಹಾಗೂ ದೊಡ್ಡ ಆಲತ್ತೂರು ಗ್ರಾಮಕ್ಕೆ ಭೇಟಿ ನೀಡಿದ್ದಾರೆ.

ಈ ಮೂರು ಗ್ರಾಮಗಳಲ್ಲಿ ಖುದ್ದು ಪರಿಶೀಲನೆ ನಡೆಸಿ ಚಿನ್ನದ ನಿಕ್ಷೇಪದ ಬಗ್ಗೆ ವೈಜ್ಞಾನಿಕ ಉಪಕರಣಗಳ ಮೂಲಕ ಶೋಧ ನಡೆಸಿದ್ದಾರೆ. ಈ ಮೂಲಕ ಈ ಮೂರು ಗ್ರಾಮಗಳಲ್ಲಿ ಚಿನ್ನದ ನಿಕ್ಷೇಪ ಇರುವುದು ಖಚಿತವಾಗಿದೆ.

ರಾಜ್ಯ ಸರ್ಕಾರ ಹಾಗೂ ರಾಷ್ಟ್ರೀಯ ಖನಿಜ ಅನ್ವೇಷಣಾ ಟ್ರಸ್ಟ್ (ಎನ್‌ಎಂಇಟಿ) ಅನ್ವೇಷಣಾ ಕಾರ್ಯಕ್ಕೆ ಹಣಕಾಸಿನ ನೆರವು ನೀಡುತ್ತಿದೆ. ಕುದುರೆಮುಖ ಕಬ್ಬಿಣದ ಅದಿರು ಕಂಪನಿ ಲಿಮಿಟೆಡ್ ಹಾಗೂ ಮಿನರಲ್ ಎಕ್ಸ್‌ಪ್ಲೋರೇಷನ್ ಅಂಡ್ ಕನ್ಸಲ್ಟೆನ್ಸಿ ಲಿಮಿಟೆಡ್ ಅನ್ವೇಷಣಾ ಕಾರ್ಯದಲ್ಲಿ ಭಾಗಿಯಾಗಲಿವೆ.

ಈಗ ಪ್ರಾಥಮಿಕ ಹಂತದಲ್ಲಿ ಅನ್ವೇಷಣಾ ಕಾರ್ಯ ನಡೆಸಿದ್ದು, ಚಿನ್ನದ ನಿಕ್ಷೇಪ ಇರುವುದು ಪತ್ತೆಯಾಗಿದೆ. ಇದಾದ ನಂತರ ಚಿನ್ನದ ನಿಕ್ಷೇಪವಿರುವ ಕೋರ್ ಏರಿಯಾದಲ್ಲಿ ಎಷ್ಟು ಟನ್ ಚಿನ್ನ ಸಿಗುತ್ತದೆ ಹಾಗೂ ಯಾವ ಗ್ರೇಡ್ ಚಿನ್ನ ದೊರೆಯುತ್ತದೆ ಎಂದು ತಿಳಿಯಲಿದೆ. ನಂತರ ಅನ್ವೇಷಣಾ ಕಾರ್ಯದಲ್ಲಿ ಇನ್ನೂ ಬಹಳಷ್ಟು ಮಾಹಿತಿಗಳು ಸ್ಪಷ್ಟವಾಗಲಿವೆ.

ಒಟ್ಟು ನಾಲ್ಕು ಹಂತಗಳಲ್ಲಿ ಚಿನ್ನದ ಶೋಧ ಕಾರ್ಯಾಚರಣೆ ನಡೆಯಲಿದೆ. ಮೊದಲು ವಿಶಾಲವಾದ ಪ್ರದೇಶದಲ್ಲಿ ವಿಚಕ್ಷಣಾ ಸಮೀಕ್ಷೆ ನಡೆಸಿ ಸ್ಯಾಂಪಲ್ ಟೆಸ್ಟ್ ಮಾಡಲಾಗುವುದು, ತರುವಾಯ ಪ್ರಾಥಮಿಕ ಹಾಗೂ ಸಾಮಾನ್ಯ ಅನ್ವೇಷಣೆಯ ಇಂತಿಷ್ಟೆ ಕಿಲೋಮೀಟರ್‌ಗಳೆಂದು ಸೀಮಿತ ರೇಖೆ ಗುರುತಿಸಲಾಗುವುದು, ನಂತರ ಚಿನ್ನದ ಅದಿರು ಇಷ್ಟು ಇರಬಹುದು ಎಂದು ನಂತರ ಅಂದಾಜಿಸಬಹುದು.

ಮಂಡ್ಯ, ಚಾಮರಾಜನಗರ ಸೇರಿದಂತೆ ಇತರ ಜಿಲ್ಲೆಯ 16,500 ಹೆಕ್ಟೇರ್ ಪ್ರದೇಶದಲ್ಲಿ ಶೋಧ ಕಾರ್ಯ ನಡೆಯಲಿದೆ. ಈ ಎಲ್ಲಾ ಕಾರ್ಯಗಳ ಪೂರ್ಣಗೊಳ್ಳಲು ಕನಿಷ್ಠ ಎರಡು ವರ್ಷ ಕಾಲಾವಕಾಶ ಬೇಕು. ಚಾಮರಾಜನಗರದ ಮೂರು ಗ್ರಾಮಗಳಲ್ಲಿ ಚಿನ್ನದ ನಿಕ್ಷೇಪದ ಬಗ್ಗೆ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಹಿರಿಯ ಭೂ ವಿಜ್ಞಾನಿಗಳು ಅಧಿಕೃತ ಮಾಹಿತಿ ನೀಡಿದ್ದಾರೆ. ಆದರೆ ಮಂಡ್ಯ ಜಿಲ್ಲೆಯ ಯಾವ ಭಾಗದಲ್ಲಿ ಚಿನ್ನದ ನಿಕ್ಷೇಪ ಪತ್ತೆಯಾಗಿದೆ ಎಂಬ ಬಗ್ಗೆ ಮಾಹಿತಿ ಸಂಗ್ರಹಿಸಲು ಆ ಜಿಲ್ಲೆಯ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಅಧಿಕಾರಿಗಳು ಲಭ್ಯವಾಗಿಲ್ಲ. ಆದರೆ ಕೇಂದ್ರ ಸರ್ಕಾರವಂತೂ ಮಂಡ್ಯದಲ್ಲಿ ಕೂಡ ಚಿನ್ನದ ನಿಕ್ಷೇಪವಿರುವುದನ್ನು ಖಚಿತಪಡಿಸಿದೆ.


ಚಿನ್ನದ ನಿಕ್ಷೇಪ ಪತ್ತೆಯಾಗಿರುವ ಚಾಮರಾಜನಗರ ಜಿಲ್ಲೆ ಹನೂರು ತಾಲೂಕಿನ ಅಜ್ಜಿಪುರ ಗ್ರಾಮದ ಒಂದು ದೃಶ್ಯ

ಆರು ತಿಂಗಳಲ್ಲಿ ಚಿನ್ನದ ಪ್ರಮಾಣದ ಖಚಿತತೆ

ಚಾಮರಾಜನಗರ ಜಿಲ್ಲೆಯ ಅಜ್ಜಿಪುರ, ಕೌದಳ್ಳಿ, ದೊಡ್ಡ ಆಲತ್ತೂರಿನ ಒಣ ಭೂಮಿ ಹಾಗೂ ಅರೆ ಅರಣ್ಯ ಪ್ರದೇಶದಲ್ಲಿ ಚಿನ್ನದ ನಿಕ್ಷೇಪ ಇರುವುದನ್ನು ಭಾರತೀಯ ಭೂ ವೈಜ್ಞಾನಿಕ ಸರ್ವೇಕ್ಷಣಾ ಸಂಸ್ಥೆ ಪತ್ತೆ ಮಾಡಿದೆ.

ಈಗಾಗಲೇ ಸಂಸ್ಥೆಯ ಹಿರಿಯ ಭೂ ವಿಜ್ಞಾನಿಗಳಾದ ಸೌಭಾಗ್ಯ ಲಕ್ಷ್ಮಿ ಸಾಬು ಹಾಗೂ ಅಯಾನ್ಸು ಅವರ ನೇತೃತ್ವದ ತಂಡ ಈ ಮೂರು ಗ್ರಾಮಗಳಿಗೆ ಭೇಟಿ ನೀಡಿ ಚಿನ್ನದ ನಿಕ್ಷೇಪದ ಬಗ್ಗೆ ಪರಿಶೀಲನೆ ನಡೆಸಿದ್ದಾರೆ.

ಅಗತ್ಯ ಬಿದ್ದಾಗ ಆಗಾಗ್ಗೆ ಈ ಮೂರು ಹಳ್ಳಿಗಳಿಗೆ ಭೇಟಿ ನೀಡಲಿದ್ದು, ಅವರಿಗೆ ಅಗತ್ಯ ಸಹಕಾರ ನೀಡುತ್ತೇವೆ. ಈಗ ಪ್ರಾಥಮಿಕ ಹಂತದಲ್ಲಿ ಅನ್ವೇಷಣೆ ನಡೆಸಿದ್ದಾರೆ. ಇನ್ನು ಆರು ತಿಂಗಳ ನಂತರ ಅಲ್ಲಿ ಎಷ್ಟು ಟನ್ ಚಿನ್ನ ಸಿಗಬಹುದು, ಯಾವ ಗ್ರೇಡ್ ಚಿನ್ನ ದೊರೆಯಬಹುದು ಎಂಬ ಮಾಹಿತಿಗಳು ಖಚಿತವಾಗಲಿದೆ.

- ರಾಜೇಶ್, ಹಿರಿಯ ಭೂ ವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ ಚಾಮರಾಜನಗರ

ಚಿನ್ನದ ವೈಭವ

ಚಿನ್ನದ ನಿಕ್ಷೇಪವಿರುವ ಸ್ಥಳದಲ್ಲಿ ಗಣಿಗಾರಿಕೆ ಆರಂಭವಾದರೆ ಸಾವಿರಾರು ಜನರಿಗೆ ಉದ್ಯೋಗಾವಕಾಶ ದೊರೆಯಲಿದೆ. ಅಲ್ಲದೆ ಚಾಮರಾಜನಗರ ಹಾಗೂ ಮಂಡ್ಯ ಜಿಲ್ಲೆಗೆ ಚಿನ್ನದ ವೈಭವ ಬರಲಿದೆ.

ಚಾಮರಾಜನಗರದಲ್ಲಿ ಚಿನ್ನದ ನಿಕ್ಷೇಪ ಪತ್ತೆಯಾಗಿರುವ ಪ್ರದೇಶದ ಕೆಲವು ಭಾಗ ಅರಣ್ಯ ಪ್ರದೇಶ. ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದ ಅರಣ್ಯ ಮತ್ತು ಪರಿಸರ ಸಚಿವಾಲಯದ ಅನುಮತಿ ನಂತರ ಅನ್ವೇಷಣಾ ಕಾರ್ಯಾಚರಣೆ ಆರಂಭವಾಗಬೇಕಿದೆ. ಕರ್ನಾಟಕದ ಕೆಜಿಎಫ್ ಚಿನ್ನದ ಗಣಿಗಾರಿಕೆ ವಿಶ್ವ ಭೂಪಟದಲ್ಲಿ ಗುರುತಿಸಿಕೊಂಡಿತ್ತು. 1880 ರಿಂದ 2001 ರವರೆಗೆ ಇಲ್ಲಿ ಚಿನ್ನದ ಗಣಿಗಾರಿಕೆ ನಡೆದಿದ್ದು, ಸುಮಾರು 800 ಟನ್ ಚಿನ್ನ ಉತ್ಪಾದಿಸಿತ್ತು. ಆದರೆ ಕೆಜಿಎಫ್ ಮುಚ್ಚಿ ಇಂದು ಪಾಳು ಬಿದ್ದಿದೆ. ಆದರೆ ಈಗ ಚಾಮರಾಜನಗರ ಹಾಗೂ ಮಂಡ್ಯ, ಕೆಜಿಎಫ್‌ನಂತೆ ಕರ್ನಾಟಕಕ್ಕೆ ಚಿನ್ನದ ವೈಭವವನ್ನು ಮರುಕಳುಹಿಸಲಿದೆ.


ಮಂಡ್ಯ, ಚಾಮರಾಜನಗರ ಮಾತ್ರವಲ್ಲದೆ ಹಾವೇರಿ, ಕೊಪ್ಪಳ, ಚಿತ್ರದುರ್ಗ ಹಾಗೂ ಬಳ್ಳಾರಿಯ 19 ಸ್ಥಳಗಳಲ್ಲಿ ಚಿನ್ನದ ನಿಕ್ಷೇಪವಿದೆ ಎಂದು ಭಾರತೀಯ ಭೂ ವೈಜ್ಞಾನಿಕ ಸರ್ವೇಕ್ಷಣಾ ಸಂಸ್ಥೆ ಪತ್ತೆ ಮಾಡಿದೆ. ಈ ಎಲ್ಲಾ ನಿಕ್ಷೇಪಗಳಲ್ಲಿ ಚಿನ್ನದ ಗಣಿಗಾರಿಕೆ ಆರಂಭವಾದರೆ ಕರ್ನಾಟಕ ಚಿನ್ನದ ನಾಡಾಗಲಿದೆ. ಚಿನ್ನದ ನಿಕ್ಷೇಪ ಪತ್ತೆಯಾಗಿರುವ ಐದು ಜಿಲ್ಲೆಗಳು ಮಾತ್ರವಲ್ಲದೆ ಕರ್ನಾಟಕದ 52 ಸ್ಥಳಗಳಲ್ಲಿ ಚಿನ್ನ, ತಾಮ್ರ ಹಾಗೂ ಇತರೆ ಖನಿಜಗಳಿಗೆ ವಿಚಕ್ಷಣಾ ಸಮೀಕ್ಷೆ ನಡೆಸಲು ಭಾರತೀಯ ಭೂ ವೈಜ್ಞಾನಿಕಾ ಸರ್ವೇಕ್ಷಣಾ ಸಂಸ್ಥೆ ನಿರ್ಧರಿಸಿದೆ.


ಚಿನ್ನದ ಗಣಿಯ ಸಾಂದರ್ಭಿಕ ಚಿತ್ರ

ಮಕ್ಕಳ ಚಿತ್ರಕಥೆ
ಸಿಂಹ, ನೊಣ ಹಾಗೂ ಗಿಳಿ

■ ಹೆಚ್.ಜಿ.ಎನ್.ಪ್ರಸಾದ್
ಮೊ. 98453 76199



ಒಂದು ಸಿಂಹವು ಭರ್ಜರಿ ಬೇಟೆಯಾಡಿ ಹೊಟ್ಟೆ ತುಂಬ ತಿಂದು ಮರದ ನೆರಳಲ್ಲಿ ನಿದ್ರಿಸುತಿತ್ತು. ಗಾಢ ನಿದ್ರೆಯಲ್ಲಿದ್ದ ಸಿಂಹವು ಥಟ್ಟನೆ ಎಚ್ಚರಗೊಂಡಿತು. ಇದಕ್ಕೆ ಕಾರಣ ಅದರ ಕಿವಿಯ ಹತ್ತಿರ ಗುಂಯ್‌ಗುಡುತಿದ್ದ ಒಂದು "ನೊಣ". ಚೆನ್ನಾಗಿ ನಿದ್ರಿಸಬೇಕೆಂದಿದ್ದ ಸಿಂಹಕ್ಕೆ ಭಾರೀ ಕೋಪ ಬಂದಿತು. ನೊಣವನ್ನು ಓಡಿಸಲು ತನ್ನ ಕೇಸರವನ್ನು ಪಟಪಟನೇ ಝಾಡಿಸಿತು. ನೊಣ ಸರ್ರನೇ ಹಾರಿ ಗರಗರನೆ ಸುತ್ತಿ ಬಂದು ಸಿಂಹವನ್ನು ರೇಗಿಸುವಂತೆ ಅದರ ಮೂಗಿನ ಮೇಲೆಯೇ ಕುಳಿತುಕೊಂಡಿತು. ಅದರ ಉದ್ಧಟತನ ಕಂಡು ಸಿಂಹಕ್ಕೆ ಇನ್ನೂ ಸಿಟ್ಟು ಹೆಚ್ಚಾಯಿತು. ತನ್ನ ಬಲಗಾಲನ್ನು ಎತ್ತಿ ಥಟ್ಟನೆ ನೊಣಕ್ಕೆ ಹೊಡೆಯಲು ಪ್ರಯತ್ನಿಸಿತು.


ಆದರೆ ನೊಣ ಅಲ್ಲಿಂದ ಪಾರಾಗಿ ಮೇಲೆ ಹಾರಿದಾಗ ಸಿಂಹದ ಕಾಲು ಅದರ ಮುಖಕ್ಕೆ ಅಪ್ಪಳಿಸಿ ಭಯಂಕರ ನೋವಾಯಿತು. ಕಣ್ಣಲ್ಲಿ ನೀರು ಬಂದಿತು. ನೊಣ ಗಹಗಹಿಸಿ ನಕ್ಕಿತು "ನೀನೆಂಥ ರಾಜನಯ್ಯಾ...? ನನ್ನಂಥ ಸಣ್ಣ ಪ್ರಾಣಿಯನ್ನು ಹಿಡಿಯಲಾಗಲಿಲ್ಲವಲ್ಲಾ...!" ಎಂದು ಹಂಗಿಸಿತು. ಈಗ ಸಿಂಹ ಎದ್ದು ಹೋರಾಟಕ್ಕೇ ಮುಂದಾಯಿತು. ನೊಣಕ್ಕೂ ಈ ಯುದ್ಧ ಇಷ್ಟವೇ ಆಯಿತು.


ಸಿಂಹದ ತಲೆಯನ್ನು ಸುತ್ತುತ್ತಾ ಕ್ಷಣ ಮಾತ್ರದಲ್ಲಿ ಅದರ ಕಣ್ಣಿನ ಹತ್ತಿರ ಬಂದು ಮತ್ತೆ ಅದರ ಕಿವಿ ಸೇರಿ, ಹೊರ ನುಗ್ಗಿ, ತೀರ ಬಾಯಿಯ ಹತ್ತಿರವೇ ಬಂದಿತು. ಅದನ್ನು ಕಚ್ಚಿಬಿಡಬೇಕೆಂದು ಸಿಂಹ ಬಾಯ್ತೆರೆದು ಮುನ್ನುಗ್ಗಿದಾಗ ಮುಂದಿದ್ದ ಮರಕ್ಕೆ ಸಿಂಹದ ಮುಖ ಬಡಿದು ಕುಸಿದು ಬಿತ್ತು


ಕೆಳಗೆ ಬಿದ್ದ ಕಾಡಿನ ರಾಜ ಸಿಂಹವನ್ನು ನೋಡಿ ನೊಣಕ್ಕೆ ಭಾರೀ ಮಜವಾಯಿತು. 'ಒಂದು ನೊಣದಿಂದ ಪಾರಾಗುವುದು ಸಾಧ್ಯವಿಲ್ಲ. ನನ್ನ ಶಕ್ತಿ ಏನೆಂದು ತಿಳಿಯಿತೇ... ಎಷ್ಟು ದೊಡ್ಡದು ನಿನ್ನ ದೇಹ... ಏನು ಶಕ್ತಿ ನಿನ್ನ ಕಾಲಿನಲ್ಲಿ... ಎಷ್ಟು ಅಬ್ಬರದ ಘರ್ಜನೆ ನಿನ್ನದು...ನಿನ್ನನ್ನು ಕಂಡರೆ ದೊಡ್ಡದೊಡ್ಡ ಪ್ರಾಣಿಗಳೆಲ್ಲಾ ಹೆದರುತ್ತವಂತೆ.... ಅವೆಷ್ಟು ಹೇಡಿಗಳಿರಬೇಕು..... ಛೀ, ನಿನ್ನ ಶಕ್ತಿ ನನ್ನ ಪುಟ್ಟ ರೆಕ್ಕೆಗಳಿಗೂ ಸಮನಲ್ಲಾ....ನಿನ್ನಂಥ ಹತ್ತಾರು ಸಿಂಹಗಳನ್ನು ಕ್ಷಣದಲ್ಲಿ ಸೋಲಿಸಬಲ್ಲೆ ನಾನು...' ಎಂದೆಲ್ಲಾ ಬಡಾಯಿ ಕೊಚ್ಚಿಕೊಂಡಿತು ನೊಣ.


ಇದರ ಚೆಲ್ಲಾಟವನ್ನು ಮರದ ಮೇಲಿಂದ ಗಮನಿಸುತಿದ್ದ ಗಿಳಿಯೊಂದು ನೊಣದ ಹತ್ತಿರ ಹಾರಿ ಬಂದು, ಗೆಳೆಯಾ, ನಿನ್ನ ಶಕ್ತಿಯು ನಿಜವಾಗಿ ಅದ್ಭುತವೇ...!ಆದರೆ ನನ್ನೊಂದಿಗೆ ಈ ಮರದ ಕೆಳಗಿನ ಕೊಂಬೆಯವರೆಗೆ ಬರುತ್ತೀಯಾ...?" ಎಂದು ಕೇಳಿತು. ಆಗ ತಾನೆ ಸಿಂಹವನ್ನು ಸೋಲಿಸಿದ ಅಮಲಿನಲ್ಲಿದ್ದ ನೊಣ ಅದೇ ಅಹಂಕಾರದಿಂದ ಗಿಳಿಯೊಂದಿಗೆ ಹಾರಿ, ಅದನ್ನೇ ಹಿಂಬಾಲಿಸಿತು.


ಗಿಳಿ ಮೇಲಕ್ಕೆ ಹಾರುತ್ತಾ ಹಾರುತ್ತಾ ಸರ್ರನೇ ಬದಿಗೆ ಸರಿಯಿತು. ಅದರ ಹಿಂದೆಯೇ ಸಾಗುತಿದ್ದ ನೊಣ ಗಮನಿಸದೇ ಮುನ್ನುಗಿದಾಗ ಅಲ್ಲಿ ಹರಡಿಕೊಂಡಿದ್ದ ಜೇಡರಬಲೆಗೆ ಸಿಕ್ಕಿಕೊಂಡಿತು. ಏನೆಲ್ಲಾ ಒದ್ದಾಡಿದರೂ ಪಾರಾಗುವುದು ಸಾಧ್ಯವಾಗಲಿಲ್ಲ. ಅಷ್ಟರಲ್ಲಿ ಜೇಡರಹುಳ ತನ್ನ ಬಲೆಯನ್ನು ಬಿಗಿದು ಇದರ ಪ್ರಾಣಕ್ಕೆ ಕುತ್ತು ತರಲೆತ್ನಿಸಿತು. ಆಗ ಗಿಳಿ ಹೇಳಿತು "ಅಯ್ಯಾ, ಕಾಡಿನ ರಾಜ ಸಿಂಹವನ್ನು ಸೋಲಿಸಿದೆ ಎಂದು ಬೀಗುತಿದ್ದ ನೀನು ಪುಟ್ಟ ಬಲೆಯಿಂದ, ಜೇಡರಹುಳದಿಂದ ಪಾರಾಗಲಾರೆ. ಇನ್ನು ನಿನ್ನ ಅಹಂಕಾರಕ್ಕೆ ಅವಕಾಶವಿಲ್ಲ...!"ಎಂದು ಹೇಳಿ ಹಾರಿ ಹೋಯಿತು.

ನೀತಿ :– ಯಾವುದೋ ಪುಣ್ಯ ವಿಶೇಷದಿಂದ ಕೆಲವೊಮ್ಮೆ ದೊಡ್ಡ ಸಾಧನೆಯಾಗುತ್ತದೆ. ದೊಡ್ಡವರ ಸಾಧನೆ ಸರಿಗಟ್ಟುವ ಅವಕಾಶಗಳು ಬರುತ್ತವೆ. ಈ ಸಾಧನೆ ನಮ್ಮ ತಲೆ ತಿರುಗಿಸಬಾರದು. ಯಾವಾಗಲೂ ಅದೇ ಮಟ್ಟದ ಸಾಧನೆ ಮಾಡಲು ಸಾಧ್ಯವಾಗದೇ ಹೋಗಬಹುದು. ಹಿಂದಿನ ಸಾಧನೆಯನ್ನೇ ತಲೆಯಲ್ಲಿಟ್ಟುಕೊಂಡು ಗರ್ವ ಪಡುತಿದ್ದರೆ ಒಂದಲ್ಲಾ ಒಂದು ದಿನ ತೀರ ಸಣ್ಣವರಿಂದಲೇ ಸೋತು ಮುಖಭಂಗಪಡುವಂತಾಗುತ್ತದೆ. ಅದಕ್ಕೆ ನಾವೇ ಜವಾಬ್ದಾರರಾಗುತ್ತೇವೆ.

ವಾರಭವಿಷ್ಯ

30.11.2025 ರಿಂದ 6.12.2025

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:– ರವಿ–ವೃಶ್ಚಿಕ, ಚಂದ್ರ–ಕುಂಭ, ಮೀನ, ಮೇಷ, ವೃಷಭ, ಕುಜ–ವೃಶ್ಚಿಕ, ಬುಧ–ತುಲಾ, ಗುರು–ಕಟಕ, ಶುಕ್ರ–ವೃಶ್ಚಿಕ, ಶನಿ–ಮೀನ, ರಾಹು–ಕುಂಭ ಮತ್ತು ಕೇತು–ಸಿಂಹ.

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ್ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
'ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ'
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ: 9740973224, 9739548720



ಮೇಷ (ಚು,ಚೆ,ಲ,ಲಿ,ಲು,ಲೆ,ಲೂ,ಅ)
ಈ ವಾರ ಪೂರ್ತಿ ಚಂದ್ರ ಗ್ರಹದ ನಡೆ ನಿಮಗೆ ಹಲವು ರೀತಿಯ ಶುಭ ಫಲಗಳನ್ನು ನೀಡಲಿದೆ. ಹಲವು ಮೂಲಗಳಿಂದ ವರಮಾನ ಅಧಿಕವಾಗುವುದು. ವೈಯಕ್ತಿಕ ಕೆಲಸ ಕಾರ್ಯಗಳಲ್ಲಿ ಸಫಲತೆಯನ್ನು ಕಾಣುವಿರಿ. ಕಲಾವಿದರಿಗೆ ಪ್ರಶಸ್ತಿ, ಪಾರಿತೋಷಕಗಳು ಲಭಿಸುವುದು. ಸಾಡೇಸಾತಿಯ ಪ್ರಭಾವವೂ ಇದೆ. ದುಡುಕಿ ನಡೆದರೆ ಇಲ್ಲದ ಸಂಕಷ್ಟಕ್ಕೆ ಗುರಿಯಾಗುವಿರಿ.
ಶ್ರೀ ನೃಸಿಂಹ ಸ್ತೋತ್ರ ಜಪ. ಶುಭ ಸಂಖ್ಯೆ–1

ವೃಷಭ (ಇ,ಉ,ಎ,ಒ,ವ,ವಿ,ವು,ವೆ,ವೊ)
'ವಿಫಲತೆಯೇ ಸಫಲತೆಯ ಸೋಪಾನ'. ವಾರದ ಆದಿಗೆ ಆದಾಯದಲ್ಲಿ ಏರಿಕೆ ಕಂಡರೂ ಅದಕ್ಕೆ ತಕ್ಕಂತೆ ಖರ್ಚುಗಳೂ ಎದುರಾಗುವುದು. ನಿಮ್ಮ ರಾಶ್ಯಾಧಿಪತಿ ಶುಕ್ರನ ಕೃಪೆಯಿಂದ ವಿಳಂಬವಾದ ವ್ಯಾಪಾರದ ಮಾತುಕತೆಗಳು ಫಲಪ್ರದವಾಗಲಿದೆ. ಕನ್ಯಾಮಣಿಯರು ಶೃಂಗಾರ ಸಾಧನಗಳಿಗೆ ಅಧಿಕ ಹಣ ವ್ಯಯಿಸುವರು. ಗುರು ಕೃಪೆಯ ಅಭಾವವಿರುವ ಕಾರಣ ಕುಟುಂಬ ಸದಸ್ಯರಲ್ಲಿ ಅಸಮಾಧಾನ ಇರುತ್ತದೆ.
ಶ್ರೀ ಶಕ್ತಿದೇವತಾ ಉಪಾಸನೆ. ಶುಭ ಸಂಖ್ಯೆ 5

ಮಿಥುನ (ಕ,ಕಿ,ಕು,ಘ,ಙ,ಛ,ಕೆ,ಕೊ,ಹ)
ಸಪ್ತಾಹದ ಪೂರ್ವಾರ್ಧಕ್ಕೆ ಶುಭ ಸಮಾಚಾರ ಬಂದು, ಹಣ ಸಂಪಾದನೆಯೂ ಆಗಿ ಹರ್ಷಿತರಾಗಿರುವಿರಿ. ಗಾರ್ಮೆಂಟ್ಸ್ ತಯಾರಕರಿಗೆ ರಫ್ತು ವ್ಯಾಪಾರದ ದೊಡ್ಡ ಆರ್ಡರ್ ದೊರೆಯಲಿದೆ. ಸರ್ಕಾರಿ ನೌಕರರು ಅಕ್ರಮ ಕೃತ್ಯ ಮಾಡಿ ತೊಂದರೆಗೆ ಗುರಿಯಾಗುವರು. ಸಜ್ಜನರಿಂದ ದೂರ ಇರಬೇಕಾದ ಪರಿಸ್ಥಿತಿಗೆ ನೀವೇ ಕಾರಣರು. ಸದಾ ಬೇರೆಯವರನ್ನು ದೂರುತ್ತಾ ಕೂರಬೇಡಿ. ವಾತ–ಕಫ ಕಾಡಿಸುವುದು.
ಶ್ರೀ ವಿಷ್ಣು ಸಹಸ್ರನಾಮ ಪಠಿಸಿ. ಶುಭ ಸಂಖ್ಯೆ–4

ಕಟಕ (ಹೀ,ಹು,ಹೆ,ಡ,ಡಿ,ಡು)
ಇದು ನಿಮ್ಮ ತಪ್ಪುಗಳನ್ನು ಅವಲೋಕಿಸಿಕೊಳ್ಳುವ ಸಮಯವಾಗಿದೆ. ನಿಮ್ಮ ರಾಶ್ಯಾಧಿಪತಿ ಚಂದ್ರಗ್ರಹ ಕೊಟ್ಟರೂ ರಾಹು ಕೇತುಗಳು ಅದನ್ನು ಕೆಡಿಸಲಿದ್ದಾರೆ. ಪ್ರೀತಿ–ಪ್ರೇಮ ವಿಷಯಗಳು ಮಾನಸಿಕ ಉದ್ವೇಗಕ್ಕೆ ಕಾರಣವಾಗಬಹುದು. ವಾರ ಮಧ್ಯೆ ಕಂಡು ಬರುವ ಹಣಕಾಸಿನ ಬಿಕ್ಕಟ್ಟು ನಿಮ್ಮ ಹಿತೈಷಿಗಳ ಸಹಕಾರದಿಂದ ನಿವಾರಣೆ ಆಗುವುದು. ವಾರದ ಕಡೆಗೆ ನಿಮ್ಮ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯುವುದು.
ಶ್ರೀ ದೇವೀ ಖಡ್ಗಮಾಲ ಸ್ತೋತ್ರ ಪಠಿಸಿ. ಶುಭ ಸಂಖ್ಯೆ–8

ಸಿಂಹ (ಮ,ಮಿ,ಮು,ಮೊ,ಮೆ,ಟ,ಟಿ,ಟು,ಟೆ)
ಹಲವು ಗ್ರಹಗಳ ಸಂಯೋಗ ಅಶುಭ ಇರುವ ಕಾರಣ ನಿಮ್ಮಲ್ಲಿ ಕೋಪ ತಾಪಗಳು ಉಂಟಾಗುವುದು. ಸಹೋದರರಲ್ಲಿ ಭಿನ್ನಾಭಿಪ್ರಾಯಗಳು ತಲೆ ಎತ್ತುವುದು. ಯಂತ್ರೋಪಕರಣಗಳನ್ನು ನಡೆಸುವಾಗ ಜಾಗರೂಕತೆ ಇರಲಿ. ವಾರದ ಉತ್ತರಾರ್ಧಕ್ಕೆ ಮಿತ್ರರ ಸಹಾಯ ಹಾಗೂ ಸಮಯೋಚಿತ ನೆರವಿನಿಂದ ಹಣಕಾಸಿನ ಮುಗ್ಗಟ್ಟು ನಿವಾರಣೆ ಆಗುವುದು. ವನಿತಾ ಮಣಿಯರು ಶಾಪಿಂಗ್‌ಗೆ ಹೆಚ್ಚು ಹಣ ವ್ಯಯಿಸುವರು.
ಶ್ರೀ ಪುಣ್ಯಕ್ಷೇತ್ರ ಸಂದರ್ಶನ. ಶುಭ ಸಂಖ್ಯೆ–9

ಕನ್ಯಾ (ಟೊ,ಪ,ಪಿ,ಪು,ಷ,ಣ,ಠ,ಪೆ,ಪೊ)
ವಾರದಾರಂಭಕ್ಕೆ ಸಜ್ಜಾಗಿರುವವನಿಗೆ ಸೋಲೇ ಇಲ್ಲ ಎಂಬಂತೆ ವೈಯಕ್ತಿಕ ಕೆಲಸ ಕಾರ್ಯಗಳಲ್ಲಿ ಯಶಸ್ಸನ್ನು ಕಾಣುವಿರಿ. ಸತ್ಕರ್ಮಾಚರಣೆ, ದಾನ, ಧರ್ಮಗಳಿಂದ ಜನಾದರಕ್ಕೆ ಪಾತ್ರಾಗುವಿರಿ. ಸೃಜನಶೀಲ ವ್ಯಕ್ತಿಗಳಿಗೆ ಸರ್ಕಾರದ ಮನ್ನಣೆ ದೊರಕುವುದು. ರತ್ನ, ಮಾಣಿಕ್ಯ ವ್ಯಾಪಾರಿಗಳಿಗೆ ಹೇರಳ ಧನಲಾಭವಾಗುವುದು. ವಾರಾಂತ್ಯಕ್ಕೆ ವಿನೋದಗೋಷ್ಠಿಯಲ್ಲಿ ಭಾಗಿ.
ಶ್ರೀ ಶ್ರೀನಿವಾಸ ದೇವರ ದರ್ಶನ. ಶುಭ ಸಂಖ್ಯೆ–3

ತುಲಾ (ರ,ರಿ,ರು,ರೆ,ರೊ,ತ,ತಿ,ತು,ತೆ)
ವಾರದಲ್ಲಿ ನಿಮ್ಮ ರಾಶ್ಯಾಧಿಪತಿ ಶುಕ್ರ ನಿಮ್ಮ ಬೆನ್ನಿಗಿದ್ದು, ಸ್ತ್ರೀಯರೊಬ್ಬರ ಸಹಾಯದಿಂದ ಇಚ್ಛಿತ ಕಾರ್ಯದಲ್ಲಿ ಸಫಲತೆಯನ್ನು ಕಾಣುವಿರಿ. ಯಶೋವೃದ್ಧಿ, ಧನ–ಧಾನ್ಯ ಲಾಭವೂ ಉಂಟು. ಖರ್ಚುಗಳು ಕೈ ಮೀರಿದರೂ ಸಮಯಕ್ಕೆ ಸರಿಯಾಗಿ ಹಣ ಒದಗುತ್ತದೆ. ಹಲವರಿಗೆ ವಿವಾಹ ನಿಶ್ಚಿತಾರ್ಥಗಳು ನಡೆಯುವುದು. ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆಯ ನೆರವು ದೊರೆಯುವುದು.
ಶ್ರೀ ಲಕ್ಷ್ಮೀ ಅಷ್ಟಕ ಪಠಿಸಿ. ಶುಭ ಸಂಖ್ಯೆ–6

ವೃಶ್ಚಿಕ (ತೊ,ನ,ನಿ,ನು,ನೆ,ನೊ,ಯು,ಯಿ,ಯ)
ಈ ವಾರ ಗುರು–ಶುಕ್ರರ ಅನುಗ್ರಹದಿಂದ ಹೊಸ ಬಂಡವಾಳ ಹೂಡಿಕೆ ಮಾಡಲು ಅಡ್ಡಿ ಇಲ್ಲ. ದಾಯಾದಿಗಳಲ್ಲಿ ಉಂಟಾಗಿದ್ದ ಅಭಿಪ್ರಾಯಭೇದಗಳು ಹಿರಿಯರೊಬ್ಬರ ರಾಜೀ ಸೂತ್ರದಿಂದ ಸುಖಾಂತ್ಯವಾಗುವುದು. ದುಬಾರಿ ಗೃಹೋಪಯೋಗಿ ವಸ್ತುಗಳನ್ನು ಖರೀದಿಸುವಿರಿ. ಕೆಲವೊಮ್ಮೆ ಬೇಡದ ವಸ್ತುಗಳನ್ನು ಮನೆಗೆ ತರುವಿರಿ. ರಾಹು–ಕೇತುಗಳು ಅಶುಭರಿದ್ದು ಅನಾರೋಗ್ಯ ಕಾಡುವುದು.
ಶ್ರೀ ರಾಹು–ಕೇತು ಸ್ತೋತ್ರ ಪಠಿಸಿ. ಶುಭ ಸಂಖ್ಯೆ–7

ಧನುಸ್ಸು (ಯೆ,ಯೊ,ಬ,ಬಿ,ಬು,ಧ,ಭ,ಢ,ಬೆ)
ಹಿಂದಾಗಿದ್ದಕ್ಕೆ ಚಿಂತಿಸುತ್ತಾ ಕೂರದೆ ಮುಂದಾಗಬೇಕಾದ ಸಾಧನೆಗಳತ್ತ ಗಮನ ನೀಡಿ. ಧೈರ್ಯವಂತರಿಗೆ ದೈವ ಸಹಾಯವೂ ದೊರೆಯುತ್ತದೆ. ಶತ್ರುಗಳ ಚಕ್ರವ್ಯೂಹವನ್ನು ಬೇಧಿಸಲು ಚಕ್ರಧರನಾದ ಶ್ರೀ ಕೃಷ್ಣನನ್ನು ಪ್ರಾರ್ಥಿಸಿ ನೀವು 'ಒಲ್ಲದ ಗಂಡನಿಗೆ ಮೊಸರಲ್ಲಿ ಕಲ್ಲು' ಎಂಬಂತೆ ನಡೆದರೆ ಮಾನಸಿಕ ಕಿರಿಕಿರಿ. ವಾರದ ಕಡೆಗೆ ಮನಸ್ಸಿಗೆ ಮುದ ನೀಡುವ ಘಟನೆ ನಡೆಯುವುದು.
ಶ್ರೀ ಕೃಷ್ಣಾಷ್ಟಕ ಪಠಿಸಿ. ಶುಭ ಸಂಖ್ಯೆ–3

ಮಕರ (ಬೊ,ಜ,ಜಿ,ಖಿ,ಖು,ಖೆ,ಖೊ,ಗ,ಗಿ)
ಮರಳುಗಾಡಿನಲ್ಲಿ ಓಯಸಿಸ್ ಎಂಬಂತೆ ಗುರುಗ್ರಹವು ಶುಭ ಲಾಭಕ್ಕೆ ಬಂದಿರುವುದು ನಿಮ್ಮ ಹಣಕಾಸಿನ ಸ್ಥಿತಿ–ಗತಿಗಳು ಉತ್ತಮವಾಗಲಿವೆ. ಸಜ್ಜನರ ಸಂಗ ನಿಮ್ಮ ಶ್ರೇಯಸ್ಸಿಗೆ ಪೂರಕವಾಗಲಿದೆ. 'ಬೆಳ್ಳಗಿರುವುದೆಲ್ಲ ಹಾಲಲ್ಲ', ಅಪರಿಚಿತರನ್ನು ನಂಬಿ ಮೋಸ ಹೋಗದಿರಿ. ಕಾರ್ಯನಿಮಿತ್ತ ಪ್ರಯಾಣಗಳು ಉಂಟಾಬಹುದು. ಮಹಿಳೆಯರು ಮಾಂಗಲ್ಯ ಸರ ಮುಚ್ಚಿಕೊಂಡು ಓಡಾಡಲಿ.
ಶ್ರೀ ಅಷ್ಟಾಕ್ಷರಿ ಮಂತ್ರ ಜಪಿಸಿ. ಶುಭ ಸಂಖ್ಯೆ–6

ಕುಂಭ (ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ)
ಸಪ್ತಾಹದ ಆರಂಭಕ್ಕೆ ಶುಭ ಚಂದ್ರನ ಪ್ರಭಾವದಿಂದ ಸ್ವಚ್ಛವಾದ ಮನಸ್ಸು, ದೇಹಸೌಖ್ಯ, ಆರೋಗ್ಯ ನಿಮ್ಮದಾಗಲಿದೆ. ಆಪ್ತೇಷ್ಟರು ಮನೆಗೆ ಬರುವರು. ಅವರ ಆದರ ಉಪಚಾರಗಳಿಗೆ ಹೇರಳ ಧನ ವ್ಯಯವಾಗುವುದು. ಸಾಗರೋತ್ಪನ್ನ ವಸ್ತು ವ್ಯಾಪಾರಿಗಳಿಗೆ ಕೈ ತುಂಬಾ ಹಣ ದೊರೆತು ಆರ್ಥಿಕ ಬಿಕ್ಕಟ್ಟು ನಿವಾರಣೆಯಾಗುವುದು. ರಾಹು–ಕೇತುಗಳು ಶುಭರಿಲ್ಲ. ನಿಮ್ಮ ಬ್ಯಾಂಕ್ ವಿವರಗಳನ್ನು ಗೌಪ್ಯವಾಗಿ ಇಡಿ.
ಶ್ರೀ ನಂಜುಂಡೇಶ್ವರ ದರ್ಶನ. ಶುಭ ಸಂಖ್ಯೆ–7

ಮೀನ (ದಿ,ದು,ಖ,ಝ,ಥ,ತೆ,ದೊ,ಚ,ಚಿ)
ಉದ್ಯೋಗ ಸ್ವಂತದ್ದಿರಲಿ, ಬೇರೆಯವರದ್ದು ಇರಲಿ. ನೀವು ಹೊಸ ಮಜಲನ್ನು ಏರಲು ನಿಮ್ಮ ರಾಶ್ಯಾಧಿಪತಿ ಗುರು ತಮ್ಮ ಉಚ್ಚ ರಾಶಿಯಲ್ಲಿ ಸಂಚರಿಸುತ್ತಿದ್ದಾರೆ. ಮಕ್ಕಳು ಗೌರವ ತರುವ ಕೆಲಸವನ್ನು ಮಾಡಲಿದ್ದಾರೆ. ಜನ್ಮ ಶನಿಯಿಂದಾಗಿ ಮನಸ್ಸಿನ ಶಾಂತಿ ಕದಡುವುದು. ಕೋರ್ಟು ಕಚೇರಿ ವ್ಯವಹಾರಗಳಲ್ಲಿ ನಿರಾಸೆಯಾಗಲಿದೆ. ಹಠಕ್ಕೆ ಬಿದ್ದು ವಾಹನ ಚಾಲನೆ ಖಂಡಿತ ಮುಳುವಾಗುವುದು.
ಶ್ರೀ ಗುರುಮಂತ್ರ ಜಪಿಸಿ. ಶುಭ ಸಂಖ್ಯೆ–2

ಕೆ.ಆರ್.ನಗರದಲ್ಲಿ ಕಬ್ಬು ಬೆಲೆ ತಾರತಮ್ಯ ಖಂಡಿಸಿ ರೈತರ ಪ್ರತಿಭಟನೆ

ಉತ್ತರ ಕರ್ನಾಟಕದ ಕಬ್ಬಿಗೆ 3300 ರೂ., ದಕ್ಷಿಣ ಕರ್ನಾಟಕದ ಕಬ್ಬಿಗೆ 3000 ರೂ. ನಿಗದಿ ಮಾಡಿರುವುದಕ್ಕೆ ರೈತರ ಆಕ್ರೋಶ

ಕೆ.ಆರ್.ನಗರ, ನ.29– ಉತ್ತರ ಕರ್ನಾಟಕದ ಕಬ್ಬು ಬೆಳೆಗಾರರಿಗೆ ಒಂದು ದರ, ದಕ್ಷಿಣ ಕರ್ನಾಟಕದ ಕಬ್ಬು ಬೆಳೆಗಾರರಿಗೆ ಒಂದು ದರ ಮಾಡುವ ಮೂಲಕ ಕಬ್ಬು ಬೆಳೆಗಾರರ ಬಗ್ಗೆ ತಾರತಮ್ಯ ಮಾಡುತ್ತಿದೆ ಎಂದು ಆರೋಪಿಸಿ ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘದಿಂದ ತಾಲೂಕು ಆಡಳಿತ ಸೌಧದ ಕಚೇರಿ ಮುಂದೆ ಪ್ರತಿಭಟನೆ ನಡೆಸಲಾಯಿತು.

ಭತ್ತದ ನಾಡು ಎಂದೇ ರಾಜ್ಯದಲ್ಲಿ ಪ್ರಸಿದ್ಧಿಯಾಗಿರುವ ಕೆ.ಆರ್.ನಗರ ಮತ್ತು ಸಾಲಿಗ್ರಾಮ ಅವಳಿ ತಾಲೂಕಿನಲ್ಲಿ 24 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಭತ್ತ ಬೆಳೆಯಲಾಗಿದ್ದು ಭತ್ತ ಕಟಾವು ಮಾಡುತ್ತಿದ್ದರು, ಇದೂವರೆವಿಗೂ ಖರೀದಿ ಕೇಂದ್ರ ತೆರೆಯಲಾಗಿಲ್ಲ ಎಂದು ರಾಜ್ಯ ಸರ್ಕಾರದ ವಿರುದ್ಧ ಗುಡುಗಿದರು.

ಬಳಿಕ ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯ ಉಪಾಧ್ಯಕ್ಷ ಅಂಕನಹಳ್ಳಿ ತಿಮ್ಮಪ್ಪ ಮಾತನಾಡಿ ಉತ್ತರ ಕರ್ನಾಟಕದಲ್ಲಿ ಟನ್ ಒಂದಕ್ಕೆ 3300 ಘೋಷಣೆ ಮಾಡಿದ್ದಾರೆ. ಹಾಗೆಯೇ ದಕ್ಷಿಣ ಕರ್ನಾಟಕ್ಕೆ ಟನ್ ಒಂದಕ್ಕೆ 3000 ನಿಗದಿ ಮಾಡಿದ್ದು ನಮಗೂ 3300 ನಿಗದಿ ಮಾಡಿ ಏಕೆ ಈ ತಾರತಮ್ಯ ಎಂದು ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

ಇದೇ ವೇಳೆ ಸ್ಥಳಕ್ಕಾಗಮಿಸಿದ ಶಾಸಕ ಡಿ.ರವಿಶಂಕರ್ ಅವರಿಗೆ ಸರ್ಕಾರದ ಧೋರಣೆ ಹಾಗೂ ವಿವಿದ ಬೇಡಿಕೆಗಳನ್ನು ಈಡೇರಿಸಲು ಬೆಳಗಾವಿಯಲ್ಲಿ ನಡೆಯಲಿರುವ ಚಳಿಗಾಲದ ಅಧಿವೇಶನದಲ್ಲಿ ಚರ್ಚೆ ಮಾಡಿ ರೈತರ ಬೇಡಿಕೆಗಳಿಗೆ ನ್ಯಾಯ ಒದಗಿಸಿ ಎಂದು ಮನವಿ ಪತ್ರ ನೀಡಿದರು.



ಕೆ.ಆರ್.ನಗರದ ತಾಲೂಕು ಆಡಳಿತ ಸೌಧದ ಕಚೇರಿ ಮುಂದೆ ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘದಿಂದ ಪ್ರತಿಭಟನೆ ನಡೆಸಲಾಯಿತು.

ಬಳಿಕ ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಹಾಡ್ಯರವಿ ಮಾತನಾಡಿ ಶ್ರೀರಾಮ ಸಕ್ಕರೆ ಕಾರ್ಖಾನೆಯೂ ವಿಜಯ್ ನಿರಾಣಿ ಅವರಿಗೆ ಅಗ್ರಿಮೆಂಟ್ ಆಗಿ ಒಂದು ವರ್ಷ ತುಂಬಿದೆ. ಇನ್ನೂ ಪ್ರಾರಂಭವಾಗಿಲ್ಲ. ಈ ಕ್ಷೇತ್ರದ ಶಾಸಕ ಡಿ.ರವಿಶಂಕರ್ ಗಮನಹರಿಸಬೇಕು ಎಂದರು.

ಕಳೆದ ವರ್ಷ 2024ನೇ ಸಾಲಿನಲ್ಲಿ ಕೆಆರ್.ನಗರ, ಪಿರಿಯಾಪಟ್ಟಣ, ಹುಣಸೂರು, ಸಾಲಿಗ್ರಾಮ, ಹೆಚ್.ಡಿ.ಕೋಟೆ ಈ ತಾಲೂಕುಗಳಲ್ಲಿ ಕಬ್ಬು ಟನ್ ಸಾಕಾಣಿಕೆ ಮಾಡಲು 163 ರೂ. ಬಾಡಿಗೆ ಇತ್ತು, ಇವಾಗ 280 ಮಾಡಿದ್ದಾರೆ ಶಾಸಕರು ಮತ್ತು ಜಿಲ್ಲಾಧಿಕಾರಿಗಳು ಕಾರ್ಖಾನೆ ಮಾಲೀಕರ ಜೊತೆ ಮಾತನಾಡಿ ಹೆಚ್ಚುವರಿ ಹಣವನ್ನು ರೈತರಿಗೆ ವಾಪಸ್ ಕೊಡಿಸಬೇಕು ಎಂದು ಶಾಸಕರಿಗೆ ಮನವಿ ಮಾಡಿದರು.

ಭತ್ತಕ್ಕೆ ಪ್ರೋತ್ಸಾಹ ಧನ ಕೊಡಿಸಿ: ರೈತರು ಇವತ್ತಿನ ಪರಿಸ್ಥಿತಿಯಲ್ಲಿ ಭತ್ತ ಬೆಳೆಯಲು ಹೆಚ್ಚು ಹಣ ಖರ್ಚಾಗುತ್ತಿದೆ, ಆದರೆ ಕೇಂದ್ರ ಸರ್ಕಾರ ಬೆಂಬಲ ಎಗ್ರೇಡ್ 2389 ಹಾಗು ಸಾಮಾನ್ಯ ಭತ್ತಕ್ಕೆ 2369 ನಿಗದಿ ಮಾಡಿದ್ದು ಇದಕ್ಕೆ ರಾಜ್ಯ ಸರ್ಕಾರ ರೂ 500 ಪ್ರೋತ್ಸಾಹ ಧನ ಕೊಡಿಸಿ ಎಂದು ಶಾಸಕರಲ್ಲಿ ಮನವಿ ಮಾಡಿದರು.

ನಂತರ ಶಾಸಕ ಡಿ.ರವಿಶಂಕರ್ ರೈತ ಮುಖಂಡರ ಸಮಸ್ಯೆಗಳನ್ನು ಆಲಿಸಿ ಮಾತನಾಡಿ ಮುಂಬರುವ ಚಳಿಗಾಲದ ಅಧಿವೇಶನದಲ್ಲಿ ಶ್ರೀರಾಮ ಸಕ್ಕರೆ ಕಾರ್ಖಾನೆ ಪುನಾರಂಭಿಸುವ ಬಗ್ಗೆ ಹಾಗೂ ಕಬ್ಬು ಬೆಳೆಗಾರರ ಬೇಡಿಕೆ ಸೇರಿದಂತೆ ವಿವಿಧ ಬೇಡಿಕೆಗಳ ಬಗ್ಗೆ ಚರ್ಚೆ ಮಾಡುವುದಾಗಿ ತಿಳಿಸಿದರು.

ಪಟ್ಟಣದ ಪೊಲೀಸ್ ಇನ್ಸ್‌ಪೆಕ್ಟರ್ ಶಿವಪ್ರಕಾಶ್ ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಿದ್ದರು.

ತಹಸೀಲ್ದಾರ್‌ಗಳಾದ ಜಿ.ಸುರೇಂದ್ರ ಮೂರ್ತಿ, ರುಕ್ಕಿಯಾ ಭಾನು, ಕೃಷಿ ಸಹಾಯಕ ನಿರ್ದೇಶಕ ಕೆ.ಜಿ.ಮಲ್ಲಿಕಾರ್ಜುನ್, ಕಬ್ಬು ಬೆಳೆಗಾರರ ಸಂಘದ ಪದಾಧಿಕಾರಿಗಳು ಬನ್ನೂರು ಎಂ.ವಿ.ಕೃಷ್ಣಪ್ಪ, ಲೋಕೇಶ್, ಪರಶಿವಮೂರ್ತಿ, ಮಾಯಿಗೇಗೌಡ, ಶಿವಣ್ಣೇಗೌಡ, ದಿನೇಶ್, ಕುಮಾರ್, ತಿಪ್ಪೂರು ವಿಷ್ಣು, ಪಶುಪತಿ ಗುರುಮೂರ್ತಿ, ಶಿವರಾಮ್, ಬಾಲೂರು ನಾಗರಾಜ್, ಜೀತೇಂದ್ರ, ಕನುಗನಹಳ್ಳಿ ಅರುಣ್, ಮಂಜುಳಾ, ವೀಣಾ ಮೊದಲಾದವರು ಇದ್ದರು.

ಶ್ರೀಮಂತ ಭಾಷೆ ಕನ್ನಡ ಇತ್ತೀಚಿನ ದಿನಗಳಲ್ಲಿ ನಶಿಸುತ್ತಿದೆ

ಹೆಚ್.ಡಿ.ಕೋಟೆ: ಕನ್ನಡ ಭಾಷಾಭಿಮಾನವನ್ನು ಪ್ರತಿಯೊಬ್ಬರೂ ಬೆಳೆಸಿಕೊಂಡರೆ ಮಾತ್ರ ಕನ್ನಡ ಭಾಷೆ ಉಳಿಯಲು ಸಾಧ್ಯ ಎಂದು ಪದ್ಮಶ್ರೀ ಪುರಸ್ಕೃತ ಗಿರಿಜನ ಮುಖಂಡ ಮೊತ್ತ ಹಾಡಿ ಸೋಮಣ್ಣ ತಿಳಿಸಿದರು.

ತಾಲೂಕಿನ ಗಡಿಭಾಗ ಬಾವಲಿ ಗ್ರಾಮದಲ್ಲಿ ಚೈತನ್ಯ ಭಾರತಿ ಎಜುಕೇಶನಲ್ ಮತ್ತು ಚಾರಿಟೆಬಲ್ ಟ್ರಸ್ಟ್ ವತಿಯಿಂದ ಆಯೋಜಿಸಲಾಗಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಶಾಸಕ ಅನಿಲ್ ಚಿಕ್ಕಮಾದು ಅವರ ಪತ್ನಿ ಸೌಮ್ಯ ಮಾತನಾಡಿ, ನಮ್ಮ ಕನ್ನಡ ಭಾಷೆ ಶ್ರೀಮಂತ ಭಾಷೆಯಾಗಿದ್ದು, ಇತ್ತೀಚಿನ ದಿನಗಳಲ್ಲಿ ನಮ್ಮ ಕನ್ನಡ ಭಾಷೆ ಮರೆಯಾಗುತ್ತಿದೆ. ಕನ್ನಡ ಶಾಲೆಗಳು ಕ್ಷೀಣಿಸುತ್ತಿದ್ದು, ಆಂಗ್ಲಮಾಧ್ಯಮದ ಶಾಲೆಗಳು ಹೆಚ್ಚಾಗುತ್ತಿರುವುದೇ ಕಾರಣವಾಗಿದೆ. ಆದ್ದರಿಂದ ಮಕ್ಕಳಲ್ಲಿ ಕನ್ನಡದ ಭಾಷಾ ಮಹತ್ವವನ್ನು ತಿಳಿಸಬೇಕಾಗಿದೆ ಎಂದರು.

ಕನ್ನಡ ನಾಡಿನಲ್ಲಿ ವಚನಕಾರರು, ದಾಸಶ್ರೇಷ್ಠರು, ಜನ್ಮ ತಾಳಿದ ನಾಡಾಗಿದ್ದು ಆ ನಾಡಿನಲ್ಲಿ ನಾವು ಜನಿಸಿರುವುದು ನಮ್ಮ


ಬಾವಲಿಯಲ್ಲಿ ಕನ್ನಡ ರಾಜ್ಯೋತ್ಸವ ಮೆರವಣಿಗೆಗೆ ಸೌಮ್ಯ ಅನಿಲ್ ಚಾಲನೆ ನೀಡಿದರು.

ಪುಣ್ಯ, ನಮ್ಮ ಎಚ್.ಡಿ.ಕೋಟೆ ತಾಲೂಕು ವನಸಿರಿ ನಾಡಾಗಿದ್ದು ಇಲ್ಲಿನ ಬೆಟ್ಟ ಗುಡ್ಡಗಳು ಅರಣ್ಯ ಸಂಪತ್ತು ಜಲ ಸಂಪತ್ತು ಇವೆಲ್ಲವನ್ನೂ ಒಳಗೊಂಡ ನಮ್ಮ ತಾಲೂಕು ವಿಶೇಷ 'ವಾಗಿದೆ ಎಂದು ಬಣ್ಣಿಸಿದರು.

ಕಾರ್ಯಕ್ರಮಕ್ಕೂ ಮುನ್ನ ಕೇರಳ ಗಡಿಭಾಗವಾದ ಸಮೀಪ ಬಾವಲಿ ಗೇಟ್ ಬಳಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಕನ್ನಡ ಪ್ರಮೋದ ಅವರು ಧ್ವಜಾರೋಹಣ ನೆರವೇರಿಸಿದರು.

ಭುವನೇಶ್ವರಿ ಭಾವಚಿತ್ರದೊಂದಿಗೆ ಶಾಲಾ ಮಕ್ಕಳು ಸುಮಾರು 400 ಅಡಿ ಉದ್ದದ ಕನ್ನಡ ಬಾವುಟದೊಂದಿಗೆ ಮೆರವಣಿಗೆಯಲ್ಲಿ ಸಾಗಿ ವೇದಿಕೆಯಲ್ಲಿ ಸಮಾವೇಶಗೊಂಡಿತು. ಕನ್ನಡ ರಾಜ್ಯೋತ್ಸವದ ಅಂಗವಾಗಿ ಆರೋಗ್ಯ ತಪಾಸಣೆ ಶಿಬಿರ ನಡೆಸಲಾಯಿತು.

ಇದೇ ಸಂದರ್ಭದಲ್ಲಿ ಬಾವಲಿ ಗಡಿನಾಡ ಸಾಧಕರಾದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕಿ ಪ್ರತಿಭಾ, ಯೋಗ ಪಟುಗಳಾದ ಸೂರ್ಯ, ಹರ್ಷಿತಾ ಹಾಗೂ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಹಾಗೂ ಅಂಗನವಾಡಿ ಆಶಾ ಕಾರ್ಯಕರ್ತರನ್ನು ಗುರುತಿಸಿ ಅಭಿನಂದಿಸಲಾಯಿತು.

ಸಿದ್ದು ನೇತೃತ್ವದ ಕಾಂಗ್ರೆಸ್ ಸರ್ಕಾರದ ವಿರುದ್ಧ ಜನಾಕ್ರೋಶ

ಮುಂದಿನ ದಿನಗಳಲ್ಲಿ ವಿಜಯೇಂದ್ರ ನೇತೃತ್ವದ ಬಿಜೆಪಿ ಸರ್ಕಾರ ಅಧಿಕಾರಕ್ಕೆ

ನಂಜನಗೂಡು: ರಾಜ್ಯದ ಮುಖ್ಯಮಂತ್ರಿ ಸಿದ್ಧರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರದ ವಿರುದ್ಧ ವ್ಯಾಪಕ ಜನಾಕ್ರೋಶ ವ್ಯಕ್ತವಾಗಿದ್ದು ಮುಂಬರುವ ದಿನಗಳಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ನೇತೃತ್ವದ ಬಿಜೆಪಿಯನ್ನು ಜನರು ಖಂಡಿತಾ ಬೆಂಬಲಿಸಲಿದ್ದಾರೆ ಎಂದು ಮಾಜಿ ಶಾಸಕ ಬಿ.ಹರ್ಷವರ್ಧನ್ ವಿಶ್ವಾಸ ವ್ಯಕ್ತಪಡಿಸಿದರು.

ಶನಿವಾರ ನಗರದ ಯಾತ್ರೀ ಭವನ ಕಲ್ಯಾಣ ಮಂಟಪದಲ್ಲಿ ಭಾರತೀಯ ಜನತಾ ಪಕ್ಷದಿಂದ ಆಯೋಜಿಸಿದ್ದ ಸಂಘಟನಾತ್ಮಕ ವಿಶೇಷ ಸಭೆಯನ್ನುದ್ದೇಶಿಸಿ ಮಾತನಾಡಿದರು.

ರಾಜ್ಯದಲ್ಲಿ ಯಾವುದೇ ಜನಪರ ಯೋಜನೆಗಳು ಜಾರಿಯಾಗುತ್ತಿಲ್ಲ ಅದರಲ್ಲೂ ನಂಜನಗೂಡು ವಿಧಾನಸಭಾ ಕ್ಷೇತ್ರದಲ್ಲಿ ಈ ಹಿಂದೆ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳನ್ನೇ ಮತ್ತೊಮ್ಮೆ ಉದ್ಘಾಟನೆ ಮಾಡಲಾಗುತ್ತಿದ್ದು ಈ ಹಿಂದಿನ ಬಿಜೆಪಿ ಸರಕಾರದಲ್ಲಿ ಮುಖ್ಯಮಂತ್ರಿಯಾಗಿದ್ದ ಬಿ.ಎಸ್.ಯಡಿಯೂರಪ್ಪ ಹಾಗೂ ಸಚಿವರಾಗಿದ್ದ ಶ್ರೀರಾಮುಲು ಅವರ ನೆರವಿನೊಂದಿಗೆ ಕಾಮಗಾರಿ ಪೂರ್ಣಗೊಳಿಸಿದ್ದ ವಾಲ್ಮೀಕಿ ಭವನವನ್ನು ಇದೀಗ ಮತ್ತೊಮ್ಮೆ ಉದ್ಘಾಟಿಸಿದ್ದಾರೆ. ಅದೇ ರೀತಿ ಹೆಡಿಯಾಲದಲ್ಲಿಯೂ ನಾನು ಶಾಸಕನಾಗಿದ್ದ ವೇಳೆ ನಿರ್ಮಿಸಿದ್ದ ವಿಶ್ವಕರ್ಮ ಸಮುದಾಯ ಭವನವನ್ನು ಈಗಿನ ಶಾಸಕರು ಉದ್ಘಾಟಿಸಿರುವುದೇ ಅವರ ಸಾಧನೆಯಾಗಿದ್ದು ನಂಜನಗೂಡಿನಲ್ಲಿ ಯಾವುದೇ ಮಹತ್ವದ ಯೋಜನೆಗಳನ್ನು ಜಾರಿಗೆ ತರಲು ಅವರಿಗೆ ಸಾಧ್ಯವಾಗಿಲ್ಲ ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ಕುಂಬರಳ್ಳಿ ಸುಬ್ಬಣ್ಣ ಮಾತನಾಡಿ ಕಾಂಗ್ರೆಸ್ ಸರಕಾರವನ್ನು ಕಿತ್ತೊಗೆಯಲು ಮತದಾರರು ತೀರ್ಮಾನಿಸಿದ್ದಾರೆ. ಹೀಗಾಗಿ ಮತದಾರರ ಬೆಂಬಲವನ್ನು ಬಿಜೆಪಿಗೆ ಸೆಳೆಯಲು ಕಾರ್ಯಕರ್ತರು ಮುಂದಾಗಬೇಕು ಎಂದರು.


ಬಿಜೆಪಿ ಸಂಘಟನಾತ್ಮಕ ಸಭೆಯನ್ನು ಮಾಜಿ ಶಾಸಕ ಬಿ.ಹರ್ಷವರ್ಧನ್ ಉದ್ಘಾಟಿಸಿದರು.

ಸಭೆಯನ್ನುದ್ದೇಶಿಸಿ ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್.ಮಹದೇವಯ್ಯ, ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಮಾಜಿ ಅಧ್ಯಕ್ಷ ಕೃಷ್ಣಪ್ಪಗೌಡ, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಸಿಂಧುವಳ್ಳಿ ಕೆಂಪಣ್ಣ, ನಗರಸಭೆ ಮಾಜಿ ಅಧ್ಯಕ್ಷ ಮಹದೇವಸ್ವಾಮಿ, ಬಿಜೆಪಿ ಮಂಡಲ ಅಧ್ಯಕ್ಷ ಕೆಂಡಗಣ್ಣಪ್ಪ, ನಗರಾಧ್ಯಕ್ಷ ಸಿದ್ಧರಾಜು, ಬಿಜೆಪಿ ಹಿಂದುಳಿದ ವರ್ಗಗಳ ವಿಭಾಗದ ಜಿಲ್ಲಾಧ್ಯಕ್ಷ ಬಾಲಚಂದ್ರ, ಶ್ರೀನಿವಾಸರೆಡ್ಡಿ ಮಾತನಾಡಿದರು.

ತಾಪಂ ಮಾಜಿ ಅಧ್ಯಕ್ಷ ಬಿ.ಎಸ್.ಮಹದೇವಪ್ಪ, ಹೊರಳವಾಡಿ ಪಿ. ಮಹೇಶ್, ಮುಖಂಡರಾದ ಮಹದೇವಪ್ರಸಾದ್, ಪ್ರೇಮಾ ಶಂಭಯ್ಯ, ನಂದಿನಿ ಮಹೇಶ್, ಅಬ್ದುಲ್ ರಜಾಕ್, ಹುರಚಂದ್ರು, ವಳಗೆರೆಪುಟ್ಟಸ್ವಾಮಿ, ರಾಘವೇಂದ್ರ, ಕಣೆನೂರು ಪರಶಿವಮೂರ್ತಿ, ಮತ್ತಿತರರು ಭಾಗವಹಿಸಿದ್ದರು.

ಕಿತ್ತೂರಲ್ಲಿ ಎನ್‌ಎಸ್‌ಎಸ್ ವಿಶೇಷ ಶಿಬಿರ



ಬೆಟ್ಟದಪುರ, ನ.29– ಪಿರಿಯಾಪಟ್ಟಣ ತಾಲೂಕಿನ ಕಿತ್ತೂರು ಗ್ರಾಮದ ಸರ್ಕಾರಿ ಪದವಿಪೂರ್ವ ಕಾಲೇಜಿನ ವತಿಯಿಂದ ಕಿತ್ತೂರಮ್ಮನ ದೇವಾಲಯದ ಆವರಣದಲ್ಲಿ ಎನ್‌ಎಸ್‌ಎಸ್ ವಾರ್ಷಿಕ ವಿಶೇಷ ಶಿಬಿರ ನಡೆಯಿತು.

ಪಿರಿಯಾಪಟ್ಟಣ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜು.ಎಂ ಅವರು ಭಾಗವಹಿಸಿ ವಿದ್ಯಾರ್ಥಿಗಳಿಗೆ ಕಾನೂನು ಅರಿವು ಮೂಡಿಸಿದರು. ಸಿವಿಲ್ ನ್ಯಾಯಾಧೀಶರಾದ ಯೋಗೇಶ್.ಎಂ ಮಾತನಾಡಿದರು.

ಎನ್‌ಎಸ್‌ಎಸ್ ಘಟಕದ ವತಿಯಿಂದ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜು.ಎಂ ಹಾಗೂ ಸಿವಿಲ್ ನ್ಯಾಯಾಧೀಶರಾದ ಯೋಗೇಶ್.ಎಂ ಅವರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಪಿರಿಯಾಪಟ್ಟಣ ವಕೀಲರ ಸಂಘದ ಅಧ್ಯಕ್ಷ ಧನಪಾಲ್, ಖಜಾಂಜಿ ಹರೀಶ್, ಕಾರ್ಯದರ್ಶಿ ಕೆ.ಶಂಕರ್, ಪ್ರಾಂಶುಪಾಲರಾದ ಜವರೇಗೌಡ, ಶಿಬಿರಾಧಿಕಾರಿ ಮಲ್ಲೇಶ್.ಜಿ.ಟಿ, ಸಹ ಶಿಬಿರಾಧಿಕಾರಿ ಸತೀಶ್, ಎನ್.ಟಿ, ವಿದ್ಯಾರ್ಥಿಗಳು ಹಾಜರಿದ್ದರು.

ವಾಯ್ಸ್ ಆಫ್ ಕನ್ನಡ ಕಸ್ತೂರಿ ಗಾಯನ ಸ್ಪರ್ಧೆ

ಹುಣಸೂರು, ನ.29– ಹುಣಸೂರಿನ ಕಾವೇರಿ ಎಕ್ಸ್‌ಪ್ರೆಸ್ ಡ್ಯಾನ್ಸ್ ಕ್ಲಾಸ್ ವತಿಯಿಂದ ನಗರದ ಅಂಬೇಡ್ಕರ್ ಭವನದಲ್ಲಿ 70ನೇ ಕನ್ನಡ ರಾಜ್ಯೋತ್ಸವ ಮತ್ತು ವಾಯ್ಸ್ ಆಫ್ ಕನ್ನಡ ಕಸ್ತೂರಿ ಎಂಬ ರಾಜ್ಯ ಮಟ್ಟದ ಗಾಯನ ಸ್ಪರ್ಧೆ ನಡೆಯಿತು.

ಈ ಕಾರ್ಯಕ್ರಮದಲ್ಲಿ ಸಾಮಾಜಿಕ ಜನಸೇವಾ ಕ್ಷೇತ್ರದಡಿ ಅರ್ಜುನ್, ಮಹದೇವಮ್ಮ, ಶೈಕ್ಷಣಿಕ ಕ್ಷೇತ್ರದಡಿ ಮಂಜುಳಾ, ಸತೀಶ್ ಹೆಚ್.ಆರ್ ತರಿಕಲ್, ಕಲಾ ಕ್ಷೇತ್ರದಡಿ ಕುಮಾರ್ ಅರಸೇಗೌಡ, ಗಜೇಂದ್ರ ಕಿರಿಜಾಜಿ, ಅರುಣ್ ಆದಿಶ್ರೀ, ನೃತ್ಯ ವಿಭಾಗದಲ್ಲಿ ಅಂಬಾರಿ ಪರಮೇಶ್, ವೈದ್ಯಕೀಯ ಕ್ಷೇತ್ರದಲ್ಲಿ ಡಾ.ಜೋಗೇಂದ್ರನಾಥ್ ಮತ್ತು ಕ್ರೀಡಾ ಕ್ಷೇತ್ರಕ್ಕೆ ಕುಟ್ಟಿ ಮಸೂದ್ ಇವರೆಲ್ಲರಿಗೂ ಕನ್ನಡ ರಾಜ್ಯೋತ್ಸವ ರಾಜ್ಯ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

ನಂತರ ಮಾಜಿ ನಗರಸಭಾ ಅಧ್ಯಕ್ಷರಾದ ಹೆಚ್.ವೈ.ಮಹದೇವ್ ಮತ್ತು ಸಾಯಿನಾಥ್


ವಿವಿಧ ಕ್ಷೇತ್ರದ ಸಾಧಕರನ್ನು ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು.

ರವರು ಮಾತನಾಡಿದರು. ನಂತರ ಈ ಸಂದರ್ಭದಲ್ಲಿ ನಡೆದ ವಾಯ್ಸ್ ಆಫ್ ಕನ್ನಡ ಕಸ್ತೂರಿ ಎಂಬ ರಾಜ್ಯ ಮಟ್ಟದ ಗಾಯನ ಸ್ಪರ್ಧೆಯ ಮೊದಲ ಹಂತದ ಗಾಯನ ಸ್ಪರ್ಧೆ ನಡೆಸಲಾಯಿತು.

ಈ ವಾಯ್ಸ್ ಆಫ್ ಕನ್ನಡ ಕಸ್ತೂರಿಯ ಗ್ರಾಂಡ್ ಫಿನಾಲೆಗೆ ಆಯ್ಕೆಯಾದ ಹದಿನೈದು ಉತ್ತಮ ಗಾಯಕರಲ್ಲಿ ಮೊದಲ ಹಂತದ ಪ್ರಥಮ ಬಾಲುಮಹೇಂದರ್, ದ್ವಿತೀಯ ಡಾ ಶಶಾಂಕ್ ಮತ್ತು ತೃತೀಯ ಸಿಂಚನ ಬಹುಮಾನ ಪಡೆದು ಕನ್ನಡ ಕಸ್ತೂರಿಯ ಗ್ರಾಂಡ್ ಪಿನಾಲೆಯ ಪ್ರಶಸ್ತಿ ಫೇವರೇಟ್ ಸ್ಪರ್ಧೆಗಳಾಗಿ ಭರವಸೆ ಮೂಡಿಸಿದ್ದಾರೆ.

ಉಳಿದಂತೆ ವೀರಭದ್ರ, ನೇತ್ರಾಮಂಜುನಾಥ್, ಶಾಂತಾರಮೇಶ್ ಹಾಗೂ ಸ್ಥಳೀಯ ಸುದ್ದಿ ವಾಹಿನಿ ಮಾಲೀಕರುಗಳಾದ ಸಾಯಿನಾಥ್, ರಕ್ಷಿತ್ ಕುಮಾರ್, ಪರಮೇಶ್, ಮೂಕನಹಳ್ಳಿ ಮಹದೇವ್ ಮತ್ತು ಕಾವೇರಿ ಎಕ್ಸ್‌ಪ್ರೆಸ್‌ನ ಮಹದೇವ್ ಸ್ವಾಮಿ, ಲಿಂಗರಾಜು, ಅಮೃತ್ ಹಾಜರಿದ್ದರು.

ಸರಗೂರಿನಲ್ಲಿ ಕನ್ನಡ ರಾಜ್ಯೋತ್ಸವ ಆಚರಣೆ


ಪಟ್ಟಣ ಪಂಚಾಯಿತಿ ನೂತನ ಅಧ್ಯಕ್ಷೆ ಚೈತ್ರಾಸ್ವಾಮಿ ರಾಜ್ಯೋತ್ಸವ ಉದ್ಘಾಟಿಸಿದರು.

ಸರಗೂರು: ಪ್ರತಿಯೊಬ್ಬರೂ ಕನ್ನಡ ಭಾಷೆಯ ಬಗ್ಗೆ ಅಭಿಮಾನ ಬೆಳೆಸಿಕೊಂಡು ಉಳಿಸಿ, ಬೆಳೆಸುವ ನಿಟ್ಟಿನಲ್ಲಿ ಮುಂದಾಗಬೇಕು ಎಂದು ಪಟ್ಟಣ ಪಂಚಾಯಿತಿ ನೂತನ ಅಧ್ಯಕ್ಷೆ ಚೈತ್ರಾಸ್ವಾಮಿ ತಿಳಿಸಿದರು.

ಪಟ್ಟಣದ ಪಟ್ಟಣ ಪಂಚಾಯಿತಿ ಕಚೇರಿ ಮುಂಭಾಗ ಶನಿವಾರ ಶ್ರೀಚಾಮುಂಡೇಶ್ವರಿ ಆಟೋ ಚಾಲಕರು, ಮಾಲೀಕರ ಸಂಘದಿಂದ ನಡೆದ ಕನ್ನಡ ರಾಜೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಪಪಂ ಸದಸ್ಯ ಶ್ರೀನಿವಾಸ್ ಮಾತನಾಡಿದರು. ಪಪಂ ಸದಸ್ಯ ಚಲುವಕೃಷ್ಣ, ವರುಣ್, ಬೀದಿ ಬದಿ ವ್ಯಾಪಾರಿಗಳ ಸಂಘದ ಪ್ರಧಾನ ಕಾರ್ಯದರ್ಶಿ ರಂಗಸ್ವಾಮಿ, ಜಗದೀಶ್, ಗುತ್ತಿಗೆದಾರ ರಾಘವೇಂದ್ರ, ಶ್ರೀಕಂಠಸ್ವಾಮಿ, ವಿಷ್ಣು ಅಭಿಮಾನಿ ಸಂಘದ ದೊಡ್ಡಬೈರ, ಕೃಷ್ಣ ಪಳನಿಸ್ವಾಮಿ, ಚಾಮುಂಡೇಶ್ವರಿ ಆಟೋ ಚಾಲಕರು ಮತ್ತು ಮಾಲೀಕರ ಸಂಘದ ಅಧ್ಯಕ್ಷ ರಮೇಶ್, ಗೌರವಾಧ್ಯಕ್ಷ ಚಿಕ್ಕಸ್ವಾಮಿ, ಉಪಾಧ್ಯಕ್ಷ ಉಮೇಶ್, ಪ್ರಧಾನ ಕಾರ್ಯದರ್ಶಿ ವಿಜಯ್, ಸಹ ಕಾರ್ಯದರ್ಶಿ ಭದ್ರ ಖಜಾಂಚಿ ಮಹೇಶ್, ಮಾಜಿ ಅಧ್ಯಕ್ಷ ವಸೀಂ, ಸ್ವಾಮಿ, ಹಾಲಪ್ಪ, ಆನಂದ ಸೇರಿದಂತೆ ಆಟೋ ಚಾಲಕರು, ಮಾಲೀಕರು ಹಾಜರಿದ್ದರು.

ಗ್ರಾಮೀಣ ಭಾಗದಲ್ಲಿ ರೈತ ಸಂಘ ಅಗತ್ಯ

ಮಲ್ಕುಂಡಿ, ನ.29– ಗ್ರಾಮೀಣ ಭಾಗದ ರೈತರ ಸಮಸ್ಯೆಗಳನ್ನು ಬಗೆಹರಿಸಲು ರೈತ ಸಂಘ ಅತ್ಯಂತ ಅಗತ್ಯ ಮತ್ತು ಬಹಳ ಪ್ರಮುಖವಾಗಿದೆ ಎಂದು ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಹೇಳಿದರು.

ನಂಜನಗೂಡು ತಾಲೂಕಿನ ಹೆಡಿಯಾಲ ಗ್ರಾಮದಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ಗ್ರಾಮ ಘಟಕದ ನಾಮಫಲಕವನ್ನು ಅನಾವರಣಗೊಳಿಸಿ ಮಾತನಾಡಿದ ಅವರು ಸರ್ಕಾರ ರೈತರು ಬೆಳೆದ ಬೆಳೆಗಳಿಗೆ ಸೂಕ್ತ ಬೆಲೆ ಕಲ್ಪಿಸಬೇಕು. ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗಳನ್ನು ಮುಂದಿಟ್ಟು ರೈತರು ದಿನ ನಿತ್ಯ ಬಳಸುವ ಪದಾರ್ಥಗಳನ್ನು ಬೆಲೆ ಏರಿಕೆ ಮಾಡಿ ರೈತರ ಜೊತೆ ಚೆಲ್ಲಾಟವಾಡುತ್ತಿದೆ ಎಂದು ದೂರಿದರು.

ಗ್ರಾಮೀಣ ಭಾಗದಲ್ಲಿ ರೈತರು ತಮ್ಮ ಹಕ್ಕುಗಳಿಗಾಗಿ ಸಂಘಟನೆಯ ಮೂಲಕ ಒಗ್ಗಟ್ಟಿನಿಂದ ಹೋರಾಟ ಮಾಡಬೇಕಾಗಿದೆ ಆದ್ದರಿಂದ ಗ್ರಾಮೀಣ ಭಾಗದ ಪ್ರತಿ ಗ್ರಾಮಗಳಲ್ಲೂ ರೈತ ಸಂಘ ಬಹಳ ಮುಖ್ಯವಾಗಿದೆ. ಈ ಭಾಗದಲ್ಲಿ ಕಾಡು ಪ್ರಾಣಿಗಳ ಹಾವಳಿ ಹೆಚ್ಚಾಗಿದೆ. ರೈತರು ಬೆಳೆದ ಫಸಲುಗಳು ಕೈಗೆ ಸಿಗುತ್ತಿಲ್ಲ. ಬೆಳೆ ಹಾನಿಗೆ ಸರ್ಕಾರ ಸೂಕ್ತ ಪರಿಹಾರ ನೀಡಬೇಕು. ಈ ಎಲ್ಲಾ ಪರಿಹಾರಕ್ಕೆ ಗ್ರಾಮೀಣ ಭಾಗದ ಕಾಡಾಂಚಿನ ಗ್ರಾಮಗಳಲ್ಲಿ ಸಂಘಟನೆಯ ಅವಶ್ಯಕತೆ ಇದೆ ಎಂದರು. ಈ ವೇಳೆ ಜಿಲ್ಲಾಧ್ಯಕ್ಷ ಕುಮಾರ್, ಹೊಸ ಕೋಟೆ ಕುಮಾರ್, ನೇತ್ರಾವತಿ, ತಾಲೂಕು ಅಧ್ಯಕ್ಷ ಸಿದ್ದಪ್ಪ ಪ್ರಧಾನ ಕಾರ್ಯದರ್ಶಿ ಪ್ರಕಾಶ್, ಉಪಾಧ್ಯಕ್ಷ ರಮೇಶ್, ಗ್ರಾಪಂ ಸದಸ್ಯ ಅಶ್ರಫ್ ಅಲಿ, ಮುಖಂಡರುಗಳಾದ ಬಳ್ಳೂರಹುಂಡಿ ಶಿವನಾಗಪ್ಪ, ನಾಗರಾಜೇಗೌಡ, ರಂಗಸ್ವಾಮಿ, ಗ್ರಾಮ ಘಟಕದ ಅಧ್ಯಕ್ಷ ರವಿ, ಉಪಾಧ್ಯಕ್ಷ ಶಿವರಾಜು ಇದ್ದರು.


ಹೆಡಿಯಾಲ ಗ್ರಾಮದಲ್ಲಿ ರೈತ ಸಂಘದ ನಾಮಫಲಕ ಉದ್ಘಾಟಿಸಲಾಯಿತು.

ಬನ್ನಿಕುಪ್ಪೆಯಲ್ಲಿ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ

ಹುಣಸೂರು, ನ.29– ತಾಲೂಕಿನ ಬನ್ನಿಕುಪ್ಪೆ ಹಿರಿಯ ಪ್ರಾಥಮಿಕ ಪಾಠಶಾಲೆ ಆವರಣದಲ್ಲಿ 2025–26ನೇ ಸಾಲಿನ ಕ್ಲಸ್ಟರ್ ಮಟ್ಟದ 12 ಕಿರಿಯ ಹಿರಿಯ ಪ್ರಾಥಮಿಕ ಶಾಲೆಗಳ ಪ್ರತಿಭಾ ಕಾರಂಜಿ ಕಾರ್ಯಕ್ರಮವು ಅದ್ದೂರಿಯಗಿ ಜರುಗಿತು.

ಕಾರ್ಯಕ್ರಮವನ್ನು ಕರ್ನಾಟಕ ಪ್ರದೇಶ ಮಹಿಳಾ ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ತ್ರಿವೇಣಿ ಡಿ.ಎಂ ಹಾಗೂ ಸಮಾಜ ಸೇವಕಿ, ಉದ್ಯಮಿ ಹಾಗೂ ಮಾಜಿ ತಾಪಂ ಸದಸ್ಯ ಪ್ರಸನ್ನಕುಮಾರ, ಪತ್ರಕರ್ತ ಚೆಲುವರಾಜು, ಎಸ್‌ಡಿಎಮ್‌ಸಿ ಉಪಾಧ್ಯಕ್ಷೆ ಶಶಿಕಲಾ, ಮುಖ್ಯೋಪಾಧ್ಯಾಯಿನಿ ಇಂದಿರಾ, ಯಜಮಾನ್ ಕೂಸಪ್ಪ ಸೇರಿ ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿದರು.

ಕಾರ್ಯಕ್ರಮದಲ್ಲಿ ತಾಲೂಕು ಏನ್‌ಜಿಒ ಶಶಿಕುಮಾರ್, ಗಿರೀಶ್, ಮರಿಸ್ವಾಮಿ, ರಂಗಸ್ವಾಮಿ, 7 ಹಳ್ಳಿಯ ಯಜಮಾನ್ ಕೂಸಪ್ಪ, ಮಾಜಿ ತಾಪಂ ಸದಸ್ಯ ಪ್ರಸನ್ನಕುಮಾರ್, ಸಿಆರ್‌ಪಿ ತಿಮ್ಮರಾಜು ಹಾಗೂ ಸವಿತಾ, ಬಾಲರಾಜ್ ಎಸ್‌ಡಿಎಂಸಿ ಅಧ್ಯಕ ಬಸವರಾಜ್ ಹಾಗೂ 12 ಶಾಲೆಯ ಮುಖ್ಯೋಪಾಧ್ಯಾಯರು, ಎಸ್‌ಡಿಎಂಸಿ ಅಧ್ಯಕ್ಷರು ಸದಸ್ಯರು ಪೋಷಕರು ಭಾಗವಹಿಸಿದ್ದು, ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನವನ್ನು ನೀಡಲಾಯಿತು.



ಜಯಪುರದಲ್ಲಿ ಸಿಆರ್‌ಪಿಗೆ ಬೀಳ್ಕೊಡುಗೆ



ಮೈಸೂರು: ಮೈಸೂರು ತಾಲೂಕು ಜಯಪುರ ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿಯಾಗಿ ಸೇವೆ ಸಲ್ಲಿಸಿ ವರ್ಗಾವಣೆಗೊಂಡ ಸಿಆರ್‌ಪಿ ಮಹೇಶ್ ಕುಮಾರ್ ಅವರನ್ನು, ಕ್ಲಸ್ಟರ್ ವ್ಯಾಪ್ತಿ ಶಾಲೆಗಳ ಶಿಕ್ಷಕರು ಶಾಲು ಹೊದಿಸಿ, ಹಾರ ಹಾಕಿ, ಪೇಟ ತೊಡಿಸಿ, ಉಡುಗೊರೆ ನೀಡುವ ಮೂಲಕ ಸನ್ಮಾನಿಸಿ, ಬೀಳ್ಕೊಡುಗೆ ನೀಡಿದರು. ಜಯಪುರ ಕ್ಲಸ್ಟರ್ ಸಂಪನ್ಮೂಲ ಕೇಂದ್ರಕ್ಕೆ ನೂತನ ಸಿಆರ್‌ಪಿಯಾಗಿ ನೇಮಕಗೊಂಡ ಲಲಿತಾ ಅವರಿಗೆ ಸ್ವಾಗತಿಸಲಾಯಿತು.

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರು ಹಾಗೂ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಂಟಿ ಕಾರ್ಯದರ್ಶಿ ಡಿ.ಮಾಲೇಗೌಡ, ಸೋಲಿಗರ ಕಾಲೋನಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಮುಖ್ಯಶಿಕ್ಷಕಿ ಭವ್ಯ, ಮಾವಿನಹಳ್ಳಿ ಶಾಲೆ ಮುಖ್ಯಶಿಕ್ಷಕಿ ಗಾಯಿತ್ರಿ, ಬರಡನಪುರ ಶಾಲೆ ಮುಖ್ಯ ಶಿಕ್ಷಕಿ ನೀಲಾಂಬಿಕೆ, ಕೆಂಚಲಗೂಡು ಶಾಲೆ ಮುಖ್ಯ ಶಿಕ್ಷಕಿ ಸುಶೀಲಾ, ಕೆಲ್ಲಹಳ್ಳಿ ಶಾಲೆ ಮುಖ್ಯಶಿಕ್ಷಕಿ ಯಶೋಧ, ಜಯಪುರ ಶಾಲೆಯ ಕಿರಣ್, ಕುಸುಮ, ಆನಂದ, ಹರೀಶ್, ಪ್ರಸನ್ನ, ಸವಿತಾ, ಮಹೇಶ್, ವಿಜಯಲಕ್ಷ್ಮಿ, ಕುಮಾರ್ ಇತರ ಶಾಲೆಯ ಶಿಕ್ಷಕರುಗಳು ಹಾಜರಿದ್ದರು.

ಬೆನಕನಹಳ್ಳಿ ಶಾಲೆಯಲ್ಲಿ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮ


ಬೆನಕನಹಳ್ಳಿ ಗ್ರಾಮದ ಶಾಲೆಯಲ್ಲಿ ಪ್ರತಿಭಾ ಕಾರಂಜಿ ಕಾರ್ಯಕ್ರಮ ನಡೆಸಲಾಯಿತು.

ತಿ.ನರಸೀಪುರ, ನ.29– ತಾಲೂಕಿನ ಮುಸುವಿನಕೊಪ್ಪಲಿನ ಬೆನಕನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮವು ನೆರವೇರಿತು.

1 ರಿಂದ 4ನೇ ತರಗತಿ ಮತ್ತು 5–7ನೇ ತರಗತಿಯ ವಿಭಾಗದ ಮಕ್ಕಳಿಗಾಗಿ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಿ, ತೀರ್ಪುಗಾರರಿಂದ ವಿಜೇತರನ್ನು ಆಯ್ಕೆ ಮಾಡಿ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಬೆನಕನಹಳ್ಳಿ ಹಿರಿಯ ಪ್ರಾಥಮಿಕ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಗಿರೀಶ್, ಉಪಾಧ್ಯಕ್ಷ ನಾರಾಯಣಸ್ವಾಮಿ, ಕಾರ್ಯದರ್ಶಿ ಐ.ಎನ್ ವೆಂಕಟರಾಜು ಮತ್ತು ಸಿಬ್ಬಂದಿ ವರ್ಗದವರು ಹಾಜರಿದ್ದರು.

ಈ ವೇಳೆ ನಿಕಟಪೂರ್ವ ಸಿಆರ್‌ಪಿ ಚೇತನ್ ಹಾಗೂ ನೂತನ ಸಿಆರ್‌ಪಿ ಸಿ.ಲಿಂಗರಾಜು ಅವರನ್ನು ಶಿಕ್ಷಕರ ವತಿಯಿಂದ ಸನ್ಮಾನಿಸಲಾಯಿತು.

ರೈತರ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಬಿಜೆಪಿ ಪ್ರತಿಭಟನೆ

ತಿ.ನರಸೀಪುರ, ನ.29– ರೈತರ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಬಿಜೆಪಿ ಕಾರ್ಯಕರ್ತರು ಪಟ್ಟಣದಲ್ಲಿ ಪ್ರತಿಭಟನೆ ನಡೆಸಿದರು.

ಪಟ್ಟಣದ ವಿದ್ಯೋದಯ ಕಾಲೇಜು ವೃತ್ತದಲ್ಲಿ ಜಮಾವಣೆಗೊಂಡ ತಿ.ನರಸೀಪುರ ಹಾಗೂ ವರುಣ ವಿಧಾನಸಭಾ ಕ್ಷೇತ್ರದ ಬಿಜೆಪಿ ಕಾರ್ಯಕರ್ತರು ಹಾಗೂ ಮುಖಂಡರು ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಧಿಕ್ಕಾರದ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ತಾಲೂಕು ಕಚೇರಿವರೆಗೆ ಮೆರವಣಿಗೆಯಲ್ಲಿ ತೆರಳಿದ ಕಾರ್ಯಕರ್ತರು ತಾಲೂಕು ಕಚೇರಿ ಮುಂದೆ ಧರಣಿ ನಡೆಸಿ ರಾಜ್ಯ ಸರ್ಕಾರದ ಜನ ವಿರೋಧಿ ನಡೆಯ ಬಗ್ಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಮಾತನಾಡಿದ ಜಿಲ್ಲಾ ಮಾಧ್ಯಮ ವಕ್ತಾರ ದಯಾನಂದ್ ಪಟೇಲ್ ಕಾಂಗ್ರೆಸ್ ಸರ್ಕಾರ ತನ್ನ 2023ರ ಚುನಾವಣಾ ಪ್ರಣಾಳಿಕೆಯಲ್ಲಿ ಘೋಷಿಸಿದಂತೆ ಹೈನುಗಾರಿಕೆಗಾಗಿ ಪ್ರತಿ ಲೀಟರ್ ಹಾಲಿಗೆ ನೀಡುವ ಪ್ರೋತ್ಸಾಹ ಧನವನ್ನು ರೂ.5 ರಿಂದ ರೂ. 7ಕ್ಕೆ ಹೆಚ್ಚಿಸಬೇಕು. ಅಲ್ಲದೆ, ಬಾಕಿ ಉಳಿದಿರುವ 620 ಕೋಟಿ ರೂ. ಪ್ರೋತ್ಸಾಹ ಧನ


ರೈತ ಪರ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಬಿಜೆಪಿ ಕಾರ್ಯಕರ್ತರು ತಿ.ನರಸೀಪುರದಲ್ಲಿ ಪ್ರತಿಭಟನೆ ನಡೆಸಿದರು.

ವನ್ನು ತಕ್ಷಣ ಬಿಡುಗಡೆಗೊಳಿಸಬೇಕು. ಬೆಳೆ ಹಾನಿಗೊಳಗಾದ ಎಲ್ಲಾ ರೈತರಿಗೆ ಪ್ರತಿ ಎಕರೆಗೆ ಕನಿಷ್ಠ ರೂ. 25,000 ಪರಿಹಾರ ಬಿಡುಗಡೆಗೊಳಿಸಬೇಕು ಎಂದು ಆಗ್ರಹಿಸಿದರು.

ಸಿಎಂ ಕುರ್ಚಿ ಕದನ ನಗೆಪಾಟಲಿಗೀಡಾಗಿದೆ ಎಂದು ವ್ಯಂಗ್ಯವಾಡಿದ ಅವರು ಕಳೆದ ನಾಲ್ಕು ತಿಂಗಳಿಂದ ರಾಜ್ಯ ಸರ್ಕಾರದ ನಾಟಕವನ್ನು ರಾಜ್ಯದ ಜನತೆ ನೋಡುತ್ತಿದ್ದಾರೆ, ರಾಜ್ಯದ ಮುಖ್ಯ ಮಂತ್ರಿಗಳಿಗೆ ಉಪ ಮುಖ್ಯಮಂತ್ರಿ ಮೇಲೆ ಹಾಗು ಡಿಕೆಶಿಗೆ ಸಿದ್ದರಾಮಯ್ಯರ ಮೇಲೆ ವಿಶ್ವಾಸವಿಲ್ಲ,ಶೇ. 90ರಷ್ಟು ಸಚಿವರು ವಿಧಾನಸೌಧಕ್ಕೆ ಹೋಗುತ್ತಿಲ್ಲ, ಮುಖ್ಯಮಂತ್ರಿಗಳು ಮೈಸೂರಿಗೆ ಸೀಮಿತರಾದರೆ, ಉಪ ಮುಖ್ಯ ಮಂತ್ರಿಗಳು ದೆಹಲಿಯಲ್ಲಿದ್ದಾರೆ, ರಾಜ್ಯದ ರೈತರ ಬೆಳೆಗಳಿಗೆ ಬೆಂಬಲ ಬೆಲೆ, ಹಾಲಿಗೆ ಸಕಾಲಕ್ಕೆ ಪ್ರೋತ್ಸಾಹ ಧನ ಕೊಡಲಾಗದ ದುಷ್ಟ ಕಾಂಗ್ರೆಸ್ ಸರ್ಕಾರಕ್ಕೆ ರೈತರ ಬಗ್ಗೆ ಮಾತನಾಡಲು ಯಾವುದೇ ನೈತಿಕತೆಯಿಲ್ಲ ಹಾಗಾಗಿ ಕೂಡಲೇ ವಿಧಾನಸಭೆ ವಿಸರ್ಜನೆ ಮಾಡುವಂತೆ ಒತ್ತಾಯಿಸಿದರು.

ವರುಣ ಕ್ಷೇತ್ರದ ಅಧ್ಯಕ್ಷ ನಗರ್ಲೆ ಮಹದೇವಸ್ವಾಮಿ ಮಾತನಾಡಿ ರಾಜ್ಯ ಸರ್ಕಾರದ ಪ್ರಸ್ತುತ ಪರಿಸ್ಥಿತಿಯಿಂದ ಯಾವುದೇ ಅಭಿವೃದ್ಧಿ ಕೆಲಸಗಳಾಗುತ್ತಿಲ್ಲ. ಕೇವಲ ಅಧಿಕಾರ ದಕ್ಕಿಸಿಕೊಳ್ಳಲಷ್ಟೇ ರಾಜಕೀಯ ಮುಖಂಡರು ಹೋರಾಟದಲ್ಲಿ ನಿರತರಾಗಿದ್ದಾರೆ. ಡಿ.ಕೆ.ಶಿವಕುಮಾರ್ ಹಾಗು ಸಿದ್ದರಾಮಯ್ಯ ಅಧಿಕಾರದ ಹಸಿವಿಗಾಗಿ ಹೋರಾಟ ಮಾಡಿದರೆ, ರೈತರು ಹೊಟ್ಟೆ ತುಂಬಿಸಿಕೊಳ್ಳಲು ಹೋರಾಟ ಮಾಡುತ್ತಿದ್ದಾರೆ ಎಂದರು.

ಕ್ಷೇತ್ರ ಬಿಜೆಪಿ ಅಧ್ಯಕ್ಷ ಶಿವಕುಮಾರ್ ಮಾತನಾಡಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದಾಗಿನಿಂದ ರೈತರ ಸಮಸ್ಯೆಗಳಿಗೆ ಸೂಕ್ತವಾಗಿ ಸ್ಪಂದಿಸುತ್ತಿಲ್ಲ ಮತ್ತು ಪರಿಹಾರ ನೀಡುತ್ತಿಲ್ಲ ಎಂದರು.

ತಿ.ನರಸೀಪುರ ವಿಧಾನಸಭಾ ಕ್ಷೇತ್ರದ ಅಧ್ಯಕ್ಷ ಶಿವಕುಮಾರ್, ಮಾಜಿ ಜಿಪಂ ಸದಸ್ಯ ಗುರುಸ್ವಾಮಿ, ರೈತ ಮೋರ್ಚಾ ಅಧ್ಯಕ್ಷ ಸೋಮ ಶೇಖರಪ್ಪ, ಮಾದಪ್ಪ, ಪ್ರಧಾನ ಕಾರ್ಯದರ್ಶಿಗಳಾದ ಡಾ.ಮಲ್ಲಿಕಾರ್ಜುನಸ್ವಾಮಿ, ಆಲಗೂಡು ವೆಂಕಟರಮಶೆಟ್ಟಿ, ಜಿಲ್ಲಾ ರೈತ ಮೋರ್ಚಾ ಉಪಾಧ್ಯಕ್ಷ ಹೇಳವರಹುಂಡಿಸಿದ್ದಪ್ಪ ಜಿಲ್ಲಾ ಉಪಾಧ್ಯಕ್ಷ ರಂಗಸಮುದ್ರಕೆ ವಾಸುದೇವ್, ಪುರಸಭಾ ಸದಸ್ಯ ಎಸ್ ಕೆ.ಕಿರಣ್, ಟೌನ್ ಅಧ್ಯಕ್ಷ ಕೆ ನಂಜುಂಡಸ್ವಾಮಿ, ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಕೋಹಟ್ಟಿ ಮಹದೇವಯ್ಯ, ವಿಜೇಂದ್ರ ಅಭಿಮಾನಿ ಬಳಗದ ಅಧ್ಯಕ್ಷ ಮಹೇಶ್, ನಂದೀಶ್, ವರುಣ ಮಂಜು, ಕೆಬ್ಬೆ ಹುಂಡಿ ಶಿವಕುಮಾರ್, ನಿಲಸೋಗೆ ಬಸವರಾಜು, ಕಿರಗಸೂರು ಮಹದೇವಸ್ವಾಮಿ, ನೆರಗ್ಯಾತನಹಳ್ಳಿ ಪುಟ್ಟ ಸ್ವಾಮಿ, ವಕೀಲ ದಾಸಂಯ್ಯ, ಕೆಂಪಯ್ಯನಹುಂಡಿ ಕುಮಾರ್, ಮಾಜಿ ಪುರಸಭಾ ಸದಸ್ಯ ಎನ್.ಲೋಕೇಶ್, ಬಸವ ರಾಜು, ಶರತ್ ಪುಟ್ಟ ಬುದ್ಧಿ, ಮೂಗೂರು ಸಿದ್ದರಾಜು, ಚೌವಳ್ಳಿ ಸಿದ್ದರಾಜು ಹಾಜರಿದ್ದರು.

ಮೈಸೂರು ಮಿತ್ರ

ಧ್ವನಿ ಇಲ್ಲದವರ ಪರ ಹೋರಾಡುವವರೇ ನಿಜವಾದ ವಕೀಲರು

● ಲಾಗೈಡ್ ಕಾನೂನು ಮಾಸ ಪತ್ರಿಕೆಯ ಬೆಳ್ಳಿ ಮಹೋತ್ಸವ ಆಚರಣೆ
● ಲಾಗೈಡ್ ಕ್ಯಾಲೆಂಡರ್, ಡೈರಿ ಬಿಡುಗಡೆ ಮಾಡಿದ ನ್ಯಾ.ಎಂ.ಜಿ.ಉಮಾ



ಮೈಸೂರಿನ ಮಾನಸಗಂಗೋತ್ರಿಯ ವಿಜ್ಞಾನಭವನದಲ್ಲಿ ಲಾಗೈಡ್ ಕನ್ನಡ ಕಾನೂನು ಮಾಸಪತ್ರಿಕೆ ಬೆಳ್ಳಿ ಸಂಭ್ರಮದಲ್ಲಿ ನಿವೃತ್ತ ನ್ಯಾಯಾಧೀಶರು ಮತ್ತು ಅಧಿಕಾರಿಗಳನ್ನು ಅಭಿನಂದಿಲಾಯಿತು.

ಮೈಸೂರು,ನ.29(ಜಿಎ)–ಧ್ವನಿ ಇಲ್ಲದವರ ಧ್ವನಿಯಾಗಿ ನ್ಯಾಯಾಕ್ಕಾಗಿ ಹೋರಾಡುವವರೇ ನಿಜವಾದ ವಕೀಲರು ಎಂದು ಹೈಕೋರ್ಟ್ ನ್ಯಾಯಮೂರ್ತಿ ಎಂ.ಜಿ.ಉಮಾ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಮಾನಸಗಂಗೋತ್ರಿಯ ವಿಜ್ಞಾನಭವನದಲ್ಲಿ ಲಾಗೈಡ್ ಕನ್ನಡ ಕಾನೂನು ಮಾಸಪತ್ರಿಕೆ ಬೆಳ್ಳಿ ಸಂಭ್ರಮದಲ್ಲಿ ಭಾಗವಹಿಸಿ ಲಾಗೈಡ್ ಕ್ಯಾಲೆಂಡರ್ ಹಾಗೂ ಡೈರಿ ಬಿಡುಗಡೆಗೊಳಿಸಿ ಮಾತನಾಡಿದ ಅವರು, ವಕೀಲರು ಭಾರತದ ಸ್ವಾತಂತ್ರ್ಯ ಹೋರಾಟ, ಭಾರತದ ಸುವಿಧಾನದ ರಚನೆ, ಸರ್ಕಾರ ರಚನೆ ಸಂದರ್ಭದಲ್ಲಿ ದೊಡ್ಡ ಪಾತ್ರ ವಹಿಸಿದ್ದಾರೆ ಎಂದರು.

ಇಂದು ಯುವ ವಕೀಲರು ಕೇಸ್ ಸೋತಿದ್ದರೆ ಅದಕ್ಕೆ ಬೇಸರ ಮಾಡಿಕೊಳ್ಳಬಾರದು. ಅದನ್ನು ದೊಡ್ಡ ಅನುಭವ ಎಂದು ತಿಳಿದುಕೊಳ್ಳಿ. ನಾವುಗಳು ಇದೇ ರೀತಿ ಸೋಲು ಗೆಲುವು ಎಂಬ ಸಾಕಷ್ಟು ಪಾಠ ಕಲಿತು ಇಂದು ಈ ಹಂತಕ್ಕೆ ತಲುಪಿದ್ದೇವೆ. ಆಸ್ಪತ್ರೆಗೆ ಹೋದಾಗ ಹೇಗೆ ಒಬ್ಬ ರೋಗಿಯನ್ನು ವೈದ್ಯರು ಶುಶ್ರೂಷೆ ಮಾಡುತ್ತಾರೋ ಹಾಗೇ ವಕೀಲರು ತಮ್ಮ ಕಕ್ಷಿದಾರರನ್ನು ಸೂಕ್ಷ್ಮವಾಗಿ ನೋಡಿಕೊಳ್ಳಬೇಕು ಎಂದು ತಿಳಿಸಿದರು.

ವಕೀಲರು ವೃತ್ತಿಪರತೆಯನ್ನು ಅಳವಡಿಸಿಕೊಳ್ಳಿ. ಇಂದು ಎಲ್ಲರೂ ನನಗೆ ಕೌಶಲ್ಯವಿದೆ. ಎಲ್ಲವನ್ನು ಸುಲಭವಾಗಿ ಅರಿತುಕೊಳ್ಳುತ್ತೇನೆ ಎಂಬ ಭಾವದಲ್ಲಿದ್ದಾರೆ ಆದರೆ, ವಕೀಲರಿಗೆ ಕೌಶಲ್ಯಕಿಂತ ಚಾರಿತ್ರ್ಯ ಬಹಳ ಮುಖ್ಯ ಅದನ್ನು ಉಳಿಸಿಕೊಂಡು ಎಲ್ಲರೂ ಗೌರವಿಸುವ ವ್ಯಕ್ತಿತ್ವ ಬೆಳೆಸಿಕೊಳ್ಳಿ ಎಂದು ಕಿರಿಯರಿಗೆ ಸಲಹೆ ನೀಡಿದರು.

ಕೆಲವೇ ದಿನಗಳಲ್ಲಿ ಎಲ್ಲರೂ ಹೊಸ ವರ್ಷಕ್ಕೆ ಅಣಿಯಾಗಿದ್ದೇವೆ. ಕ್ಯಾಲೆಂಡರ್ ಎಂಬುದು ಕೇವಲ ಪುಟವಲ್ಲ. ಹೊಸ ಅವಕಾಶಗಳನ್ನು ತೆರೆದಿಡುತ್ತದೆ. ಪ್ರತಿ ತಿಂಗಳು ಪ್ರತಿಯೊಬ್ಬರಿಗೂ ಮೂವತ್ತು ಅವಕಾಶ ನೀಡುತ್ತದೆ. ಅದನ್ನು ಬಳಸಿಕೊಳ್ಳಬೇಕು. ಎಲ್ಲಾ ದಿನವೂ ಆಶಾಕಿರಣವಾಗಿದೆ ಎಂದರು.

ಯಾವುದೇ ಕ್ಷೇತ್ರದಲ್ಲಿ ಕೆಲಸ ಮಾಡಿದರೂ. ಆಯಾ ಕ್ಷೇತ್ರದಲ್ಲಿ ನಾವು ನಿಷ್ಠರಾಗಿ ದುಡಿಯಬೇಕು. ಸಮಯ ಒಂದೇ ಗತಿಯಲ್ಲಿ ಸಾಗುತ್ತದೆ. ಸಮಯ ದಿನಗಳಾಗಿ, ದಿನ ತಿಂಗಳಾಗುತ್ತದೆ. ಇಂದಿನ ತಪ್ಪು ತಿದ್ದುಕೊಳ್ಳಲು ನಾಳೆ ಅವಕಾಶವಿರುತ್ತದೆ. ಆ ರೀತಿಯಲ್ಲಿ 2025ರಲ್ಲಿ ತಪ್ಪು ಮಾಡಿದರೆ ಅದನ್ನು ಪಾಠ ಎಂದು ತಿಳಿದುಕೊಂಡು 2026 ರಲ್ಲಿ ಮುನ್ನುಗ್ಗಿ ಎಂದು ಕಿವಿಮಾತು ಹೇಳಿದರು.

ಒಂದು ಪತ್ರಿಕೆ 25 ವರ್ಷ ಪೂರೈಸುವುದು ಪ್ರಮುಖ ಘಟ್ಟವಾಗಿದೆ. 24 ವರ್ಷಗಳ ಹಿಂದೆ ಹೆಚ್.ಎನ್. ವೆಂಕಟೇಶ್ ಲಾಗೈಡ್ ಪತ್ರಿಕೆ ಮಾಡಲು ಅವರ ಪತ್ನಿ ಕಾರಣ. ಯಾರಾದರೂ ಎರಡು ಕ್ಷೇತ್ರಗಳನ್ನು ಆಯ್ಕೆ ಮಾಡಿಕೊಂಡರೆ ಕೇವಲ ಒಂದು ಕ್ಷೇತ್ರವನ್ನು ಸದುಪಯೋಗ ಪಡಿಸಿಕೊಳ್ಳುತ್ತಾರೆ. ಆದರೆ, ವೆಂಕಟೇಶ್ ಪತ್ರಿಕೋದ್ಯಮ ಮತ್ತು ವಕೀಲ ವೃತ್ತದಲ್ಲಿಯೂ ಯಶಸ್ಸು ಕಂಡಿದ್ದಾರೆ. ವೆಂಕಟೇಶ್ ಹಿಂದೆ ದೊಡ್ಡ ಬಳಗವಿದೆ. ಅವರ ಬಳಗ ಪ್ರತಿಯೊಂದು ಹಂತದಲ್ಲಿ ಅವರೊಟ್ಟಿಗೆ ಬೆನ್ನೆಲುಬಾಗಿ ಇದೆ. ಇದು ಹೀಗೆ ಉತ್ತಮವಾಗಿ ಮುಂದುವರೆಯಲಿ ಎಂದು ಲಾಗೈಡ್ ಬೆಳ್ಳಿ ಹಬ್ಬಕ್ಕೆ ಶುಭ ಹಾರೈಸಿದರು.

ನಿವೃತ್ತ ಐಜಿಪಿ ಡಿ.ಎನ್.ಮುನಿಕೃಷ್ಣ ಮಾತನಾಡಿ, ನಾವು ಸಾಮಾಜಿಕ ಬದ್ಧತೆ ಹಾಗೂ ನಮ್ಮ ಇತಿಹಾಸವನ್ನು ಮರೆಯುತ್ತಿದ್ದೇವೆ. ಎಷ್ಟೆಷ್ಟು ವಿದ್ಯಾವಂತರಾಗುತ್ತಿದ್ದೇವೋ ಅಷ್ಟಷ್ಟೂ ಒರಟು ತನವನ್ನು ಬೆಳೆಸಿಕೊಳ್ಳುತ್ತಿದ್ದೇವೆ ಎಂದು ಬೇಸರ ವ್ಯಕ್ತಪಡಿಸಿದರು.

ಇಂದು ಜಗತ್ತು ತಂತ್ರಜ್ಞಾನದಿಂದ ಒಟ್ಟಿಗೆ ಹೋಗುತ್ತಿದೆ. ಆದರೆ ರಾಜಕೀಯ ಕಾರಣದಿಂದ ಬೇರೆ ಬೇರೆ ಮಾರ್ಗದಲ್ಲಿ ಸಾಗುತ್ತಿದೆ. ಇದನ್ನು ನೋಡಿದರೆ ಬಹಳ ಆತಂಕವಾಗುತ್ತದೆ. ಪ್ರಜಾಪ್ರಭುತ್ವ ಎಂಬ ಹೆಸರಿನಲ್ಲಿ ಅನೇಕರು ವಾಕ್ ಸ್ವಾತಂತ್ರ್ಯವನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಕಾವೇರಿ ನೀರಾವರಿ ನಿಗಮದ ಎಂಡಿ ಮಹೇಶ್, ನಿವೃತ್ತ ನ್ಯಾಯಾಧೀಶರಾದ ಎಸ್.ಹೆಚ್.ರಾಜಾಸೋಮಶೇಖರ್, ಶಶಿಕಲಾ, ಸಿ.ಜಿ. ಹುನಗುಂದ, ಬಸವರಾಜ್ ಎಸ್.ಸಪ್ಪಣ್ಣನವರ್, ಎಸ್.ಹೆಚ್.ಹೊಸಗೌಂಡರ್, ಅಂಗಡಿ ಹಿರೇಮಠ್ ಹಾಗೂ ಜೆಎಸ್ಎಸ್ ಕಾನೂನು ಕಾಲೇಜಿನ ಕಾರ್ಯನಿರ್ವಾಹಕ ಅಧಿಕಾರಿ ಪ್ರೊ.ಸುರೇಶ್ ಅವರನ್ನು ಅಭಿನಂದಿಸಲಾಯಿತು.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜ್, ಶಾಸಕ ಎ.ವಿಂಜು, ಹಿರಿಯ ವಕೀಲ ಎಂ.ಡಿ.ಹರೀಶ್ ಕುಮಾರ್ ಹೆಗ್ಡೆ, ಲಾಗೈಡ್ ಕನ್ನಡ ಕಾನೂನು ಮಾಸ ಪತ್ರಿಕೆ ಗೌರವ ಸಂಪಾದಕ ಹೆಚ್.ಎನ್.ವೆಂಕಟೇಶ್ ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಆಂಧ್ರ ಕಿಂಗ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಐ ಆ್ಯಮ್ ಗಾಡ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ತೇರೇ ಇಷ್ಕ್ ಮೇ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ನಾಯಿ ಇದೆ ಎಚ್ಚರಿಕೆ (ಕ)	4 ಪ್ರದರ್ಶನಗಳು
ಗಾಯಿತ್ರಿ	
ರಾಧೇಯ (ಕ)	4 ಪ್ರದರ್ಶನಗಳು
ರಾಜಕಮಲ್	
ತೇರೇ ಇಷ್ಕ್ ಮೇ (ತ)	4 ಪ್ರದರ್ಶನಗಳು
ಸಂಗಂ	
ಓಎಲ್‌ಸಿ (ಕ)	4 ಪ್ರದರ್ಶನಗಳು
ಲಿಡೋ	
ಫ್ಲರ್ಟ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ನಾಯಿ ಇದೆ ಎಚ್ಚರಿಕೆ (ಕ)	4 ಪ್ರದರ್ಶನಗಳು

ಮೈಸೂರಿನ ಆರ್ಥಿಕತೆಯ ಬೆಳವಣಿಗೆಗೆ ವಾಣಿಜ್ಯ, ಕೈಗಾರಿಕೆಗಳ ಕೊಡುಗೆ ಗಣನೀಯ

ಕನ್ನಡ ರಾಜ್ಯೋತ್ಸವ, ಸಾಧಕರಿಗೆ ಸನ್ಮಾನ



ಮೈಸೂರು ಕೈಗಾರಿಕಾ ಮತ್ತು ವಾಣಿಜ್ಯ ಸಂಸ್ಥೆಯಲ್ಲಿ ಶುಕ್ರವಾರ ಡಾ.ಸಾರಿಕಾ ಪ್ರಸಾದ್, ಅಂಶಿ ಪ್ರಸನ್ನಕುಮಾರ್, ಲೋಹಿತೇಶ್ ನಳಿನ ಅವರನ್ನು ಸನ್ಮಾನಿಸಲಾಯಿತು. ಎಡಿಸಿ ಡಾ.ಪಿ. ಶಿವರಾಜು, ಸಂಸ್ಥೆಯ ಅಧ್ಯಕ್ಷ ಕೆ.ಬಿ. ಲಿಂಗರಾಜು, ಪದಾಧಿಕಾರಿಗಳಾದ ಆರ್. ಆನಂದ್, ಎ.ಕೆ. ಶಿವಾಜಿರಾವ್, ವಿನೋದ್ ಜೈನ್, ಎಸ್.ಜಿ. ಅಶೋಕ್ ಮೊದಲಾದವರು ಉಪಸ್ಥಿತರಿದ್ದರು.

ಮೈಸೂರು, ನ. 29– ಮೈಸೂರಿನ ಆರ್ಥಿಕತೆಯ ಬೆಳವಣಿಗೆಗೆ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಗಳ ಕೊಡುಗೆ ಅಪಾರವಿದೆ ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ಪಿ. ಶಿವರಾಜು ಶ್ಲಾಘಿಸಿದರು.

ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯು ಶುಕ್ರವಾರ ಏರ್ಪಡಿಸಿದ್ದ ಕನ್ನಡ ರಾಜ್ಯೋತ್ಸವವನ್ನು ಉದ್ಘಾಟಿಸಿ ಮಾತನಾಡಿದ ಅವರು, ವಿಶ್ವದಲ್ಲಿ ದೇಶದ ಆರ್ಥಿಕತೆ ಚೆನ್ನಾಗಿದೆ ಅದೇ ರೀತಿ ದೇಶದ ಜಿಡಿಪಿಯಲ್ಲಿ ಕರ್ನಾಟಕ ಎರಡನೇ ಸ್ಥಾನದಲ್ಲಿ. ರಾಜ್ಯದಲ್ಲಿ ಮೈಸೂರು ಆರ್ಥಿಕಾಭಿವೃದ್ಧಿಗೆ ತನ್ನದೇ ಆದ ಕೊಡುಗೆ ನೀಡುತ್ತಿದೆ ಎಂದರು.

ಕನ್ನಡ ಸತ್ವಯುತ ಭಾಷೆ. ಇಡೀ ಪ್ರಪಂಚದಲ್ಲಿಯೇ ಅತ್ಯಂತ ಸುಂದರ ಭಾಷೆ. ಪ್ರಪಂಚದಲ್ಲಿ ಇನ್ನೂ ಎಷ್ಟೋ ಭಾಷೆಗಳು ಪ್ರಚಲಿತಕ್ಕೆ ಬರುವ ಮುಂಚೆನಿಂದಲೂ ಹಾಗೂ ಲಿಪಿಗಳನ್ನು ಹೊಂದಿಲ್ಲದ ಕಾಲದಿಂದಲೂ ಕನ್ನಡ ಭಾಷೆ ಇದೆ. ಪಂಪ, ರನ್ನ, ಜನ್ನರ ಕಾಲದಿಂದ ಈ ಕಾಲಘಟ್ಟದವರೆಗೆ ಕನ್ನಡ ಬೆಳೆದು ಬಂದಿದೆ. ಮಾತನಾಡುವಂತೆ ಬರೆಯುವ, ಬರೆದಂತೆ ಮಾತನಾಡುವ ಭಾಷೆ ಕನ್ನಡ ಎಂದರು.

ಮಕ್ಕಳನ್ನು ಯಾವುದಾದರೂ ಮಾಧ್ಯಮದಲ್ಲಿ ಓದಿಸಿದರೂ ಮನೆಯಲ್ಲಿ ಕಡ್ಡಾಯವಾಗಿ ಕನ್ನಡ ಕಲಿಸಬೇಕು. ಕನ್ನಡದಲ್ಲಿಯೇ ಮಾತನಾಡಬೇಕು ಎಂದರು.

ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಕೆ.ಬಿ. ಲಿಂಗರಾಜು ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷ ಆರ್. ಆನಂದ್, ಗೌ.ಕಾರ್ಯದರ್ಶಿ ಎ.ಕೆ ಶಿವಾಜಿ ರಾವ್, ಗೌ.ಜಂಟಿ ಕಾರ್ಯದರ್ಶಿ ವಿನೋದ್ ಜೈನ್, ಗೌ.ಖಜಾಂಚಿ ಎಸ್.ಜಿ. ಅಶೋಕ್, ವಸಂತಕುಮಾರಿ ಮೊದಲಾದವರು ಇದ್ದರು.

ಇದೇ ಸಂದರ್ಭದಲ್ಲಿ ಈ ಬಾರಿಯ ರಾಜ್ಯ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕೃತ ಕುಂಬಾರಕೊಪ್ಪಲು ಹೆಬ್ಬಾಳು ಪಿಎಂ ಉನ್ನತೀಕರಿಸಿದ ಸರ್ಕಾರಿ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ಲೋಹಿತೇಶ್ ನಳಿನ, ಜೆಎಸ್ಎಸ್ ಆಸ್ಪತ್ರೆ ಮಕ್ಕಳ ತಜ್ಞೆ ಡಾ.ಸಾರಿಕಾ ಪ್ರಸಾದ್ ಅವರನ್ನು ಸನ್ಮಾನಿಸಲಾಯಿತು.

ಕಲೋತ್ಸವದಲ್ಲಿ ಸುತ್ತೂರು ಜೆಎಸ್ಎಸ್ ಪ್ರೌಢಶಾಲಾ ವಿದ್ಯಾರ್ಥಿಗಳ ಸಾಧನೆ



ಸುತ್ತೂರು, ನ. 29– ನಂಜನಗೂಡಿನ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ವತಿಯಿಂದ ಕುಪ್ಪರವಳ್ಳಿಯ ಸರ್ಕಾರಿ ಪ್ರೌಢಶಾಲೆಯಲ್ಲಿ ಏರ್ಪಡಿಸಿದ್ದ ಹೋಬಳಿ ಮಟ್ಟದ ಕಲೋತ್ಸವದ ವಿವಿಧ ಸ್ಪರ್ಧೆಗಳಲ್ಲಿ ಸುತ್ತೂರಿನ ಜೆಎಸ್ಎಸ್ ಪ್ರೌಢಶಾಲೆಯ ವಿದ್ಯಾರ್ಥಿಗಳು ಭಾಗವಹಿಸಿ 10 ವಿದ್ಯಾರ್ಥಿಗಳು ಪ್ರಥಮ ಸ್ಥಾನ ಪಡೆದು ತಾಲೂಕು ಮಟ್ಟಕ್ಕೆ ಆಯ್ಕೆಯಾಗಿ ಶಾಲೆಗೆ ಕೀರ್ತಿ ತಂದಿದ್ದಾರೆ.

ವೈಯಕ್ತಿಕ ಸ್ಪರ್ಧೆ : ಗಂಗಾಧರ ಜತ್ತಿ – ಭಾವಗೀತೆ ಪ್ರಥಮ, ಉಷಾ – ಹಿಂದಿ ಭಾಷಣ ಪ್ರಥಮ, ಯಶೋಧ– ಸಂಸ್ಕೃತ ಭಾಷಣ ಪ್ರಥಮ, ಶ್ರೇಯ – ಭರತನಾಟ್ಯ ಪ್ರಥಮ, ದೃಷ್ಠಿ – ರಂಗೋಲಿ ಪ್ರಥಮ, ಲಿಂಗರಾಜು–ಮಿಮಿಕ್ರಿ ಪ್ರಥಮ, ಸಾವಿತ್ರಿ, ಚರ್ಚಾ ಸ್ಪರ್ಧೆ ಪ್ರಥಮ ಸ್ಥಾನ ಪಡೆದಿದ್ದಾರೆ. ಶಿವಾನಂದ ಕನ್ನಡ ಭಾಷಣ ದ್ವಿತೀಯ, ಖುತ್ವಿಕಾ – ಸಂಸ್ಕೃತ ಭಾಷಣ ದ್ವಿತೀಯ, ಭಾಗ್ಯಶ್ರೀ – ಪ್ರಬಂಧ ಸ್ಪರ್ಧೆ ದ್ವಿತೀಯ, ಟಿ.ಎಂ.ಚಂದನಾ, ಕವನವಾಚನ ಸ್ಪರ್ಧೆ ದ್ವಿತೀಯ, ತನುಜ ತೃತೀಯ ಸ್ಥಾನ ಪಡೆದಿದ್ದಾರೆ. ಈಶ್ವರಿ ಆಶುಭಾಷಣ ಸ್ಪರ್ಧೆ ದ್ವಿತೀಯ, ದೇಸಾಯಿ ರಘು ತೃತೀಯ ಸ್ಥಾನ ಪಡೆದಿದ್ದಾರೆ. ಸೌಮ್ಯ – ಧಾರ್ಮಿಕ ಪಠಣ ತೃತೀಯ, ಪ್ರತೀಕ್ಷಾ – ಹಿಂದಿ ಭಾಷಣ ತೃತೀಯ, ಲಲಿತಾ ಜನಪದ ಗೀತೆ ತೃತೀಯ, ರಕ್ಷಿತಾ – ಭಾವಗೀತೆ ತೃತೀಯ, ಶಾಂಭವಿ– ಭರತನಾಟ್ಯ ತೃತೀಯ ಸ್ಥಾನ ಗಳಿಸಿದ್ದಾರೆ.

ಸಾಮೂಹಿಕ ಸ್ಪರ್ಧೆ : ಪಂಪನಗೌಡ ಮತ್ತು ಕಿಶನ್ ಪಟೇಲ್ ರಸಪ್ರಶ್ನೆ ಪ್ರಥಮ, ಚೇತನ ಮತ್ತು ಪ್ರಜ್ವಲ್ ತೃತೀಯ ಸ್ಥಾನ ಪಡೆದಿದ್ದಾರೆ. ಅಂಕಿತ ಮತ್ತು ತಂಡ ಜನಪದ ನೃತ್ಯ ದ್ವಿತೀಯ, ಸುಪ್ರಿಯಾ ಮತ್ತು ತಂಡ ತೃತೀಯ ಸ್ಥಾನಗಳನ್ನು ಗಳಿಸಿದ್ದಾರೆ.

ಇಂಗ್ಲಿಷ್ ವ್ಯಾಮೋಹದಿಂದ ಹೊರಬಂದು ಮಕ್ಕಳಿಗೆ ಕನ್ನಡ ಕಲಿಸಿ: ಎ.ಇ. ರಘು

ಇಲವಾಲ ಕಲಾಭಾರತಿಯಲ್ಲಿ ರಾಜ್ಯೋತ್ಸವ, ವಾಲ್ಮೀಕಿ, ಕನಕದಾಸರ ಜಯಂತಿ



ಇಲವಾಲದ ಕಲಾಭಾರತಿ ವಿದ್ಯಾಸಂಸ್ಥೆಯಲ್ಲಿ ಶುಕ್ರವಾರ ಕನ್ನಡ ರಾಜ್ಯೋತ್ಸವ, ವಾಲ್ಮೀಕಿ ಹಾಗೂ ಕನಕದಾಸರ ಜಯಂತಿಯನ್ನು ಮಹದೇಶ್ವರ ಬೆಟ್ಟ ಪ್ರಾಧಿಕಾರದ ಕಾರ್ಯದರ್ಶಿ ಎ.ಇ. ರಘು ಉದ್ಘಾಟಿಸಿದರು.

ಮೈಸೂರು, ನ 29– ಪೋಷಕರು ಇಂಗ್ಲಿಷ್ ಭಾಷೆಯ ವ್ಯಾಮೋಹದಿಂದ ಹೊರಬಂದು ಮಕ್ಕಳಿಗೆ ಕನ್ನಡ ಕಲಿಸಬೇಕು, ಸರ್ಕಾರಿ ಶಾಲೆಗಳನ್ನು ಉಳಿಸಬೇಕು ಎಂದು ಚಾಮರಾಜನಗರ ಜಿಲ್ಲೆ ಮಲೆಮಹದೇಶ್ವರ ಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎ.ಇ. ರಘು ಹೇಳಿದರು.

ಕರ್ನಾಟಕ ರಾಜ್ಯ ವೈಚಾರಿಕ ಚಿಂತಕರ ವೇದಿಕೆಯಿಂದ ಇಲವಾಲದ ಕಲಾಭಾರತಿ ವಿದ್ಯಾಸಂಸ್ಥೆ ಆವರಣದಲ್ಲಿ ಶುಕ್ರವಾರ ಆಯೋಜಿಸಿದ್ದ 70ನೇ ಕನ್ನಡ ರಾಜ್ಯೋತ್ಸವ, ವಾಲ್ಮೀಕಿ ಹಾಗೂ ಕನಕದಾಸ ಜಯಂತಿ ಮತ್ತು ಮಕ್ಕಳ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಕ್ಕಳಿಗೆ ಪ್ರಾಥಮಿಕ ಶಿಕ್ಷಣವನ್ನು ಕನ್ನಡದಲ್ಲಿ ಕೊಟ್ಟರೆ, ಅವರು ಮುಂದೆ ಜಗತ್ತಿನ ಎಲ್ಲ ಭಾಷೆಯನ್ನೂ ಕಲಿಯಬಹುದು. ಅಂತಹ ಸಾಮರ್ಥ್ಯ ನಮ್ಮ ಮಾತೃ ಭಾಷೆಗಿದೆ. ಈ ಭಾಷೆಗೆ ಅಪಾರವಾದ ಇತಿಹಾಸವಿದೆ ಸ್ವಾತಂತ್ರ್ಯ ಭಾರತದ ನಂತರ ಭಾಷಾವಾರು ಪ್ರಾಂತ್ಯ ರಚನೆಯಾಯಿತು. ಆದರೆ, ಭಾರತದ ಎಲ್ಲ ಭಾಷೆಗಳಲ್ಲಿ ಹೆಚ್ಚು ಜ್ಞಾನಪೀಠ ಬಂದಿರುವುದು ಕನ್ನಡಕ್ಕೆ ಮಾತ್ರ. ಇದನ್ನು ಗಮನಿಸಿದರೆ ಕನ್ನಡಿಗರು ಎಷ್ಟು ವಿದ್ವಾಂಸರು ಎಂಬುದನ್ನು ಅರಿಯಬಹುದು ಎಂದು ತಿಳಿಸಿದರು.

ಕೆಎಸ್ಒಯು ಶಿವಮೊಗ್ಗ ಪ್ರಾದೇಶಿಕ ಕೇಂದ್ರದ ಸ್ವಯಂನಿವೃತ್ತ ನಿರ್ದೇಶಕ ಎಚ್.ಎಲ್. ಮೋಹನರಾಜ್ ಮಾತನಾಡಿ, ಕನ್ನಡ ಅತ್ಯಂತ ಶ್ರೀಮಂತವಾದ ಭಾಷೆ. ಅದು ಈಗಾಗಲೇ ಸಾಕಷ್ಟು ಬೆಳೆದಿದೆ. ಅದನ್ನು ಬಳಸುವ ಮೂಲಕ ಉಳಿಸಿಕೊಂಡು ಹೋಗಬೇಕಷ್ಟೆ ಎಂದು ಹೇಳಿದರು.

ರಾಜ್ಯ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಅಂಶಿ ಪ್ರಸನ್ನಕುಮಾರ್, ಎಲ್. ಉಡಿಗಾಲ ಮಹದೇವಪ್ಪ, ಜಿಲ್ಲಾ ಮಟ್ಟದ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ 'ಮೈಸೂರು ಮಿತ್ರ' ಹಿರಿಯ ವರದಿಗಾರ ಎಂ.ಟಿ. ಯೋಗೇಶಕುಮಾರ್, ಎಂ. ಮಹೇಶ್, ಕೆ.ಬಿ. ರಮೇಶ ನಾಯಕ, ಹಂಪಾ ನಾಗರಾಜ್, ಹಂ.ಲಕ್ಕೇಗೌಡ, ಜಿ.ಎಸ್.ರವಿಶಂಕರ್, ಡಿ.ಮಂಜುನಾಥ, ಮೊಗಣ್ಣ, ಡೈರಿ ವೆಂಕಟೇಶ್., ಬಿ.ಕೆ. ಜ್ಞಾನ ಪ್ರಕಾಶ್, ಮಂಚಮ್ಮ ಸಿ. ಮಂಜುನಾಥ್, ಕೆ.ವಿ. ಮಲ್ಲೇಶ್, ಎಂ. ಮೊಗಣ್ಣಾಚಾರ್, ಎಸ್.ಎಲ್. ಕುಮಾರ್ ಶ್ರೀನಿವಾಸ ಮೂರ್ತಿ ಅವರನ್ನು ಸನ್ಮಾನಿಸಲಾಯಿತು.

ಕಲಾಭಾರತಿ ವಿದ್ಯಾಸಂಸ್ಥೆ ಸಂಸ್ಥಾಪಕ ಹಂ.ಲಕ್ಕೇಗೌಡ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ರಾಜ್ಯ ವೈಚಾರಿಕ ಚಿಂತಕರ ವೇದಿಕೆ ಅಧ್ಯಕ್ಷ ಕ್ಯಾತನಹಳ್ಳಿ ಪ್ರಕಾಶ್ ಎಚ್., ನಿವೃತ್ತ ಉಪ ಅರಣ್ಯ ಸಂರಕ್ಷಣಾಧಿಕಾರಿ ಎಸ್.ಪಿ. ಮಹಾದೇವ್, ಡಾ.ಎ. ಮಂಜುಳಾ, ಮಹಾರಾಣಿ ವಿಜ್ಞಾನ ಮಹಿಳಾ ಕಾಲೇಜಿನ ಸಹ ಪ್ರಾಧ್ಯಾಪಕಿ ಕಾವೇರಿ ಪ್ರಕಾಶ್, ಜವರಯ್ಯ, ಹರೀಶ್ ಮೊಗಣ್ಣ, ಸುರೇಶ್ಚಂದ್ರ, ದೊರೆಸ್ವಾಮಿ ಮೊದಲಾದವರು ಪಾಲ್ಗೊಂಡಿದ್ದರು.

ನಿವೃತ್ತ ಶುಶ್ರೂಷಾಧಿಕಾರಿಗಳ ಸಂಘದಿಂದ ಕನ್ನಡ ರಾಜ್ಯೋತ್ಸವ ಆಚರಣೆ



ಮೈಸೂರು, ನ. 29– ಮೈಸೂರಿನ ನಿವೃತ್ತ ಶುಶ್ರೂಷಾಧಿಕಾರಿಗಳ ಸಂಘದ ವತಿಯಿಂದ ಜೆಎಲ್‌ಬಿ ರಸ್ತೆಯಲ್ಲಿರುವ ಹೋಟೆಲ್ ಶ್ರೀ ಗುರು ರೆಸಿಡೆನ್ಸಿ ಸಭಾಂಗಣದಲ್ಲಿ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಮುಖ್ಯ ಅತಿಥಿಗಳಾಗಿ ಚೆನ್ನೈನ ದಕ್ಷಿಣ ರೈಲ್ವೆ ಆಸ್ಪತ್ರೆಯಲ್ಲಿ ಮುಖ್ಯ ಶುಶ್ರೂಷ ಅಧೀಕ್ಷಕರಾಗಿ ಕಾರ್ಯನಿರ್ವಹಿಸುತ್ತಿರುವ ಹಾಗೂ ತಮಿಳುನಾಡಿನ ಜನಪ್ರಿಯ ಲೇಖಕ ಜಯ ಮೋಹನ್ ಅವರ ಪುಸ್ತಕವನ್ನು ಕನ್ನಡಕ್ಕೆ ಅನುವಾದ ಮಾಡಿರುವ ಕೊಡಗಿನ ಸಾಹಿತಿ ಶ್ರೀಮತಿ ಶಾಂತಿ ಕೆ. ಅಪ್ಪಣ್ಣ ಭಾಗವಹಿಸಿದ್ದರು.

ಇದೇ ವೇಳೆ ಕೇಂದ್ರ ಸಾಹಿತ್ಯ ಅಕಾಡೆಮಿ ಯುವ ಪುರಸ್ಕಾರ, ಕೊಡಗಿನ ಗೌರಮ್ಮ ಪ್ರಶಸ್ತಿ, ದ.ರಾ. ಬೇಂದ್ರೆ ಪ್ರಶಸ್ತಿ, ಯು ಆರ್ ಅನಂತಮೂರ್ತಿ ಪ್ರಶಸ್ತಿ, ಎಚ್ ಶಾಂತರಾಮ್ ಪ್ರಶಸ್ತಿ, ತಮಿಳುನಾಡಿನಲ್ಲಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಹಾಗೂ ಸಾರಿಗೆ ಇಲಾಖೆಯಿಂದ ಕೊಡಮಾಡುವ ಮಯೂರವರ್ಮ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಶುಶ್ರೂಷಕರು ಸಂಘದ ಕೇಂದ್ರ ಕಚೇರಿಯ ಅಧ್ಯಕ್ಷರಾದ ಎಸ್. ವಿಜಯಮ್ಮ ಮಾತನಾಡಿ, ನಿವೃತ್ತ ಶುಶ್ರೂಷಕರು ಸಂಘವನ್ನು ಸ್ಥಾಪಿಸಿ ಕನ್ನಡ ರಾಜ್ಯೋತ್ಸವವನ್ನು ಒಟ್ಟಾಗಿ ಆಚರಿಸುತ್ತಿರುವುದು ನಿಜಕ್ಕೂ ಸಂತೋಷದ ಸಂಗತಿ ಎಂದರು.


ಸಂಘದ ಅಧ್ಯಕ್ಷರಾದ ಶ್ರೀಮತಿ ಶಿವಮ್ಮ, ಸದಸ್ಯರಾದ ಹೇಮಾವತಿ, ಪ್ರಸನ್ನ ಅವರ ಪುತ್ರಿ ವಿದುಷಿ ಕುಮಾರಿ ಅದಿತಿ ಎಚ್ ಪಿ, ಕೆ ಕುಶಾಲಪ್ಪ, ಶ್ರೀಮತಿ ಅಂಬುಜ, ವಿ ಗೋವಿಂದಾಚಾರಿ, ಶ್ರೀಮತಿ ರಮಾಮಣಿ ಮತ್ತಿತರರು ಉಪಸ್ಥಿತರಿದ್ದರು.

ಇಂದಿನಿಂದ ಮೈಸೂರು ರಂಗಾಯಣದಲ್ಲಿ

ವಾರಾಂತ್ಯ 'ರಂಗಾಯಣಗಳ ನಾಟಕೋತ್ಸವ'

ಬಹುರೂಪಿ ನಾಟಕೋತ್ಸವಕ್ಕೆ ಮುನ್ನ ವಿಶಿಷ್ಟ ರಂಗ ಉತ್ಸವ

ಮೈಸೂರು,ನ.29(ಎಂಟಿವೈ)– ಮೈಸೂರು ರಂಗಾಯಣ ಭೂಮಿಗೀತ ರಂಗಮಂದಿರದಲ್ಲಿ ನ.30ರಿಂದ ಜ.4ರವರೆಗೆ ಪ್ರತಿ ಭಾನುವಾರ 'ರಂಗಾಯಣಗಳ ನಾಟಕೋತ್ಸವ' ಆಯೋಜಿಸಲಾಗಿದ್ದು, ಬಹುರೂಪಿ ನಾಟಕೋತ್ಸವಕ್ಕೂ ಮುನ್ನ ರಂಗಾಯಣದಲ್ಲಿ ರಂಗ ಚಟುವಟಿಕೆ ಗರಿಗೆದರಲಿದೆ ಎಂದು ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು ತಿಳಿಸಿದ್ದಾರೆ.



ಮೈಸೂರಿನ ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು 'ರಂಗಾಯಣಗಳ ನಾಟಕೋತ್ಸವ'ದ ಪೋಸ್ಟರ್ ಬಿಡುಗಡೆ ಮಾಡಿದರು

ಮೈಸೂರಿನ ರಂಗಾಯಣ ಆವರಣದಲ್ಲಿರುವ ಬಿ.ವಿ. ಕಾರಂತ ರಂಗ ಚಾವಡಿಯಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಹುರೂಪಿ ನಾಟಕೋತ್ಸವದ ಸಮುನ್ನುಡಿಯಾಗಿ ರಾಜ್ಯದ ಆರು ರಂಗಾಯಣಗಳ ತಂಡವನ್ನು ಆಹ್ವಾನಿಸಿ, ಮೊದಲ ಬಾರಿಗೆ ರಂಗಾಯಣಗಳ ನಾಟಕೋತ್ಸವ ಆಯೋಜಿಸಲಾಗಿದೆ.

ಈ ನಾಟಕ ಉತ್ಸವದಲ್ಲಿ ಯಕ್ಷ ರಂಗಾಯಣ ಕಾರ್ಕಳ, ಶಿವಮೊಗ್ಗ ರಂಗಾಯಣ, ಧಾರವಾಡ ರಂಗಾಯಣ, ವೃತ್ತಿ ರಂಗಾಯಣ ದಾವಣಗೆರೆ, ಕಲಬುರಗಿ ರಂಗಾಯಣ ಹಾಗೂ ಮೈಸೂರು ರಂಗಾಯಣಗಳಿಂದ ವಾರಾಂತ್ಯದಲ್ಲಿ ರಂಗಾಯಣದ ಭೂಮಿಗೀತ ರಂಗ ಮಂದಿರದಲ್ಲಿ ನಾಟಕಗಳು ಪ್ರದರ್ಶನ ಕಾಣಲಿವೆ ಎಂದು ತಿಳಿಸಿದರು.

ನಾಟಕಗಳ ವಿವರ: ನ.30ರಂದು ಸಂಜೆ 6.30ಕ್ಕೆ ಕಾರ್ಕಳದ ಯಕ್ಷ ರಂಗಾಯಣ ತಂಡದಿಂದ ಬಿ.ಆರ್.ವೆಂಕಟರಮಣ ಐತಾಳ್ ನಿರ್ದೇಶನದಲ್ಲಿ 'ಗುಲಾಮನ ಸ್ವಾತಂತ್ರ್ಯ ಯಾತ್ರೆ', ಡಿ.1ರಂದು ಕಾರ್ಕಳದ ಯಕ್ಷ ರಂಗಾಯಣ ತಂಡದಿಂದ ಶ್ರೀಕಾಂತ್ ಎನ್.ವಿ. ನಿರ್ದೇಶನದ 'ಮಹಾತ್ಮರ ಬರವಿಗಾಗಿ', ಡಿ.7ರಂದು ಮೈಸೂರು ರಂಗಾಯಣ ತಂಡದಿಂದ ಗಣೇಶ್ ಮಂದಾರ್ತಿ ನಿರ್ದೇಶನದ 'ಮೈ ಫ್ಯಾಮಿಲಿ', ಡಿ.14 ರಂದು ಶಿವಮೊಗ್ಗ ರಂಗಾಯಣ ತಂಡದಿಂದ ಚಿದಂಬರರಾವ್ ಜಂಬೆ ನಿರ್ದೇಶನದ 'ನಮ್ಮೊಳಗೊಬ್ಬ ಗಾಂಧಿ', ಡಿ.21ರಂದು ದಾವಣಗೆರೆ ರಂಗಾಯಣ ತಂಡದಿಂದ ಮಾಲತೇಶ್ ಬಡಿಗೇರ್ ನಿರ್ದೇಶನದ 'ಪ್ರತಿ ಗಂಧರ್ವ', ಡಿ.28ರಂದು ಧಾರವಾಡ ರಂಗಾಯಣ ತಂಡದಿಂದ ಡಾ. ಪ್ರಕಾಶ್ ಗರುಡ ನಿರ್ದೇಶನದ 'ಕಂದಗಲ್ಲ ಭಾರತ', ಹಾಗೂ 2026ರ ಜ.4ರಂದು ಕಲಬುರ್ಗಿ ರಂಗಾಯಣ ತಂಡದಿಂದ ಹುಲುಗಪ್ಪ ಕಟ್ಟಿಮನಿ ನಿರ್ದೇಶನದ 'ಕಾಲಚಕ್ರ' ನಾಟಕ ಪ್ರದರ್ಶನವಾಗಲಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಉಪನಿರ್ದೇಶಕ ಡಾ.ಎಂ.ಡಿ. ಸುದರ್ಶನ್, ರಂಗಾಯಣದ ಹಿರಿಯ ರಂಗ ಕಲಾವಿದರಾದ ಕೆ.ಆರ್. ನಂದಿನಿ, ಬಿ.ಆರ್. ಶಶಿಕಲಾ ಇದ್ದರು.

ಜ.12ರಿಂದ ಮೈಸೂರು ರಂಗಾಯಣದ ಬೆಳ್ಳಿ ಬಹುರೂಪಿ ನಾಟಕೋತ್ಸವ

● ಸರ್ಕಾರದಿಂದ 1 ಕೋಟಿ ರೂ. ಬಿಡುಗಡೆ
● ವರ್ಷವಿಡೀ ರಂಗ ಚಟುವಟಿಕೆಗೆ ಚಿಂತನೆ

ಮೈಸೂರು,ನ.29(ಎಂಟಿವೈ)– ಮೈಸೂರು ರಂಗಾಯಣದ ಪ್ರತಿಷ್ಠಿತ ಬಹುರೂಪಿ ನಾಟಕೋತ್ಸವಕ್ಕೆ 25 ವರ್ಷ ಸಂದಿದ್ದು, ಈ ಸಲ 2026ರ ಜನವರಿ 12ರಿಂದ ಆರಂಭವಾಗುವ ಬಹುರೂಪಿ ನಾಟಕೋತ್ಸವಕ್ಕೆ ರಾಜ್ಯ ಸರ್ಕಾರ ಈಗಾಗಲೇ ಒಂದು ಕೋಟಿ ಬಿಡುಗಡೆ ಮಾಡಿದೆ ಎಂದು ರಂಗಾಯಣದ ನಿರ್ದೇಶಕ ಸತೀಶ್ ತಿಪಟೂರು ತಿಳಿಸಿದ್ದಾರೆ.

ಬೆಳ್ಳಿ ಹಬ್ಬದ ಬಹುರೂಪಿ ನಾಟಕೋತ್ಸವವನ್ನು ಅರ್ಥಪೂರ್ಣವಾಗಿ ಏರ್ಪಡಿಸಲು ಉದ್ದೇಶಿಸಲಾಗಿದೆ. ಈಗಾಗಲೇ ರಾಜ್ಯ ಸರ್ಕಾರ ಒಂದು ಕೋಟಿ ರೂ. ಅನುದಾನ ಬಿಡುಗಡೆ ಮಾಡಿದೆ. ಜ.12ರಿಂದ ಆರಂಭವಾಗಲಿರುವ ಈ ಸಾಲಿನ ಬಹುರೂಪಿ ನಾಟಕೋತ್ಸವ ಬಾಬಾ ಸಾಹೇಬ ಆಶಯದೊಂದಿಗೆ ಸಂಘಟಿಸಲಾಗುತ್ತಿದೆ. ಶೀಘ್ರದಲ್ಲಿಯೇ ರಂಗ ಸಮಾಜದ ಸಭೆ ಆಯೋಜಿಸಿ ಬಹುರೂಪಿ ನಾಟಕೋತ್ಸವದ ಬಗ್ಗೆ ತೀರ್ಮಾನಿಸಲಾಗುವುದು ಎಂದರು.

ಬಹುರೂಪಿ ನಾಟಕೋತ್ಸವಕ್ಕೆ ಈಗಾಗಲೇ ವಿವಿಧ ನಾಟಕ ಸಂಸ್ಥೆಗಳಿಗೆ ಆಹ್ವಾನ ನೀಡಲಾಗಿದೆ. ನಾಡಿನ ವಿವಿಧ ರಂಗಾಯಣ, ಹವ್ಯಾಸಿ ರಂಗಭೂಮಿ ತಂಡಗಳಿಂದ ಬಾಬಾ ಸಾಹೇಬ ಆಶಯಕ್ಕೆ ಪೂರಕವಾಗಿರುವ ನೂರಕ್ಕೂ ಹೆಚ್ಚು ನಾಟಕಗಳು ರಂಗಾಯಣಕ್ಕೆ ಬಂದಿದ್ದು, ಬಹುರೂಪಿಗೆ ಅಗತ್ಯವಿರುವ ನಾಟಕಳನ್ನು ಆಯ್ಕೆ ಮಾಡುವ ಪ್ರಕ್ರಿಯೆ ಪ್ರಗತಿಯಲ್ಲಿದೆ. ಹೊರ ರಾಜ್ಯಗಳಿಂದಲೂ ನಾಟಕ, ಕಲಾ ತಂಡಗಳು ಭಾಗವಹಿಸುತ್ತಿವೆ.

ಈ ಬಾರಿಯೂ ಪುಸ್ತಕ ಮಳಿಗೆ, ಕರಕುಶಲ ಮೇಳ, ಆಹಾರ ಮಳಿಗೆ ಇರಲಿದ್ದು, ನಾಟಕೋತ್ಸವದೊಂದಿಗೆ ಚಲನಚಿತ್ರೋತ್ಸವ, ವಿವಿಧ ಪ್ರಕಾರಗಳ ಜಾನಪದ ಕಲೆಗಳ ಪ್ರದರ್ಶನವೂ ಇರಲಿದೆ ಎಂದರು.

ಬಹುರೂಪಿಗೆ 25ರ ಸಂಭ್ರಮದ ಹಿನ್ನೆಲೆಯಲ್ಲಿ ರಂಗಾಯಣದ ವತಿಯಿಂದ ವರ್ಷಪೂರ್ತಿ ನಾಡಿನ ಎಲ್ಲಾ ಜಿಲ್ಲೆಗಳಲ್ಲೂ ನಾಟಕೋತ್ಸವ ಆಯೋಜಿಸಲು ಚಿಂತನೆ ನಡೆಸಲಾಗಿದೆ. ಇದಕ್ಕಾಗಿ ಸರ್ಕಾರಕ್ಕೆ ಮತ್ತಷ್ಟು ಅನುದಾನ ಕೇಳಲಾಗಿದ್ದು, ಸರ್ಕಾರದಿಂದ ಅನುದಾನ ಲಭ್ಯವಾದರೆ ಇದು ಕಾರ್ಯರೂಪಕ್ಕೆ ಬರಲಿದೆ ಎಂದು ತಿಳಿಸಿದರು.

ರಾಷ್ಟ್ರಮಟ್ಟದ ಕುಸ್ತಿ ಪಂದ್ಯಾವಳಿಗೆ ಆಯ್ಕೆ




ಲೋಹಿತ್



ತುಷಾರ್

ಮೈಸೂರು, ನ.29– ಉತ್ತರ ಪ್ರದೇಶದ ಗೋರಖ್‌ಪುರದಲ್ಲಿ ನ.30ರಿಂದ ಡಿ.4ರ ವರೆಗೆ ನಡೆಯುವ ರಾಷ್ಟ್ರಮಟ್ಟದ 19 ವರ್ಷದೊಳಗಿನ ಕುಸ್ತಿ ಪಂದ್ಯಾವಳಿಗೆ ಮೈಸೂರಿನ ಕೆ.ಜಿ.ಕೊಪ್ಪಲು ನಿವಾಸಿ ಸ್ವಾಮಿ ಅವರ ಪುತ್ರ, ಮರಿಮಲ್ಲಪ್ಪ ಪಿಯು ಕಾಲೇಜಿನ ವಿದ್ಯಾರ್ಥಿ ಎಸ್.ಲೋಹಿತ್ ಗೌಡ್(87 ಕೆಜಿ) ಹಾಗೂ ಗ್ರೀಕ್ ರೋಮನ್ ವಿಭಾಗದ ಕುಸ್ತಿ ಸ್ಪರ್ಧೆಯ 72 ಕೆಜಿ ವಿಭಾಗಕ್ಕೆ ಪೈ.ಅರುಣ್‌ಕುಮಾರ್ ಅವರ ಪುತ್ರ, ಪ್ರಮತಿ ಪಿಯು ಕಾಲೇಜಿನ ವಿದ್ಯಾರ್ಥಿ ಎ. ತುಷಾರ್ ಗೌಡ ಆಯ್ಕೆಯಾಗಿದ್ದಾರೆ. ಮೈಸೂರಿನ ಕುಸ್ತಿ ತರಬೇತುದಾರ ಎಲ್. ಮಂಜಪ, ಶಂಕರ್ ಚಕ್ರವರ್ತಿ ಹಾಗೂ ರಾಕೇಶ್, ಶಂಕರ್ ಅವರು ಕುಸ್ತಿ ಪಟುಗಳಿಗೆ ತರಬೇತಿ ನೀಡುತ್ತಾರೆ.



ಸಾರ್ವಜನಿಕರ ಗಮನಕ್ಕೆ

ಮೈಸೂರು ಸಿಟಿ, ದಟ್ಟಗಳ್ಳಿ, ರಾಜರಾಜೇಶ್ವರಿನಗರ, ಅನಂತ ಸುಬ್ಬಯ್ಯ ಎನ್‌ಕ್ಲೇವ್, ಮನೆ. ನಂ.3 ರಲ್ಲಿ ವಾಸವಾಗಿರುವ ಲೇಟ್ ಟಿ.ಪಿ. ವೆಂಕಟರೆಡ್ಡಿ ರವರ ಮಗನಾದ ಸುಮಾರು 43 ವರ್ಷ ವಯಸ್ಸುಳ್ಳ ಶ್ರೀ ಹರ್ಷವರ್ಧನ ಟಿ. ಹಾಗೂ ಹಾಸನ ಜಿಲ್ಲೆ, ಹಿರೀಸಾವೆ ಹೋಬಳಿ, ಹಿರೀಸಾವೆ ಗ್ರಾಮದಲ್ಲಿ ವಾಸವಾಗಿರುವ ಬೊಮ್ಮೇಗೌಡ ರವರ ಮಗನಾದ ಸುಮಾರು 44 ವರ್ಷ ವಯಸ್ಸುಳ್ಳ ಶ್ರೀ ಕೇಶವ ಬಿ. ರವರುಗಳು ಈ ಕೆಳಕಂಡಂತೆ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ್ವತ್ತನ್ನು ಶ್ರೀಮತಿ ಎಂ. ಯಮುನ @ ಎಂ. ನಂದಿನಿ, ಕೋಂ ಲೇಟ್ ಕೃಷ್ಣಗೌಡ, ಬಿನ್ ಲೇಟ್ ಕೆ. ಮರಿಯಪ್ಪ, ಶ್ರೀಮತಿ ತ್ರಿವೇಣಿ, ಕೋಂ ಪಿ. ಸಿ. ವಿಜಯ್ ಕುಮಾರ್, ಬಿನ್ ಲೇಟ್ ಕೆ. ಮರಿಯಪ್ಪ, ಶ್ರೀ ದಿನೇಶ್ ಎಂ. ವಿ. ಬಿನ್ ಲೇಟ್ ಎಂ. ಎನ್. ವೆಂಕಟೇಶ್ ಮತ್ತು ಲೇಟ್ ಶಾರದಮ್ಮ, ಶ್ರೀಮತಿ ನಂದ, ಕೋಂ ಲೇಟ್ ರಾಮಕೃಷ್ಣ, ಬಿನ್ ಲೇಟ್ ಎಂ. ಎನ್. ವೆಂಕಟೇಶ್ ಮತ್ತು ಲೇಟ್ ಶಾರದಮ್ಮ, ಶ್ರೀ ಎಂ. ವಿ. ಸತೀಶ್ ಚಂದ್ರ, ಬಿನ್ ಲೇಟ್ ಎಂ. ಎನ್. ವೆಂಕಟೇಶ್ ಮತ್ತು ಲೇಟ್ ಶಾರದಮ್ಮ, ಶ್ರೀಮತಿ ಎಂ. ವಿ. ಪದ್ಮ ಕೋಂ ಹೆಚ್. ಬಿ. ಸ್ವಾಮಿ, ಬಿನ್ ಲೇಟ್ ಎಂ. ಎನ್. ವೆಂಕಟೇಶ್ ಮತ್ತು ಲೇಟ್ ಶಾರದಮ್ಮ, ಶ್ರೀ ಎಂ. ವಿ. ಪ್ರಕಾಶ್, ಲೇಟ್ ಎಂ. ಎನ್. ವೆಂಕಟೇಶ್ ಮತ್ತು ಲೇಟ್ ಶಾರದಮ್ಮ ರವರಿಂದ ಈ ಕೆಳಗೆ ನಮೂದು ಮಾಡಿರುವ ಷೆಡ್ಯೂಲ್ ಸ್ವತ್ತನ್ನು ಖರೀದಿ ಮಾಡಲು ತೀರ್ಮಾನಿಸಿದ್ದು, ಸದರಿ ಷೆಡ್ಯೂಲ್ ಸ್ವತ್ತಿನ ಬಗ್ಗೆ ಸಾರ್ವಜನಿಕರಲ್ಲಿ ತಿಳಿಸುವುದೇನೆಂದರೆ, ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ವಿಧವಾದ ಹಕ್ಕು, ಅಧಿಕಾರ, ಹಿತಾಸಕ್ತಿ, ತಕರಾರುಗಳು ಇದ್ದ ಪಕ್ಷದಲಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಸೂಕ್ತ ದಾಖಲೆಗಳೊಂದಿಗೆ ಈ ಪ್ರಕಟಣೆ ಪ್ರಕಟವಾದ 7 ದಿನಗಳೊಳಗಾಗಿ ನನ್ನ ಕಛೇರಿಗೆ ಖುದ್ದು ಬಂದು ಆಕ್ಷೇಪಣೆಯನ್ನು (ತಕರಾರು) ಸಲ್ಲಿಸುವುದು.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು. ಇಲವಾಲ ಹೋಬಳಿ, ಕೆ. ಹೆಮ್ಮನಹಳ್ಳಿ ಗ್ರಾಮದ ಸರ್ವೆ ನಂ. 181/4, ಹೊಸ ಸರ್ವೆ ನಂ.181/ಬಿಎಲ್5, ಮತ್ತೊಂದು ಹೊಸ ಸರ್ವೆ ನಂ.266 ರಲ್ಲಿ 5 ಎಕರೆ ಜಮೀನಿಗೆ ಚಕ್ಕುಬಂದಿ:–ಪೂರ್ವಕ್ಕೆ: ರಸ್ತೆ ಮತ್ತು ದೇವರಗುಡ್ಡಶೆಟ್ಟಿ ರವರ ಸ್ವತ್ತು; ಪಶ್ಚಿಮಕ್ಕೆ: ಹರೀಶ್ ರವರ ಸ್ವತ್ತು; ಉತ್ತರಕ್ಕೆ: ಚಂದ್ರಶೇಖರ್ ರವರ ಸ್ವತ್ತು; ದಕ್ಷಿಣಕ್ಕೆ: ರಸ್ತೆ

Sd/- Shivakumar .L.K. B.A.L.,LL.B.,
Advocate, KAR-878/10
#584/A, CH-22/A, Diwans Road,
Chamaraja Mohalla, Mysuru-570004
Date : 29-11-2025 Mob: 9742425250


ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು



ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



ಮರಿಗೌಡ್ರು

ಇವರು ದಿ. 20-11-2025 ನೇ ಗುರವಾರದಂದು ದೈವಾದೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾಗಿ ದಿ. 30-11-2025 ಭಾನುವಾರ ಬೆಳಗ್ಗೆ ನಮ್ಮ ಸ್ವಗೃಹ ಮೈಸೂರು ಬೋಗಾದಿ ಗ್ರಾಮದಲ್ಲಿ ಉತ್ತರ ಕ್ರಿಯಾದಿ ಕಾರ್ಯವನ್ನು ಏರ್ಪಡಿಸಿರುವುದರಿಂದ ಆಹ್ವಾನ ಪತ್ರಿಕೆ ತಲುಪದೇ ಇದ್ದವರು ಇದನ್ನೇ ಆಹ್ವಾನವೆಂದು ತಿಳಿದು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತರು: ಶ್ರೀಮತಿ ನಿಂಗಮ್ಮ, ಮಗ: ಲಾರಿ ಕುಮಾರ್, ಸೊಸೆ, ಮಗಳು, ಮೊಮ್ಮಕ್ಕಳು , ಬೊಮ್ಮೇಗೌಡರ ಕುಟುಂಬರ್ಗದವರು ಹಾಗೂ ಗ್ರಾಮಸ್ಥರು

ಭೋಜನ: ಮಧ್ಯಾಹ್ನ 12.30ಕ್ಕೆ, ಹರಿಕಥೆ : ಸಂಜೆ 7.00 ಗಂಟೆಗೆ

ಪ್ರಕಟಣೆ

ನನ್ನ ಕಕ್ಷಿದಾರರಾದ ಶ್ರೀ ಸಿದ್ದಪ್ಪ ಬಿನ್ ಲೇಟ್ ಬೋರಯ್ಯ (ಬೋರೆ ಗೌಡ), ವಾಸ ಮೈಸೂರು ಜಿಲ್ಲೆ ಮತ್ತು ತಾಲ್ಲೂಕು, ಕಸಬ ಹೋಬಳಿ, ಕಾಮನಕೆರೆ ಹುಂಡಿ ಗ್ರಾಮದ ನಿವಾಸಿಯಾಗಿದ್ದು ಇವರ ಈರಾದೆಯ ಮೇರೆಗೆ ಈ ಮೂಲಕ ತಿಳಿಸುವುದೇನೆಂದರೆ ನನ್ನ ಕಕ್ಷಿದಾರರ ತಂದೆ ಬೋರಯ್ಯನವರು 2003 ರಲ್ಲಿ ನಿಧನ ಹೊಂದಿರುತ್ತಾರೆ. ಹಾಗೂ ಪ್ರಸ್ತುತ 15–08–2025 ರಂದು ನನ್ನ ಕಕ್ಷಿದಾರರ ತಾಯಿಯಾದ ಕೆಂಪ್ಪಮ್ಮನವರು ನಿಧನರಾಗಿರುತ್ತಾರೆ. ಪ್ರಸ್ತುತ ಸಂದರ್ಭದಲ್ಲಿ ನನ್ನ ಕಕ್ಷಿದಾರರ ಪಿತ್ರಾರ್ಜಿತ ಆಸ್ತಿಗಳ ಪೌತಿ ಖಾತೆ ಮಾಡಲು ವಂಶವೃಕ್ಷ ಅರ್ಜಿ ಸಲ್ಲಿಸಿರುತ್ತಾರೆ. ಈ ವಂಶವೃಕ್ಷಕ್ಕೆ ಸಂಬಂಧಿಸಿದಂತೆ ನನ್ನ ಕಕ್ಷಿದಾರರ ತಂದೆಯಾದ ಲೇಟ್ ಬೋರಯ್ಯ (ಬೋರೆ ಗೌಡ) ರವರ ಮೊದಲ ಹೆಂಡತಿ ಮತ್ತು ಅವರ ಮಕ್ಕಳುಗಳ ಬಗ್ಗೆ ಮಾಹಿತಿ ಇಲ್ಲದ ಕಾರಣ, ಈಗ ನನ್ನ ಕಕ್ಷಿದಾರರು ಸಲ್ಲಿಸಿರುವ ವಂಶವೃಕ್ಷಕ್ಕೆ ಯಾವುದಾದರು ಆಕ್ಷೇಪಣೆ ಇದ್ದಲ್ಲಿ ಹಾಗೂ ಬೋರಯ್ಯನ ಇತರೆ ಯಾರಾದರು ಕಾನೂನು ವಾರಸುದಾರರು ಇದ್ದರೆ ಈ ಪ್ರಕಟಣೆಗೊಂಡ 7 ದಿನಗಳ ಒಳಗೆ ವಕೀಲರ ಕಛೇರಿಗೆ ಏನಾದರು ಮಾಹಿತಿ ಇದ್ದಲ್ಲಿ ಸಲ್ಲಿಸತಕ್ಕದು. 7 ದಿನಗಳ ಒಳಗಾಗಿ ಯಾವುದೇ ರೀತಿಯ ಮಾಹಿತಿಗಳು, ಆಕ್ಷೇಪಣೆಗಳು ಬರದೆ ಇದ್ದ ಪಕ್ಷದಲ್ಲಿ ಲೇಟ್ ಬೋರಯ್ಯ ನವರ ಎರಡನೇ ಹೆಂಡತಿಯ ಮಕ್ಕಳುಗಳೆ ಕಾನೂನು ವಾರಸುದಾರರೆಂದು ವಂಶವೃಕ್ಷ ಪಡೆಯಲು ಅರ್ಹರಾಗಿರುತ್ತಾರೆ.

ಸಹಿ/– ಶ್ರೀ ಎನ್. ಜೆ. ಸ್ವಾಮಿ,
ನಂ. 2393, ಎಸ್. ಜೆ. ಕಾಂಪ್ಲೆಕ್ಸ್,
ನ್ಯೂ ಕಾಂತರಾಜ ಅರಸ್ ರಸ್ತೆ,
ಕೆ.ಜಿ. ಕೊಪ್ಪಲ್, ಮೈಸೂರು, ಕರ್ನಾಟಕ.
ಮೊ: 9986750469
ದಿನಾಂಕ: 29–11–2025, ಸ್ಥಳ: ಮೈಸೂರು.



Public Health Research Institute of India (PHRII)

No 4, I Block , Gaganachumbi Double Road, Kuvempunagar, Mysore-570023

ಬೇಕಾಗಿದ್ದಾರೆ

27.11.2025 ರಿಂದ

ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ

ಮೈಸೂರು, ಕುವೆಂಪುನಗರದಲ್ಲಿರುವ ಪಬ್ಲಿಕ್ ಹೆಲ್ತ್ ಇನ್ಸಿಟ್ಯೂಟ್ ಆಫ್ ಇಂಡಿಯಾ ಸಂಸ್ಥೆಯು ವಾರದಲ್ಲಿ 3 ದಿನಗಳು ಬೆಳಿಗ್ಗೆ 9.45 ರಿಂದ ಸಂಜೆ 5.00 ರವರೆಗೆ ಕೆಲಸ ಮಾಡಲು ಅರೆಕಾಲಿಕ ಗುತ್ತಿಗೆ ಆಧಾರದ ಮೇಲೆ ಸಮುದಾಯದಲ್ಲಿ ಸಮುದಾಯ ಆರೋಗ್ಯ ಸಹಾಯಕರಾಗಿ ಕೆಲಸ ಮಾಡಲು ಮಹಿಳಾ ಅಭ್ಯರ್ಥಿಗಳನ್ನು ನೇಮಿಸಿಕೊಳ್ಳುತ್ತಿದೆ. ಕನಿಷ್ಠ ಅರ್ಹತೆ ಎಸ್‌ಎಸ್‌ಎಲ್‌ಸಿ ಪಾಸ್, ಕನ್ನಡದಲ್ಲಿ ಉತ್ತಮ ಸಂವಹನ ಕೌಶಲ್ಯ ಮತ್ತು ಇಂಗ್ಲಿಷ್‌ನ ಮೂಲಭೂತ ಜ್ಞಾನ ಹೊಂದಿರಬೇಕು, ಆಸಕ್ತರು ಬೆಳಿಗ್ಗೆ 10.30 ರಿಂದ ಸಂಜೆ 4.00 ರವರೆಗೆ ಪಿಎಚ್‌ಆರ್‌ಐಐ ಕಚೇರಿ 0821–4506228 ಅನ್ನು ಸಂಪರ್ಕಿಸಿ ಡಿಸೆಂಬರ್ 1 ಸೋಮವಾರದಿಂದ ಡಿಸೆಂಬರ್ 5 ಗುರುವಾರದವರೆಗೆ ಅವರ ರೆಸುಮೆ ಮತ್ತು ಒಂದು ಛಾಯಾಚಿತ್ರ ದೊಂದಿಗೆ ಸಂದರ್ಶನಕ್ಕೆ ಹಾಜರಾಗತಕ್ಕದ್ದು, ಸಂದರ್ಶನವನ್ನು ನಿಗದಿಪಡಿಸಲು ದಯವಿಟ್ಟು ಬೆಳಿಗ್ಗೆ 10.30 ರಿಂದ ಸಂಜೆ 4.00 ರವರೆಗೆ ಕರೆ ಮಾಡಿ.

Sd/- Public Health Research Institute of India, No. 4, Gaganachumbi Double Road, I Block, Kuvempunagar MYSURU-570023.

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಲ್ಲಿ ತಿಳಿಸುವುದೇನೆಂದರೆ ನನ್ನ ಕಕ್ಷಿದಾರರಾದ ಮೈಸೂರು ತಾಲೂಕು, ಕಸಬಾ ಹೋಬಳಿ ಮಂಡಕಳ್ಳಿ ಗ್ರಾಮದ ನಿವಾಸಿ ಶ್ರೀ ಕೆ. ನಾಗ ರಾಜು ಅವರ ಧರ್ಮಪತ್ನಿ ಸುಮಾರು 39 ವರ್ಷದ ಶ್ರೀಮತಿ ಪಾವನ ಇವರು ಷೆಡ್ಯೂಲ್‌ನಲ್ಲಿ ನಮೂದಿಸಿ ರುವ ಸ್ವತ್ತಿನ ಕುರಿತಂತೆ ಮೈಸೂರು ತಾಲೂಕು, ವರುಣ ಹೋಬಳಿ, ಮೇಗಳಾಪುರ ಗ್ರಾಮದ ನಿವಾಸಿ ಲೇಟ್ ಸಿದ್ದರಾಮೇ ಗೌಡ ಅವರ ಮಗ ಸುಮಾರು 45 ವರ್ಷದ ಶ್ರೀ ಚಂದ್ರಶೇಖರ್.ಎಸ್ ಇವರ ಜೊತೆ ಸ್ವಾಧೀನ ಸಹಿತ ಶುದ್ಧ ಕ್ರಯದ ಒಪ್ಪಂದದ ಕರಾರು ಪತ್ರ ಮಾಡಿಕೊಂಡಿರುವುದು ಸರಿ ಅಷ್ಟೇ, ಸದರಿ ಕರಾರಿನ ಅನ್ವಯ ಇನ್ನು ಒಂದು ತಿಂಗಳ ಅವಧಿಯ ಒಳಗಾಗಿ ಶುದ್ಧ ಕ್ರಯ ಪತ್ರವನ್ನು ಜಾರಿಗೆ ತರುತ್ತಾರೆ. ಆದ ಕಾರಣ ಸದರಿ ಷೆಡ್ಯೂಲ್ ಸ್ವತ್ತಿನ ಕುರಿತಂತೆ ಯಾರಿಗಾದರೂ ತಂಟೆ ತಕರಾರು, ಹಕ್ಕು ಬಾಧ್ಯತೆ ಯಾವುದೇ ರೀತಿಯ ಅಧಿಕಾರ ಇದ್ದಲ್ಲಿ ಸದರಿ ವ್ಯಕ್ತಿಗಳು ಇನ್ನು ಎರಡು ವಾರದ ಒಳಗಾಗಿ ನನ್ನ ಕಕ್ಷಿದಾರರನ್ನಾಗಲೀ ಅಥವಾ ನನಗಾಗಲೀ ಸೂಕ್ತವಾದ ದಾಖಲಾತಿಯೊಂದಿಗೆ ಭೇಟಿ ಮಾಡುವುದು. ಇಲ್ಲದೆ ಇದ್ದ ಪಕ್ಷದಲ್ಲಿ ನನ್ನ ಕಕ್ಷಿದಾರರು ಸದರಿ ಸ್ವಾಧೀನ ಸಹಿತ ಶುದ್ಧ ಕ್ರಯದ ಒಪ್ಪಂದದ ಕರಾರು ಪತ್ರದ ಅನ್ವಯ ಮುಂದುವರೆದು ಶುದ್ಧ ಕ್ರಯ ಪತ್ರವನ್ನು ಜಾರಿಗೆ ತರುತ್ತಾರೆ ಎಂದು ಈ ಮೂಲಕ ತಿಳಿಸಲಾಗುತ್ತಿದೆ.

ಷೆಡ್ಯೂಲ್ ಜಮೀನಿನ ವಿವರ

ಚಾಮರಾಜನಗರ ಜಿಲ್ಲೆ ಮತ್ತು ತಾಲ್ಲೂಕು, ಸಂತೇಮರಹಳ್ಳಿ ಹೋಬಳಿ, ಬಾಣಹಳ್ಳಿ ಗ್ರಾಮಕ್ಕೆ ಸೇರಿದ್ದು, ಸ್ವಾಧೀನ ಸಹಿತ ಶುದ್ಧ ಕ್ರಯದ ಒಪ್ಪಂದದ ಕರಾರು ಪತ್ರ ಬರೆಸಿಕೊಂಡಿರುವ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ: ರಾಜ್ಯ ಹೆದ್ದಾರಿ ರಸ್ತೆ ; ಪಶ್ಚಿಮಕ್ಕೆ: ಲಾ. ಹಿಸ್ಸಾ 2 ; ಉತ್ತರಕ್ಕೆ: ಲಾ.ಸ. ನಂ. 51 ಮತ್ತು ಹಿಸ್ಸಾ ನಂ. 2 ; ದಕ್ಷಿಣಕ್ಕೆ: ಬ್ಲಾಕ್ 1. ಈ ಮಧ್ಯೆಯಿರುವ ಖುಷ್ಕಿ ಸರ್ವೆ ನಂಬರ್ 52/4 (ಐವತ್ತೆರಡು ಸಬ್ ನಂಬರ್ ನಾಲ್ಕು) ನೇ ಜಮೀನಿನ ಪೂರ್ತಾ ವಿಸ್ತೀರ್ಣ 1–25 (ಒಂದು ಎಕರೆ ಇಪ್ಪತ್ತೈದು ಗುಂಟೆ) ವುಳ್ಳದ್ದರ ಜಮೀನು.

Sd/- P.L. Rajesh, Advocate
PLR Law Chambers.
Office: No. 77, ‘Chiguru’, Wild Grass Layout, Behind Heritage Club, Vijayanagar 3rd Stage, Mysuru-570 030.
Mob: 9945689965, 9686603961
Email: pl.rajesh.adv@gmail.com
Date: 29-11-2025


ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು.
ಝಾನ್ಸಿಲಕ್ಷ್ಮೀಬಾಯಿ ರಸ್ತೆ, ಮೈಸೂರು – 570 005.
ಸಂಖ್ಯೆ:ಮೈಅಪ್ರಾ:ನಯೋಶಾ:ಭೂಉಬ:ನಯೋ–1: :2025–26 ದಿನಾಂಕ: 29/11/25

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮ ಯೋಜನಾ ಕಾಯ್ದೆ 1961ರ ಪ್ರಕರಣ 69(2)(3) &(4)ರನ್ವಯ

ಮೈಸೂರು ತಾಲ್ಲೂಕು, ವರುಣಾ ಹೋಬಳಿ, ಚೋರನಹಳ್ಳಿ ಗ್ರಾಮದ ಸ.ನಂ.11/1ರ 01ಎಕರೆ 01ಗುಂಟೆ ಪೈಕಿ 00–23.12 ಗುಂಟೆ, 11/2ರ 01ಎಕರೆ 02ಗುಂಟೆ ಪೈಕಿ 00–23.12ಗುಂಟೆ ಮತ್ತು ಚಿಕ್ಕಹಳ್ಳಿ ಗ್ರಾಮದ ಸ.ನಂ.47/2ರ 02ಎಕರೆ 27ಗುಂಟೆ ಪೈಕಿ 00ಎಕರೆ 13.08ಗುಂಟೆ ಒಟ್ಟು 04ಎಕರೆ 30ಗುಂಟೆ ವಿಸ್ತೀರ್ಣದ ಜಮೀನನ್ನು ಕೆ.ಟಿ.ಸಿ.ಪಿ. ಕಾಯ್ದೆ 1961ರ ಪ್ರಕರಣ 69(2)(3) &(4) ರನ್ವಯ ಸಾರ್ವಜನಿಕ ಮತ್ತು ಅರೆಸಾರ್ವಜನಿಕ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗ ನಿಗಧಿಪಡಿಸುವಂತೆ ಮೆ॥ ಬಿ.ವಿ.ಎಲ್ ಡೆವಲಪರ್ಸ್ ಸಲ್ಯೂಷನ್, ಪ್ರತನಿಧಿಯಾದ ಬೆಳ್ಳಂ ಶಶಿಕಲಾ ಇವರು ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ನಿಗಧಿಪಡಿಸುವುದರಿಂದ "ಈ ಜಮೀನುಗಳಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು ಮತ್ತು ಮಧ್ಯಮ ವರ್ಗದವರಿಗೆ ಹಾಗೂ ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತವೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವ ಸಂಧರ್ಭದಲ್ಲಿ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ ಮತ್ತು ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಲಿನ ಪ್ರದೇಶದ ಅಭಿವೃದ್ಧಿ ಹೊಂದುತ್ತದೆ" ಎಂದು ಸಾರ್ವಜನಿಕ ಹಿತಾಸಕ್ತಿ ಕುರಿತು ಮನವಿಯಲ್ಲಿ ತಿಳಿಸಿರುತ್ತಾರೆ. ಸದರಿ ಜಮೀನಿನ ಭೂ ಉಪಯೋಗದ ನಿಗಧಿಪಡಿಸುವ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಸಾರ್ವಜನಿಕರು ಈ ಪ್ರಕಟಣೆಯ ಪತ್ರಿಕೆಯಲ್ಲಿ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ನಗರ ಯೋಜಕ ಸದಸ್ಯರು, ಅಭಿವೃದ್ಧಿ ಪ್ರಾಧಿಕಾರ, ಮೈಸೂರು–570005 ಇವರಿಗೆ ಮುದ್ದಾಂ ಅಥವಾ ನೋಂದಾಯಿತ ಅಂಚೆ ಮೂಲಕ ತಲುಪಿಸಬಹುದಾಗಿದೆ.

KEY PLAN



ಸಹಿ/– ನಗರ ಯೋಜಕ ಸದಸ್ಯರು
ಮೈಸೂರು ಅಭಿವೃದ್ಧಿ ಪ್ರಾಧಿಕಾರ,
ಮೈಸೂರು.